


# ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ - ಬೃಂದಾವನ ಸಂಕೇತ ಗೀತೆ

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ
ಮುನ್ನಡೆಯ ಕನ್ನಡದ ದಾರಿ ದೀವಿಗೆ ನೀಯೆ।

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ
ಕಾಮ ಕ್ರೋಧವನಳಿಸಿ ಕಾಪಾಡು ತಾಯೆ
ಒಂದಾದ ದೇಶದಲಿ ಹೊಂದಿ ಬಾಳದ ಸುತರ
ಹೊಸ ಬೆಸುಗೆಯಲಿ ಬಿಗಿದು ಒಂದುಗೂಡಿಸೆ ತಾಯೆ।

ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ।

ಯಾವೆಣ್ಣೆಯಾದರೂ ಬೆಳಗುವುದೆ ಗುರಿಯೆಂಬ
ತತ್ವವನು ನೀನೆತ್ತಿ ತೋರುಬಾ ತಾಯೆ
ಎದೆಯಾಂತರಾಳದಲಿ ಪುಟಿವ ಕಾರಂಜಿಯಲಿ
ಒಂದಾಗಿ ಕೂಗಲಿ ಕನ್ನಡಾ ಕನ್ನಡಾ।

ಕೃಪೆ: ಜಿ.ವಿ. ಅಯ್ಯರ್



# ಸಂಪಾದಕೀಯ

ನವೆಂಬರ್ ೧೫, ೨೦೧೨

ನ್ಯೂ ಜೆರ್ಸಿಯ ಕನ್ನಡ ಬಾಂಧವರಿಗೆಲ್ಲ ನಮ್ಮ ಗೌರವಪೂರ್ಣ ನಮಸ್ಕಾರಗಳು.

ನಿಮಗೆಲ್ಲರಿಗೂ ಬೃಂದಾವನ ಕನ್ನಡ ಸಂಘದ ವಾರ್ಷಿಕೋತ್ಸವದ ಸಮಾರಂಭಕ್ಕೆ ಸ್ವಾಗತ.  ಈ ಸಂದರ್ಭದಲ್ಲಿ ನಾವು ಬೃಂದಾವನದ ಎಂಟನೇ ವರ್ಷದ ವಾರ್ಷಿಕೋತ್ಸವದ ಸ್ಮರಣ ಸಂಚಿಕೆ ವನವಾಣಿಯನ್ನು ಬಹಳ ಹೆಮ್ಮೆಯಿಂದ ನಿಮ್ಮ ಮುಂದಿಡುತ್ತಿದ್ದೇವೆ.  ಈ ಸಂಚಿಕೆ ಕಳೆದ ಎರಡು ವರ್ಷಗಳ  ಕಾರ್ಯಕ್ರಮಗಳ ಚಿತ್ರ ಹಾಗೂ ಅನೇಕ ಲೇಖನಗಳನ್ನೊಳಗೊಂಡಿದೆ.

ಈ ಹಿಂದಿನ ಎರಡು ವರ್ಷಗಳು ಬಹಳ ಮುಖ್ಯವಾಗಿದ್ದು, ಈ ಚಿಕ್ಕ ಕನ್ನಡ ಸಮುದಾಯ ಅನೇಕ ಹೊಸ ಬೆಳವಣಿಗೆಗಳನ್ನು ಕಂಡಿದೆ ಹಾಗೂ ಬೃಂದಾವನವನ್ನು ಒಂದು ಸಕ್ರಿಯ ಸಂಸ್ಥೆಯಾಗಿ ಬೆಳೆಸಿ ಕನ್ನಡದ ಕಂಪನ್ನು ಎಲ್ಲ ಕಡೆಗೆ ಹರಡಿದೆ.  ಈ ಎರಡು ವರ್ಷಗಳಲ್ಲಿ ಹಲವಾರು ಹೊಸ ಪ್ರಯೋಗಗಳನ್ನು ಅಳವಡಿಸಿಕೊಂಡು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿರುವ ಮೈತ್ರಿ ತಂಡದ ಪದಾಧಿಕಾರಿಗಳ ಕೊಡುಗೆ ಅಮೂಲ್ಯವಾದುದು.

ಎಂಟು ವರ್ಷಗಳ ಹಿಂದೆ ಚಿಕ್ಕದಾಗಿ ಬೆಳೆದ ಕನ್ನಡ ಸಮುದಾಯದ ಧ್ವನಿ ಇಂದು ವಿಶ್ವದಾದ್ಯಂತ ತನ್ನನ್ನು ಗುರುತಿಸಿಕೊಂಡಿದೆ.  ಪ್ರತಿ ವರ್ಷದ ಕಾರ್ಯಕ್ರಮಗಳು ಕೇವಲ ಸಾಂಸ್ಕೃತಿಕ ರಂಗಕ್ಕಷ್ಟೇ ಸೀಮಿತವಾಗಿರದೇ ಉಳಿದ ಕ್ಷೇತ್ರಗಳಲ್ಲೂ ಬೆಳೆದಿರುವುದು ಬಹಳ ಹೆಮ್ಮೆಯ ವಿಚಾರ.  ಉತ್ತರ ಅಮೇರಿಕದ ಕನ್ನಡ ಸಂಘದ ಆಚಾರ-ವಿಚಾರಗಳು ಕೇವಲ ದೊಡ್ಡವರಿಗಷ್ಟೇ ಸೀಮಿತವಾಗಿರದೇ ಯುವ ಪೀಳಿಗೆಯಲ್ಲೂ ಚಟುವಟಿಕೆಯನ್ನು ಹುಟ್ಟಿಸಿರುವುದು ಬಹಳ ಉತ್ತಮ ಬೆಳವಣಿಗೆ.

ಈ ಸಂಚಿಕೆಯನ್ನು ಹೊರತರಲು ನಮಗೆ ಅವಕಾಶ ಮಾಡಿಕೊಟ್ಟ ಬೃಂದಾವನ ಕಾರ್ಯಕಾರಿ ಸಮಿತಿಗೆ ನಮ್ಮ ವಂದನೆಗಳು.  ನಮಗೆ ಲೇಖನಗಳನ್ನು ಸಕಾಲದಲ್ಲಿ ತಲುಪಿಸಿದ ಲೇಖಕರೆಲ್ಲರಿಗೆ ಹಾಗೂ ಈ ಸಂಚಿಕೆಯಲ್ಲಿ ಜಾಹೀರಾತು ಮತ್ತು ಸಂದೇಶಗಳನ್ನು ಕೊಡುವುದರ ಮೂಲಕ ಹಣ ಸಹಾಯ ಮಾಡಿದವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಈ ಸಂಚಿಕೆಯ ಮುದ್ರಣ ಜವಾಬ್ದಾರಿಯನ್ನು ಸುಸೂತ್ರವಾಗಿ ನಿರ್ಮಿಸುವ ಹೊಣೆಹೊತ್ತ ಗುರುಶ್ರೀ ಗ್ರಾಫಿಕ್ಸ್‌ನ ಪ್ರಕಾಶ್ ಮಲ್ಲಳ್ಳಿ ಅವರಿಗೂ ನಮ್ಮ ಅನಂತ ವಂದನೆಗಳು.

ತಮಗೆಲ್ಲ ಮುಂಬರುವ ವರ್ಷಗಳು ಒಳಿತನ್ನು ತರಲಿ.
ಧನ್ಯವಾದಗಳು.

ಸಂಪಾದಕ ಮಂಡಳಿ
ಬೃಂದಾವನ: ಎಂಟನೇ ವಾರ್ಷಿಕೋತ್ಸವ

**ವಿದ್ಯಾ ಮೂರ್ತಿ, ಶೈಲಾ ಪಾತಂಕರ್, ದಾಶರಥಿ ಗಟ್ಟು, ಸತೀಶ್ ಹೊಸನಗರ**



# ಅಧ್ಯಕ್ಷರ ಸಂದೇಶ



ಎಲ್ಲರಿಗೂ ನಮಸ್ಕಾರ,

ತಾಯ್ನಾಡಿನಿಂದ ದೂರ, ಸಪ್ತ ಸಾಗರಗಳನ್ನು ದಾಟಿ ಬಂದ ಕನ್ನಡಿಗರ ಬದುಕಿನಲ್ಲಿ, ಕಲೆ-ನೆಲ-ಜಲ-ಭಾಷೆ-ಬರಹ-ಸಂಸ್ಕೃತಿಯ ಬೇರುಗಳ ಕಳಚಿ ಜಾರದಂತೆ ಎಚ್ಚರಿಕೆ ವಹಿಸುವ, ಹಾಗೂ ಎರಡನೆಯ ಪೀಳಿಗೆಯ ಕನ್ನಡಿಗರು ಮತ್ತು ಅವರ ಮುಂದಿನ ಜನಾಂಗದ ನಡುವೆ ಒಂದು ಸಂಪರ್ಕಕೊಂಡಿಯಾಗುವ ಉದ್ದೇಶದಿಂದಲೇ ಹುಟ್ಟಿಕೊಂಡ ಕರ್ನಾಟಕ ಕಲ್ಚರಲ್ ಆರ್ಗನೈಜ಼ೇಷನ್-ಬೃಂದಾವನ (ಕೆಸಿಒಬಿ), ಕಳೆದ ಎರಡು ವರ್ಷಗಳಲ್ಲಿ ಮಾಡಿದ ಸಾಧನೆಯ ಪಕ್ಷಿನೋಟವನ್ನು ತಮ್ಮ ಮುಂದಿಡಲು ಸಂತೋಷವೆನಿಸುತ್ತಿದೆ.

`ಮೊದಲು ಮಾನವನಾಗು' ಎಂಬ ಕವಿವಾಣಿಯೇ ಇಲ್ಲಿಯ ಕನ್ನಡಿಗರ ಬದುಕಿನ ಜೀವಾಳ. ಚ್ಯಾರಿಟಿ ಎಂಬುದು ಅನುಕಂಪದ ತ್ಯಾಗವಾಗದೆ ಮಮತೆಯ ತ್ಯಾಗವಾಗಬೇಕೆಂಬುದು ನಮ್ಮ ನಿಲುವು. ನಮ್ಮ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಈ ಧರ್ಮಕಾರ್ಯವನ್ನು ನಾವು ಮಾಡಿದ್ದೇವೆ. ಅದು ರೆಡ್ ಕ್ರಾಸ್, ಹೆಲ್ಪ್ ಫ಼ೌಂಡೇಷನ್, ಅಂಧ ಮಕ್ಕಳಿಗಾಗಿ ನಡೆಸಿದ ನಿಧಿ ಸಂಗ್ರಹ, ಬೆಂಗಳೂರಿನ ಸಮರ್ಥನಮ್ ಅಥವಾ ಇನ್ನಾವುದೇ ಸಂಸ್ಥೆಯ ಮೂಲಕ ಕೆಸಿಒಬಿ ಮಾಡಿದ ಸೇವೆಗಳಿರಬಹುದು. ಇದರಲ್ಲಿ ನಮ್ಮ ಮಕ್ಕಳು ಸಹ ಭಾಗವಹಿಸಿರುವುದು ಅವರಲ್ಲಿ ಮೂಡಿದ ಸಾಮಾಜಿಕ ಜವಾಬ್ದಾರಿಗೊಂದು ನಿದರ್ಶನ.

ಅನೌಪಚಾರಿಕತೆ ಮತ್ತು ಸಮಾನ ಮನಸ್ಕತೆ ಸಾಮಾಜಿಕ ಬದುಕಿನಲ್ಲಿ ಎಷ್ಟೊಂದು ಸತ್ವಯುತವಾಗಿ ಕೆಲಸ ಮಾಡುತ್ತವೆ ಎಂಬ ಅಂಶ ಸಾಬೀತಾದುದು ಮೈತ್ರಿ ತಂಡದ ಎರಡು ವರ್ಷಗಳ ಸಾಧನೆಯಿಂದ. ಎರಡು ವರ್ಷಗಳ ಹಿಂದೆ, ಬೃಂದಾವನ ಮೈತ್ರಿ ತಂಡದ ಚುಕ್ಕಾಣಿ ಹಿಡಿದಾಗ ಮುಂದೇನು, ಹೇಗೆ ಎಂಬೆಲ್ಲ ಪ್ರಶ್ನೆಗಳು ಕಾಡುತ್ತಿದ್ದರೂ ನನಗೆ ಹೆಚ್ಚಿನ ಭರವಸೆ ಇದ್ದುದು ಸಮಾನ ಮನಸ್ಸಿನ ನಮ್ಮ ತಂಡದ ಮೇಲೆ. ಅಧ್ಯಕ್ಷನಾಗುವ ಮೊದಲು, ನಿರ್ದೇಶಕ ಮಂಡಳಿಯಲ್ಲಿ ಮಾಡಿದ ಎರಡು ವರ್ಷಗಳ ಕೆಲಸದ ಅನುಭವ ಹಾಗೂ ೨೦೧೦ರ ಅಕ್ಕ ಉತ್ಸವದಲ್ಲಿ ಖಜಾಂಚಿಯಾಗಿ ದುಡಿದ ಅನುಭವ ನನಗೆ ಪ್ರಯೋಜನಕಾರಿಯಾಯಿತು. ಕಲಿಯುಗದಲ್ಲಿ ಸಂಘ ಶಕ್ತಿಯ ಮಹತ್ವ ತಿಳಿಯಲು ದೂರ ಹೋಗಬೇಕಾಗಿಲ್ಲ. ಕಳೆದೆರಡು ವರ್ಷಗಳಿಂದ ಮೈತ್ರಿ ತಂಡ ನಡೆದು ಬಂದ ದಾರಿಯನ್ನು ನೋಡಿದರೆ ಸಾಕು. ಇಲ್ಲಿ ನಾವು ಸಾಧನೆಯ ಹೆಮ್ಮೆಯಿಂದ ಬೀಗುವುದಕ್ಕಿಂತಲೂ ಹೆಮ್ಮೆಯ ಸಾಧನೆಯೊಂದಿಗೆ ಬಾಗಿದ್ದೇವೆ.

ಸಂಸ್ಥೆಯ ಬೆಳವಣಿಗೆ ಎಂದರೆ ಅದರ ಸರ್ವತೋಮುಖ ಅಭಿವೃದ್ಧಿ. ಇದನ್ನು ಮನಗಂಡ ನಿಮ್ಮ ಮೈತ್ರಿ ತಂಡ, ಪ್ರಾರಂಭದಿಂದಲೇ ಹಲವು ಕ್ಷೇತ್ರಗಳಲ್ಲಿ ಏಕ ಕಾಲಕ್ಕೆ ಬದಲಾವಣೆ ತಂದಿದೆ. ಸದಸ್ಯರ ನಡುವೆ ಸಂಪರ್ಕ, ಹೊಸ ಸದಸ್ಯರ ಸೇರ್ಪಡೆ, ಕೆಲಸಗಳ ಹಂಚುವಿಕೆಗೆ ಮೊದಲ ಆದ್ಯತೆ ನೀಡಲಾಯಿತು. ಅದಕ್ಕಾಗಿ ವೆಬ್‌ಸೈಟಿಗೆ ಹೊಸ ನೋಟ, ಸುಲಭದಲ್ಲಿ ನವೀಕರಿಸುವಿಕೆ, ಮತ್ತು ಜಾಹೀರಾತು ಹಾಗೂ ಪ್ರಾಯೋಜಕಪರವಾದ ವೆಬ್ ಸೈಟಿನ ವಿನ್ಯಾಸ ಒಂದೆಡೆ ನಡೆದರೆ, ಇನ್ನೊಂದೆಡೆ, ನಿಸ್ವಾರ್ಥ ಸೇವೆಗಾಗಿ ಯುವಜನ ಸಮಿತಿಗಳ ರಚನೆ, ಬೃಂದಾವನ ಚಟುವಟಿಕೆ ಕುರಿತಾದ ವರದಿಗಳ ಮೂಲಕ ಎಲ್ಲರನ್ನು ತಲಪುವ ಪ್ರಯತ್ನ ನಡೆಯಿತು.

ಆನ್‌ಲೈನ್ ನೋಂದಣಿ, ಕ್ರೆಡಿಟ್ ಕಾರ್ಡ್ ಮೂಲಕ ಎಲ್ಲಾ ಪಾವತಿ ಸೌಲಭ್ಯ, ಸದಸ್ಯರ ಸಕಲ ಮಾಹಿತಿಗಳನ್ನು

ಒಳಗೊಂಡ ಡೇಟಾ ಬೇಸ್, ಪಾರದರ್ಶಕವಾಗಿ ಲೆಕ್ಕ ಪತ್ರ, ದಾಖಲೆ ಪತ್ರಗಳನ್ನು ಇಡುವುದು - ಇವೆಲ್ಲ ಈಗ ಇ-ಬೃಂದಾವನ ಮೂಲಕ ಭದ್ರವಾಗಿವೆ.

ಒಂದು ಕಾರ್ಯಕ್ರಮದ ಆಯೋಜನಾ ಸಫಲತೆ ಅದರ ಪ್ರಚಾರದಿಂದಲೇ ಪ್ರಾರಂಭವಾಗುತ್ತದೆ. ನ್ಯೂಜೆರ್ಸಿಯ ೧೬೦೦ ಮಂದಿಗೆ ಕಾರ್ಯಕ್ರಮಗಳ ವಿವರಗಳು, ಭಿತ್ತಿ ಪತ್ರಗಳನ್ನು ಇ-ಮೈಲ್ ಮೂಲಕ ತಲಪಿಸುವ ವ್ಯವಸ್ಥೆಯಾಗಿದೆ. ನಮ್ಮ ಫೇಸ್‌ಬುಕ್-ಬೃಂದಾವನ ಗ್ರೂಪ್, ೫೦೦ ಮಂದಿಗೆ ನಿರಂತರವಾಗಿ ಮಾಹಿತಿಗಳನ್ನು ಒದಗಿಸುತ್ತಿದೆ. 'ದರ್ಪಣ ತಂಡದ' ಜೊತೆ ಸೇರಿ ಬೃಂದಾವನ ಹೊರತರುತ್ತಿರುವ ಮಾಸಿಕ ಮುಖ ಪತ್ರಿಕೆ ಜನಮನ್ನಣೆ ಪಡೆದಿದೆ. ಈಗಾಗಲೇ ಅನೇಕ ಸಂಚಿಕೆಗಳು ೫೦೦೦ಕ್ಕೂ ಹೆಚ್ಚಿನ ಓದುಗರನ್ನು ತಲಪುತ್ತಿವೆ.

ಸಂಸ್ಥೆಯ ಧ್ಯೇಯವನ್ನು ಗುರಿಯಾಗಿಟ್ಟುಕೊಂಡು ಈ ಬಾರಿ ನಿಮ್ಮ ಸಾಂಸ್ಕೃತಿಕ ಆಯೋಜನಾ ತಂಡ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ನೀಡಿದೆ. ನಮ್ಮ ನೂರಾರು ಮಂದಿ ಕಲಾವಿದರು ಗುಣ ಮಟ್ಟದ ಕಾರ್ಯಕ್ರಮಗಳನ್ನು ನೀಡಿದ್ದಾರೆ. ವಸಂತೋತ್ಸವ, ಗಣೇಶೋತ್ಸವ, ಮಕ್ಕಳೋತ್ಸವ ಜನರಿಗೆ ಮುದ ನೀಡಿವೆ. ಕೂಚುಪುಡಿ, ಭರತ ನಾಟ್ಯಂ ಕಾರ್ಯಕ್ರಮಗಳಲ್ಲಿ ಇಲ್ಲಿನ ಅರಳುವ ಪ್ರತಿಭೆಗಳನ್ನು ನೋಡಿ ಸಂತೋಷಪಡುವ ಅವಕಾಶ ಸಿಕ್ಕಿದೆ. ದೃಷ್ಟಿಯ ಸವಾಲೆದುರಿಸುವ ವಿಕಲ ಚೇತನರ ಕಾರ್ಯಕ್ರಮ, ಬೃಂದಾವನದ ಸಾಮಾಜಿಕ ಜವಾಬ್ದಾರಿಗೊಂದು ನಿದರ್ಶನ. ನಾಟಕಗಳು, ಸಂಗೀತ ಕಾರ್ಯಕ್ರಮಗಳು, ಸಾಮೂಹಿಕ ಗಣೇಶ ಪೂಜೆ, ನಮ್ಮ ಸಂಸ್ಕೃತಿಯ ಪರಿಚಯದ ಇನ್ನೊಂದು ಮುಖವಾಗಿ ಮೂಡಿ ಬಂದಿವೆ. ಸಕ್ರಾಂತಿ, ದಾಸೋತ್ಸವ ಮುಂತಾದ ಕಾರ್ಯಕ್ರಮಗಳು ಮೊದಲ ಬಾರಿಗೆ ಜರುಗಿವೆ.

ಕರ್ನಾಟಕದ ಚಲನಚಿತ್ರ ಹಾಡಿನ ಸಿಡಿ ಬಿಡುಗಡೆ, ಅಥವಾ ಸುಪ್ರಸಿದ್ಧ ಕ್ರೀಡಾಪಟುಗಳ ಜೊತೆ ಮಿಲನ, ಚರ್ಚೆ, ಒಡನಾಟ, ಕರ್ನಾಟಕದ ಜನಪ್ರಿಯ ಹಾಡುಗಾರರು, ಹಾಸ್ಯಪಟುಗಳು, ಕಲಾವಿದರುಗಳ ಉತ್ತಮ ಪ್ರದರ್ಶನಗಳು ಬೃಂದಾವನದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ. ರಾಜೇಶ್ ಕೃಷ್ಣನ್, ಶಮಿತಾ ಮಲ್ನಾಡ್ ಮತ್ತು ರಮ್ಯಾ ವಸಿಷ್ಠರ ಸ್ವರಸಂಜೀವಿನಿ, ನಾಟ್ಯಪ್ರವೀಣೆ ಶಮಾ, ಸುಪ್ರಸಿದ್ಧ ಸಂತೂರು ವಾದಕ ತರುಣ್ ಭಟ್ಟಾಚಾರ್ಯ, ಕೊಳಲುವಾದಕ ಪ್ರವೀಣ್ ಗೋಡ್ಖಿಂಡಿ, ಸಮರ್ಥನಮ್ ಕಾರ್ಯಕ್ರಮ, ಮುದ್ದುಕೃಷ್ಣ, ಕಿಕ್ಕೇರಿ ಕೃಷ್ಣ ಮೂರ್ತಿ, ಅರ್ಚನಾ ಉಡುಪ, ಶ್ರೀನಿವಾಸ ಉಡುಪ, ಮೈಸೂರು ಆನಂದ್ ಮುಂತಾದ ಹಿರಿಯ ಕಲಾವಿದರು ಕಾರ್ಯಕ್ರಮ ನೀಡಿ ನಮ್ಮನ್ನು ರಂಜಿಸಿದ್ದಾರೆ, ಶ್ರೀಮತಿ ವಿದ್ಯಾ ಕೊಳ್ಯೂರರ, ಯಕ್ಷ ಮಂಜೂಷ ತಂಡ ಪ್ರಸ್ತುತ ಪಡಿಸಿದ "ಶ್ರೀಕೃಷ್ಣ ಪಾರಿಜಾತ-ನರಕಾಸುರ ಮೋಕ್ಷ" ಮೊಟ್ಟ ಮೊದಲ ಸಂಪೂರ್ಣ ಹಿಮ್ಮೇಳ ಸಹಿತವಾದ ಯಕ್ಷಗಾನ ಇಲ್ಲಿ ನಡೆದಿ ರುವುದು ಮೊದಲಬಾರಿ. ಅದಲ್ಲದೇ, ನಮ್ಮ ಅನೇಕ ಸದಸ್ಯರು ಹಿಂದೆಂದೂ ನೋಡಿರದ ಕಾರ್ಯಕ್ರಮ ಇದಾಗಿತ್ತು. ಸದಭಿರುಚಿಯ ಹೊಸ ಚಲನಚಿತ್ರಗಳ ವೀಕ್ಷಣೆ ನ್ಯೂ ಜೆರ್ಸಿಯಲ್ಲಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿಯೂ ಅದು ಮುಂದುವರಿಯಲಿದೆ.

ಬೃಂದಾವನದ ಪಿಕ್‌ನಿಕ್, ಕೇವಲ ಒಂದು ಬದಲಾವಣೆ, ಅಥವಾ ಮನೋರಂಜನೆ ಮಾತ್ರವಾಗಿರದೆ, ಮಕ್ಕಳಲ್ಲಿ ಸಾಮಾಜಿಕ ಕಳಕಳಿಯನ್ನು ಮೂಡಿಸುವಲ್ಲಿಯೂ ಸಫಲತೆ ಪಡೆದಿದೆ. ಬಹುಸಂಖ್ಯೆಯಲ್ಲಿ ಭಾಗವಹಿಸಿದ ಸದಸ್ಯರು ಮತ್ತು ಮಕ್ಕಳು ಚ್ಯಾರಿಟಿ ಕೆಲಸಗಳಿಗಾಗಿ ಹಣ ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದುದು ಸಂತೋಷದ ಸಂಗತಿ.

ಕರ್ನಾಟಕದಿಂದ ಹೊರಬಂದಾಗ ನಮ್ಮ ಅಸ್ತಿತ್ವಕ್ಕೊಂದು ವಿಶಿಷ್ಟತೆ ಬರುವುದು ಕನ್ನಡೇತರರ ಜೊತೆ ನಮ್ಮ ಸಂಸ್ಕೃತಿಯನ್ನು ಬೆಸೆದುಕೊಂಡಾಗ. ಓಕ್ ಟ್ರೀ ರಸ್ತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ನಮ್ಮ ಭಾಗವಹಿಸುವಿಕೆ ಈ ಸಾಂಸ್ಕೃತಿಕ ಕೊಡು-ಕೊಳ್ಳುವಿಕೆಯ ಮೊದಲ ಹಂತ.

ಕಾರ್ಯಕ್ರಮಗಳ ಸಂಖ್ಯೆ ಮತ್ತು ಗುಣಮಟ್ಟವಷ್ಟೇ ನಮ್ಮ ಸಾಧನೆಯ ಮೆಟ್ಟಲುಗಳಲ್ಲ. ಸಂಸ್ಥೆಯ ಬೆಳವಣಿಗೆಗೆ, ಅದರ ತಳಹದಿ, ಹಾಗೂ ಹಣಕಾಸು ಕೂಡ ಅಷ್ಟೇ ಮುಖ್ಯ. ಕಾರ್ಯಕ್ರಮಗಳ ಪ್ರಾಯೋಜನಾ ಚೌಕಟ್ಟು ಈಗ ಬೆಳೆದಿದೆ ನಿಜ. ಆದರೆ, ಅದಿನ್ನೂ ಬೆಳೆಯಬೇಕು. ಫಾರೆಸ್ಟ್ ಹಿಲ್ ಫೈನಾನ್ಶಿಯಲ್ ಗ್ರೂಪ್, AXA ಅಡ್ವೈಸರ್ಸ್ ಎಲ್‌ಎಲ್‌ಸಿ, ಉಡುಪಿ ಕೆಫೆ, ಬಿ. ಕೆ. ಫೈನಾನ್ಶಿಯಲ್ ಸರ್ವಿಸಸ್, ಎವಿಎಸ್ ಕೆಮಿಕಲ್ಸ್, ಐಕಾನ್ ಸಾಫ್ಟ್ ಕನ್ಸಲ್ಟಿಂಗ್ ಗ್ರೂಪ್, ಕ್ಯಾಂಡರ್ ಇಂಟರ್‌ನ್ಯಾಷನಲ್, ನ್ಯೂಯಾರ್ಕ್ ಲೈಫ್ ಇನ್ಸ್ಯೂರೆನ್ಸ್, ಬ್ಯಾಂಕ್ ಆಫ್ ಅಮೇರಿಕಾ ಮುಂತಾದ ಸಂಸ್ಥೆಗಳು ಮಾತ್ರವಲ್ಲ, ಕರ್ನಾಟಕದ ಕೆಲವು ಸಂಸ್ಥೆಗಳು ಕೂಡ ಪ್ರತ್ಯಕ್ಷ, ಹಾಗೂ ಪರೋಕ್ಷ ಪ್ರಾಯೋಜನೆ ನಡೆಸಿವೆ. ಬೃಂದಾವನ ಸಂಸ್ಥೆ ಬೆಳೆದಂತೆ, ನಮ್ಮ ಕನಸುಗಳು ಹಾಗೂ ಜವಾಬ್ದಾರಿಗಳು ಹೆಚ್ಚುತ್ತಿವೆ, ಮುಂದಿನ ಪೀಳಿಗೆಗೆ ನಾವು ಗಳಿಸಿ-ಉಳಿಸಿ -ಬೆಳೆಸಿ ಕೊಡಬೇಕಾದುದು ಬಹಳಷ್ಟಿದೆ. ಸಾಂಸ್ಥಿಕವಾಗಿ ನಾವು ಲಾಭೋದ್ದೇಶಿತ ಸಂಸ್ಥೆಯಲ್ಲ. ೫೦೧ (ಸಿ) ೩ ಅಡಿಯಲ್ಲಿ ನಾವು ನಾನ್-ಪ್ರಾಫಿಟ್ ಚಾರಿಟೆಬೆಲ್ ಆರ್ಗನೈಜ಼ೇಷನ್ ಎಂದು ನೋಂದಾಯಿಸಲ್ಪಟ್ಟಿದ್ದೇವೆ. ಆಧ್ಯಾತ್ಮ, ತತ್ವ, ಸಿದ್ಧಾಂತ, ಜೀವನ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸುವ ದಿಶೆಯಲ್ಲಿ ಹೊಸದೊಂದು ಸಮಿತಿಯ ರಚನೆಯೂ ಆಗಿದೆ. ಇಂದಿನ ಮಕ್ಕಳೇ ಮುಂದಿನ ಜನಾಂಗವಾದ್ದರಿಂದ, ಅವರನ್ನು ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಲು ಬೃಂದಾವನ ಮೈತ್ರಿ-ಮರಿ ತಂಡದ ರಚನೆಯಾಗಿದೆ. ಯುವಕರ ಹುಮ್ಮಸ್ಸು-ಶ್ರದ್ಧೆ ಎರಡನ್ನು ಇತ್ತೀಚಿನ ದಿನಗಳಲ್ಲಿ ಕಂಡಿದ್ದೇವೆ. ಯುವಕರು ಕೇವಲ ಸ್ವಯಂ ಸೇವಕರಾಗಿ ಮಾತ್ರವಲ್ಲ, ಕಾರ್ಯಕ್ರಮಗಳ ಆಯೋಜನೆ, ಬಜೆಟಿಂಗ್ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಸಹ ಸಫಲತಾಪೂರ್ವಕ ಮಾಡಿದ್ದಾರೆ. ಹಳೆ ಬೇರು, ಹೊಸ ಚಿಗುರು!

ಇಷ್ಟಾದರೂ ನಮ್ಮ ಆಸ್ತಿ ಎಂದರೆ, ಜನರ ಸೌಹಾರ್ಧತೆ, ಸಹಯೋಗ, ಸಹಕಾರ. ಮೈತ್ರಿಯ ನಿರ್ದೇಶಕ ಮಂಡಳಿ ಒಗ್ಗಟ್ಟಾಗಿ ದುಡಿದಿದೆ. ಆದರೆ, ಅವರ ಮನೆಯವರ ಸಹಾಯ-ಸಹಕಾರ ನಮ್ಮ ಸಫಲತೆಯ ಗುಟ್ಟು ಎಂಬುದನ್ನು ನಾನು ಒಪ್ಪಿಕೊಳ್ಳಲೇ ಬೇಕು. ನ್ಯೂಜೆರ್ಸಿಯ ಅಕ್ಕ ಕಾರ್ಯಕಾರೀ ಸದಸ್ಯರ ಕೊಡುಗೆಯನ್ನು ಸ್ಮರಿಸಿಕೊಳ್ಳುತ್ತೇನೆ.

ಬೃಂದಾವನ ಕನ್ನಡ ಕೂಟ ಬೆಳೆದು ಬಂದ ಹಾದಿಯಲ್ಲಿ ಮುಂದುವರಿದರೆ, ನಮ್ಮದೇ ಆದ ಒಂದು ವಿವಿಧೋದ್ದೇಶಿತ ಸಾಂಸ್ಕೃತಿಕ ಸಮುಚ್ಚಯವನ್ನು ಹೊಂದಬೇಕೆಂಬ ಆಶಯ ಮೂಡುವುದು ಸಹಜ. ಸಾಕಷ್ಟು ವಿಸ್ತೀರ್ಣವಾದ ನಮ್ಮದೇ ನಿವೇಶನ ಒಂದರಲ್ಲಿ, ಆಟೋಟ, ಕ್ರೀಡೆ, ಧ್ಯಾನ, ಯೋಗ, ಕಲಾಗಾರ, ವಾಚನಾಲಯ, ಜ್ಞಾನಾಗಾರ, ಸುಸಜ್ಜಿತ ಸಭಾಂಗಣ, ತರಬೇತಿ ಶಿಬಿರಗಳು ಹಾಗೂ ಕಲಾವಿದರಿಗೊಂದು ವಸತಿಯ ನಿರ್ಮಾಣವಾದರೆ, ಬದುಕು ಸಾರ್ಥಕ.

**ಇಂತಿ ನಿಮ್ಮ,**
**ಸಂತೋಷ್ ಕುಮಾರ್ ಕಡ್ಲೇಬೇಳೆ**
**ಅಧ್ಯಕ್ಷರು**
2010-**೨೦೧೨ ಕಾರ್ಯಕಾರಿ ಸಮಿತಿ (ಮೈತ್ರಿ ತಂಡ)**

# ಕಾರ್ಯದರ್ಶಿಗಳ ವರದಿ



'Time flies' is a famous saying and my 2 years as a Board Member of Brindavana Maitri Tanda will remain the most cherished part of my memories. I still remember the night when election results were announced and every single BOD was a male member on the stage. I felt outnumbered, nervous and was not sure how this will turn out to be mostly because a lot of them were just known faces to me. I did not know them really well and had minimal interation during AKKA WKC 2010.

With these mixed feelings, I started my journey. Our team still did not have a name. The most appealing part of our team has been TEAM SPIRIT. Right from coming up with a name for the team everyone of us felt very involved and well informed. This made everyone comfortable. Our team name, MAITRI Tanda, Maitri personifying Friendship, was the most appropriate name and all of us concurred instantly.

Every program in Maitri was meticulously planned well ahead of time involving every single team member. Our time and input was very valuable and we instantly bonded with each other and felt very comfortable sharing each other's views. Everyone had a role to play which was very important. Our responsibility towards building a great team, working towards bringing all the Kannadiga's together and providing high quality programs became our instant goal. Many young fresh ideas such as online registrations, online payments, accepting credit cards at the venue, new publicity ideas such as "Facebook Page" were instantly implemented.

Our first program, Vasanthotsava was a huge success with a great turnout, excellent participation and great feed back from all the attendees. There was one major observation we made from the first couple of programs, that of Youth participation!. The commitment these young high schoolers, college freshmen had towards helping all of us selflessly from set-up, audio/visual, back-stage, food committee to clean up was amazing! This gave birth to the formation of Mari Maitri Tanda, official Brindavana Youth Committee. This put a perspective to all the great effort put forth by the Youth

Committee. We provided written recognition to all their work and effort which greatly helped in their high school/college career. Youth are very excited to be a part of the committee, actively take part in conference calls, give their input and help us plan and execute events as a part of their volunteer work. Their leadership, planning and event management skills will be very useful in their future endeavor.

Personally, Brindavana has provided me with a great opportunity to meet and interact with new friends, well know artists and dignitaries. It has also been a soulful experience raising funds for the needy. It was a touching experience to see little children raise funds for Red Cross, selling lemonade and ice-cream. Hurricane Sandy was another heartening experience altogether and yet showed how Kannadigas come together very generously in times of need. Deepest gratitude for all your support and donations.

My vision for Brindavana: Members of Brindavana should feel the connect to the organization and show much enthusiasm in participating in the events hosted. It is for members to pause and understand that a team of very dedicated Board members spend a lot of their family time and sacrifice much to provide their voluntary services to this great organization. It is all done in the interest of brining nearby Kannadigas together under one platform, celebrating our culture, tradition as one Big family. Needless to say we are passing down all these great values to our children by exposing them to our culture and having them participate in various programs. We welcome you to share your views and opinion and help improvise in any which way possible. We have many new, young families moving in every year and we encourage all of you to spread the word across, bring new members, enjoy quality time with quality programs and great food as one big family of Kannadigas in the US. As always, life is a roller coaster ride with ups and downs. It's for all of us to remain positive, contribute to the success and help the organization sustain and grow.

I do hope to see all of you over and over again as we make great memories together.

**Dhanyavadagalu,**
**Padmini Hemanth**
**Secretary**
**2011-2012 Maitri Tanda**

# ಸಾಂಸ್ಕೃತಿಕ ತಂಡದ ಪರವಾಗಿ...



ಎಲ್ಲರಿಗೂ ನಮಸ್ಕಾರ.

ನನ್ನ ನೆಲೆನಾಡಿನ ತವರಾದ ಬೃಂದಾವನದ ಉದ್ಘಾಟನೆಯಾದ ದಿನವಿನ್ನೂ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೇ ನಿಂತಿದೆ. ಅಂದಿನಿಂದ ಇಂದಿನವರೆಗೂ ಬೃಂದಾವನದ ಸದಸ್ಯಳಾಗಿ, ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಬೃಂದಾವನ ನಡೆಸಿಕೊಡುತ್ತಿರುವ ಉತ್ತಮ ಕಾರ್ಯಕ್ರಮಗಳನ್ನು ನೋಡಿ, ರಂಜಿಸಿ, ಮನಸಾರೆ ಮೆಚ್ಚಿರುವ ಅನೇಕ ಸದಸ್ಯರಲ್ಲಿ ನಾನೂ ಒಬ್ಬಳು. ನಮ್ಮ ಕನ್ನಡದ ಶ್ರೀಮಂತ ಸಂಸ್ಕೃತಿಯನ್ನು ನಾವೂ ಸವಿದು, ನಮ್ಮ ಮಕ್ಕಳಿಗೂ ನಮ್ಮ ಸಂಸ್ಕೃತಿಯನ್ನು ಪರಿಚಯಿಸಲು ಬೃಂದಾವನ ನನ್ನ ಹಾಗೂ ನನ್ನ ಕುಟುಂಬದವರ ಜೀವನದಲ್ಲಿ ಬಹಳ ಮಹತ್ವದ ಪಾತ್ರವಹಿಸಿತು. ಬೃಂದಾವನದಿಂದ ಬರುವ ಯಾವ ಈಮೇಲ್‌ಗಳನ್ನೂ ತಿರಸ್ಕರಿಸದೆ ತಕ್ಷಣ ಓದುವ ಪರಿಪಾಠವನ್ನು ನಾನು ಬೆಳೆಸಿಕೊಂಡಿದ್ದೇನೆ.

ಎರಡು ವರ್ಷಗಳ ಹಿಂದೆ ಬೃಂದಾವನದಿಂದ ಬಂದ ಒಂದು ಈ ಮೇಲ್ ತೆಗೆದು ಓದಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಬೃಂದಾವನದ ೨೦೧೧-೨೦೧೨ರ ಚುನಾವಣೆಯಲ್ಲಿ ಅಧ್ಯಕ್ಷಿಣಿ ಹಾಗು ಪದಾಧಿಕಾರಿಯ ಸ್ಥಾನಕ್ಕೆ ನನ್ನ ಹೆಸರನ್ನು ಸೂಚಿಸಿದ್ದರು. ಆದರೆ ನಾನು ಅದನ್ನು ಹಿಂತೆಗೆದುಕೊಂಡು ಬೃಂದಾವನದಲ್ಲಿ ಒಬ್ಬ ಸಾಮಾನ್ಯ ಸದಸ್ಯಳಾಗಿ, ಯಾವ ಹೆಸರು, ಅಧಿಕಾರಗಳಿಲ್ಲದೆ ನನ್ನ ಅಳಿಲ ಸೇವೆಯನ್ನು ನನ್ನ ಕೈಲಾದ ಮಟ್ಟಿಗೆ ಮಾಡಬೇಕೆಂಬುದು ಮಾತ್ರ ನನ್ನ ಇಚ್ಛೆಯಾಗಿತ್ತು. ೨೦೧೧ರಲ್ಲಿ ಬೃಂದಾವನದ ಆಶ್ರಯದಲ್ಲಿ ನಡೆದ ಆರನೇ ಅಕ್ಕ ವಿಶ್ವಕನ್ನಡ ಸಮ್ಮೇಳನದಲ್ಲಿ ಕೆಲವು ಸಮಿತಿಗಳಲ್ಲಿ ಸದಸ್ಯೆಯಾಗಿ ಕೆಲಸಮಾಡಿ ಸ್ವಲ್ಪಮಟ್ಟಿಗೆ ಅನುಭವವನ್ನು ಪಡೆದುಕೊಂಡಿದ್ದೆ. ಅದರ ಆಧಾರದ ಮೇಲೆ ಹಲವರು ನನ್ನನ್ನು ಗುರುತಿಸಿ ನನ್ನನ್ನು ಗೌರವಾನ್ವಿತ ನಿರ್ದೇಶಕಿಯಾಗಿ ನೇಮಿಸಿದರು. ಹೊಸ ಸಮಿತಿಯಲ್ಲಿ ಅನೇಕರ ಪರಿಚಯವಿಲ್ಲದಿದ್ದ ಕಾರಣ ಅನ್ಯಮನಸ್ಸಿನಿಂದಲೇ ಈ ಪದವಿಯನ್ನು ನಾನು ಒಪ್ಪಿಕೊಂಡೆ. ಆದರೆ ನೂತನ ಅಧ್ಯಕ್ಷರಾಗಿ ಬಂದ ಶ್ರೀ ಸಂತೋಷ್ ಕುಮಾರ್ ಕಡ್ಲೇಬೇಳೆಯವರ ಕಾರ್ಯವೈಖರಿಯ ಪರಿಚಯವಾದಮೇಲೆ ನನಗೆ ಸ್ವಲ್ಪ ನಿರಾತಂಕವಾಯಿತು. ಅವರ ನಾಯಕತ್ವದಲ್ಲಿ ಮಾಡಿದ ಕೆಲಸ ನನಗೆ ಹೊಸ ಅನುಭವವನ್ನು ತಂದುಕೊಟ್ಟಿತು. ಸಂಬಂಧಪಟ್ಟ ಆಯಾ ಸಮಿತಿಯೊಂದಿಗೆ ಚರ್ಚಿಸಿ, ತಂಡದ ಸಲಹೆ ಪಡೆದೇ ಸಂತೋಷ್ ನಿರ್ಧಾರಗಳನ್ನು ತೆಗೆ-ದುಕೊಳ್ಳುತ್ತಿದ್ದರು. ಇದು ಬಹುಶಃ ಅವರಿಗೆ ಟೀಮ್‌ವರ್ಕ್‌ನ ಮೇಲಿದ್ದ ಭರವಸೆಯೇನೋ ಎಂಬುದು ನನ್ನ ಅನಿಸಿಕೆ. ಅವರ ಭರವಸೆಗೆ ಅರ್ಹವಾಗಿದ್ದ ತಂಡವೂ ನಮ್ಮ ಅಪೂರ್ವವಾದ 'ಮೈತ್ರಿ ತಂಡ'. ತಂಡದ ಪ್ರತಿಯೊಬ್ಬ ಸದಸ್ಯರಲ್ಲೂ ಹೊಸ ಹುರುಪು, ತುಂಬು ಸ್ನೇಹ, ಆತ್ಮೀಯತೆಯನ್ನು ಕಂಡು ನನಗಿದ್ದ ಅಪರಿಚಿತ ಭಾವ ಸ್ವಲ್ಪಸ್ವಲ್ಪವಾಗಿ ಮಾಯವಾಯಿತು. ತಂಡದ ಎಲ್ಲ ಸದಸ್ಯರೂ ಒಬ್ಬರಿಗಿಬ್ಬರು ಸಹಕರಿಸಿ, ಅವರವರ ಸಮಿತಿಗಳಿಗೆ ಸಂಬಂಧ ಪಟ್ಟ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಳ್ಳುತ್ತಿದ್ದ ಕಾರಣ ಎಲ್ಲ ಕಾರ್ಯಕ್ರಮಗಳಲ್ಲೂ ಶಿಸ್ತು, ಸಂಯಮ, ಸಮಯ ಪ್ರಜ್ಞೆ ಇತ್ತೆಂದು ಅನೇಕ ಸದಸ್ಯರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದರು. ಸಮಿತಿಯಲ್ಲಿ ನಡುನಡುವೆ ತಲೆದೋರುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಅಲ್ಲಲ್ಲೇ ಸರಿಪಡಿಸಿಕೊಂಡು, ಯಾವುದೇ ರಾಜಕೀಯಗಳಿಲ್ಲದ ಮೈತ್ರಿ ತಂಡದೊಂದಿಗೆ ಕೆಲಸಮಾಡಿದ್ದು ನನ್ನ ಅದೃಷ್ಟವೆಂದೇ ನಾನು ಭಾವಿಸುತ್ತೇನೆ. ಎರೆಡು ವರ್ಷಗಳು ಎರಡು ಘಳಿಗೆಯಂತೆ ಕಳೆದು ಹೋದವು. ಬೃಂದಾವನದ ನಿಮ್ಮ ಮೈತ್ರಿ ತಂಡ ನಿಮ್ಮೆಲ್ಲರಿಗೂ ತಕ್ಕ ಮಟ್ಟಿಗಾದರೂ ಒಳ್ಳೆಯ ಮನರಂಜನೆ ಯನ್ನು ನೀಡಿ, ನಿಮ್ಮೆಲ್ಲರ ಮನಸ್ಸನ್ನು ಸಂತೋಷ ಪಡಿಸಿದ್ದಲ್ಲಿ ನಮ್ಮ ಇಡೀ ತಂಡದ ಶ್ರಮ ಸಾರ್ಥಕವಾದಂತೆ. ಈ ಎರಡು ವರ್ಷಗಳು ಬೃಂದಾವನವೆಂಬ ಈ ಹೂದೋಟಕ್ಕೆ ನೀರೆರೆಯಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಎಲ್ಲ ಸಮಿತಿಯ ಸದಸ್ಯರಿಗೂ ಹಾಗು ಬೃಂದಾವನದ ಸದಸ್ಯರಿಗೂ ನನ್ನ ಧನ್ಯವಾದಗಳು. ಮೈತ್ರಿ ತಂಡಕ್ಕೆ ಪ್ರೋತ್ಸಾಹಿಸಿದಂತೆ ಮುಂದಿನ ಎರಡು ವರ್ಷಗಳು ನಿಮ್ಮ ಸೇವೆಗೆ ಸಜ್ಜಾಗುತ್ತಿರುವ ತಂಡವನ್ನೂ ಪ್ರೋತ್ಸಾಹಿಸಿ, ಬೃಂದಾವನ ನಿರಂತರವಾಗಿ ಬೆಳೆಯಲು ನೀವೆಲ್ಲರೂ ಸಹಕರಿಸುವಿರೆಂಬ ನಂಬಿಕೆ ನನಗಿದೆ. ಮುಂದಿನ ಬೃಂದಾವನದ ಕಾರ್ಯಕ್ರಮಗಳಲ್ಲಿ ನಿಮ್ಮೆಲ್ಲರನ್ನೂ ಭೇಟಿಯಾಗುವ ನಿರೀಕ್ಷೆಯಲ್ಲಿ...

**ಇಂತಿ ನಿಮ್ಮ,**

**ವಿದ್ಯಾ ಶ್ರೀನಿಧಿಮೂರ್ತಿ,**

**ಗೌರವಾನ್ವಿತ ನಿರ್ದೇಶಕಿ, ಬೃಂದಾವನ 'ಮೈತ್ರಿ ತಂಡ' ೨೦೧೧-2012**

# ಖಜಾಂಚಿ ವರದಿ



ಹಣವಿದ್ದಾಗಲೆ ದಾನ
ನೆಣವಿದ್ದಾಗಲೆ ಕಾಯಕ
ಭಯವಿದ್ದಾಗಲೆ ಭಕ್ತಿ
ಚಿತ್ತವಿದ್ದಾಗಲೆ ಪೂಜೆ
ಶ್ರಿ ಗುರು ಬ್ರಹ್ಮ ನಿಮ್ಮಿಂದಲೆ ನಮ್ಮ್ ಸಂಘ ಎಂಬೆ

ಶ್ರೀಮಂತ ಸಂಸ್ಕೃತಿಯ ತವರೂರು, ಕಲೆ-ಸಾಹಿತ್ಯ-ಸಂಗೀತ-ಸಂಪ್ರದಾಯ ಪರಂಪರೆಯ ನೆಲೆಬೀಡು, ಕವಿ-ಪುಂಗವ-ಸಾಹಿತಿಗಳು, ವಿದ್ವಾಂಸರು, ಹರಿದಾಸರು, ಶರಣರು ಬಾಳಿ ಬೆಳಗಿದ ಗಂಡು ಮೆಟ್ಟಿನ ಕನ್ನಡ ಭಾಷಿಗರ ಬೃಂದಾವನ ಸಂಘ ಸ್ಥಾಪನೆಗೊಂಡು ೮ ವರ್ಷಗಳ ಯಶಸ್ವಿ ಮೈಲುಗಲ್ಲನ್ನು ಸ್ಥಾಪಿಸಿದೆಯೆಂದು ಹೇಳಲು ನನಗೆ ತುಂಬಾ ಹೆಮ್ಮೆ ಎನಿಸುತ್ತದೆ.

ಮಾನ್ಯ ಕನ್ನಡಾಭಿಮಾನಿಗಳೇ, ನಮ್ಮ ಸಂಘ ಕಳೆದ ಎರಡು ವರ್ಷಗಳಿಂದ ಹಮ್ಮಿಕೊಂಡಿರುವ ಈ ಕಾರ್ಯಕ್ರಮಗಳ ಯಶಸ್ವಿ ಮಹಾಪೂರದ ಹಣಕಾಸಿನ ವರದಿಯ ಬುತ್ತಿಗಂಟನ್ನು ಸಂಕ್ಷಿಪ್ತವಾಗಿ ತಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವೆನಿಸುತ್ತದೆ.

ನಾನು ಬೃಂದಾವನ ಸಂಸ್ಥೆಯ ಖಜಾಂಚಿಯಾಗಿ ೨೦೧೧ ರಿಂದ ಸೇವೆ ಸಲ್ಲಿಸುತ್ತಿದ್ದೇನೆ. ನಾವು ಈ ಅವಧಿಯಲ್ಲಿ ಹಣಕಾಸು ವ್ಯವಹಾರದಲ್ಲಿ ಹಲವಾರು ಹೊಸ ವಿಧಿ ವಿಧಾನಗಳನ್ನು ಪ್ರಾರಂಭಿಸಿದ್ದೇವೆ. ಸದಸ್ಯರ ನೋಂದಣಿಕೆ ಮತ್ತು ಎಲ್ಲಾ ಲೆಕ್ಕ ಪತ್ರಗಳನ್ನು ಗಣಕಯಂತ್ರೀಕರಣಗೊಳಿಸಿದ್ದೇವೆ. ಇದರಿಂದ ಇವತ್ತು ನಮ್ಮ ಸಂಸ್ಥೆಯ ಹಲವಾರು ಕಾರ್ಯಕ್ರಮಗಳು ಬಹಳ ಸುಲಭವಾಗಿ ನಡೆಸಿಕೊಡಲು ಅನುಕೂಲವಾಗುತ್ತಿದೆ.

ಪ್ರಥಮ ಹಂತದಲ್ಲಿ ಹಲವಾರು ಸದಸ್ಯರ ಅವದಿ ಮುಗಿದಿದ್ದರಿಂದ ನಮ್ಮ ಅವದಿಯಲ್ಲಿ ನಾವು ಮೊದಲಿಗೆ ಅತ್ಯಂತ ಕಡಿಮೆ ಸಂಖ್ಯೆ ಸದಸ್ಯರನ್ನು ಹೊಂದಿದ್ದೆವು. ಕೇವಲ ೨ ವರ್ಷಗಳ ಅವಧಿಯಲ್ಲಿ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದು ಮತ್ತು ಆರ್ಥಿಕವಾಗಿ ಸಂಘವು ಇಂದು ಬಲಿಷ್ಠವಾಗಿದೆಯೆಂದು ಅಭಿಮಾನದಿಂದ ಹೇಳುತ್ತೇನೆ. ನಮ್ಮ ಅವಧಿಯಲ್ಲಿ ಜೀವನಪರ್ಯಂತ ಸದಸ್ಯರ ಸಂಖ್ಯೆ ದ್ವಿಗುಣವಾಗಿದೆ. ಇದಕ್ಕೆ ಕಾರಣ ಸಂಘದಲ್ಲಿಯ ಅನುಭವೀ ಕಾರ್ಯಕಾರಿ ಸದಸ್ಯರು, ಹಗಲಿರುಳು ಮನೆ ಮಠ ಬಿಟ್ಟು ದುಡಿದ ನಮ್ಮ ಅಧ್ಯಕ್ಷರು, ಹೆಜ್ಜೆಹೆಜ್ಜೆಗೂ, ಸಲಹೆ-ಸೂಚನೆ ನೀಡುವ ಧರ್ಮದರ್ಶಿಗಳು ಮತ್ತು ಸಹನಶೀಲವುಳ್ಳ, ಆಸಕ್ತ, ಚುರುಕಾದ ಸದಸ್ಯರಾಗಿ ತಾವುಗಳು ಇರುವುದರಿಂದ ಸಂಘವು ಇಷ್ಟೊಂದು ಹೆಮ್ಮರವಾಗಿ ಬೆಳೆದು ನಿಂತಿದೆ ಎಂದು ಹೇಳಲು ಅಭಿಮಾನವೆನಿಸುತ್ತದೆ.

ಈ ಸಂದರ್ಭದಲ್ಲಿ ಬಸವಣ್ಣನವರ ವಚನವನ್ನು ವ್ಯಕ್ತಪಡಿಸುವುದು ಸೂಕ್ತವೆನಿಸುತ್ತದೆ:
ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನುವುದಯ್ಯ
ನೀನೊಲಿದರೆ ಸಕಲ ಪಡಿ-ಪದಾರ್ಥ
ಇದರಲ್ಲಿಪ್ಪುವುದು ಕೂಡಲ ಸಂಗಮದೇವಾ ಎಂಬಂತೆ

ಈ ಸಂಘದ ಸರ್ವ ಸದಸ್ಯರು ಹಾಗು ಸಂಘದ ಕ್ಷೇಮಾಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ತನು-ಮನ-ಧನದಿಂದ ಸಹಾಯವನ್ನು ಸಲ್ಲಿಸಿರುವದರಿಂದ ಸಂಘವು ಆರ್ಥಿಕವಾಗಿ ಬಲಿಷ್ಠವಾಗಿದೆ ಮತ್ತು ಸಂಘಕ್ಕೆ ಸಂದಾಯವಾದ ಹಣವನ್ನು ಅತ್ಯಂತ ಪಾರದರ್ಶಕವಾಗಿ ಬಳಸಲಾಗಿದೆ. ಸಂಘದ ಮೂಲತತ್ವವನ್ನು ಆದರಿಸಿ ಹಾಗೂ ಹಲವಾರು ವರ್ಷಗಳಿಂದ ನಡೆದುಬಂದ ಪರಂಪರೆಯನ್ನು ಅನುಸರಿಸಿ ಈ ಎರಡು ವರ್ಷಗಲ್ಲಿ ಸಂಘವು ಹಲವಾರು ಪರೋಪಕಾರಿ ಸಂಸ್ಥೆಗಳಿಗೆ ಹಣಕಾಸಿನ ಸಹಾಯ ನೀಡಿದೆ.

ಬೃಂದಾವನ ಸಂಘ ನಿಂತ ನೀರಲ್ಲ. ನಿರಂತರ ಝುಳು-ಝುಳು ಹರಿಯುತಿರುವ ಕ್ರಿಯಾಶೀಲ ನೀರಿನಂತಿದೆ, ಏಕೆಂದರೆ ಕನ್ನಡ ನಾಡಿನ ಮೂಲೆ-ಮೂಲೆಯಿಂದ ಬಂದ ನಾವುಗಳು ಕನ್ನಡ ತಾಯಿಯ ನೆಲ-ಜಲ-ಉಸಿರಿನಿಂದ ಬೆಳೆದವರಾಗಿದ್ದು, ತಾಯಿಯ ಋಣ ತೀರಿಸಲೆಂದೇ ಬೃಂದಾವನ ಸಂಘ ಸ್ಥಾಪನೆಯಾಗಿದ್ದು, ಇದರ ಮೂಲಕ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸುತ್ತಾ ಹಳೆ ಬೇರು, ಹೊಸ ಚಿಗುರಿನಂತೆ ವರ್ಷವೆಲ್ಲಾ ಹೊಸಹೊಸದನ್ನು ಸಂಘವು ಕಲೆ ಹಾಕುತ್ತಾ ಬಂದಿದೆ.

ಕನ್ನಡಿಗರಿಗಾಗಿ, ಕನ್ನಡದ ನೆಲದಲ್ಲಿ ಹುಟ್ಟಿ ಬೆಳೆದ ನಾವುಗಳು ಇಂತಹ ಕನ್ನಡ ಸಂಘವನ್ನು ಕಟ್ಟುವ ಮೂಲಕ, ಬೃಂದಾವನ ಸಂಘದ ಸದಸ್ಯರಾಗಿ, ಸಂಘವು ಕೈಕೊಂಡ ಎಲ್ಲಾ ಕಾರ್ಯಕ್ರಮಗಳನ್ನು ತನು ಮನ, ಶ್ರದ್ಧೆ  ಅಭಿಮಾನ ದಿಂದ ಭಾಗವಹಿಸಿ ಕನ್ನಡಿಗರ ಪರಿಚಯವನ್ನು ನಾವು ನಿಂತ ನೆಲದಲ್ಲಿ ಕನ್ನಡ ಸಂಸ್ಕೃತಿ ಹಾಗೂ ಭಾಷೆಯನ್ನು ಪರಿಚಯಿಸುತ್ತಾ ತಾಯಿ ಕನ್ನಡಾಂಬೆಯ ಋಣ ತಿರಿಸೋಣವೆಂದು ಕರೆ ಕೊಡುತ್ತಾ ತಮಗೆಲ್ಲಾ ಶುಭವಾಗಲೆಂದು ಹಾರೈಸುತ್ತೇನೆ.

ಸಿರಿ ಕನ್ನಡಂ ಗೆಲ್ಗೆ
ಜೈ ಕನ್ನಡ ಮಾತೇ

**ಇಂತಿ ನಿಮ್ಮ,**
**ರವೀಂದ್ರ ಲಂಬಿ**
**ಖಜಾಂಚಿ ಬೃಂದಾವನ ಸಂಘ**
**2011-೨೦೧೨ ಕಾರ್ಯಕಾರಿ ಸಮಿತಿ (ಮೈತ್ರಿ ತಂಡ)**

# Board of Trustees




**V. Prasanna Kumar**



**Vijay Murthy**



**Ben Kantharaju**



**Usha Prasanna Kumar**



**Santosh Kadlebele**

# Board of Directors



**Matt Suresh**
**Vice President**



**Ravi Lambi**
**Treasurer**



**Santosh Kadlebele**
**President**



**Padmini Hemant**
**Secretary**



**Murali Gowda**
**Joint Secretary**

# Board of Directors



**Dr. Sri Sai Gowda**
**Joint Treasurer**



**Ashok Kattimani**
**Director - Cultural**



**Dr. Raju Muthu**
**Director - Infrastructure**



**Satish Hosanagara**
**Director - Communication**



**Vidya Murthy**
**Hon. Director - Cultural**

# Board of Directors



**Anil Kumar**
**Hon. Director - Charity**



**Mallik Prasad**
**Hon. Director - Food**



**Dr. M.G. Prasad**
**Director - Spiritual**



**Vidyadhara**
**Hon Director - Hospitality**



**Ganesh Sharma**
**Director - Website**

# Youth Committee



**Nupur Murthy**



**Amulya Kattimani**



**Suhas Kumar**



**Samhita Murthy**



**Rutvik Kumar**



**Aakash Muthu**



**Vinay Naidu**



**Abhay Aradhya**



**Medha Rao**

# ಲೇಖನಗಳು



# ಮುಂಜಾನೆಯ ಸಿಹಿ



ಅಮೂಲ್ಯ ಕಟ್ಟೀಮನಿ

"ಕೌಸಲ್ಯಾ ಸುಪ್ರಜಾ ರಾಮ ಪೂರ್ವಾಸಂಧ್ಯಾ ಪ್ರವರ್ತತೇ । ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ॥" ಸುಬ್ಬಲಕ್ಷ್ಮಿಯವರ ಈ ಸುಪ್ರಭಾತವನ್ನು ಕೇಳದವರೇ ಇಲ್ಲ. ಆದರೆ ನಮ್ಮ twenty first centuryಯ ಪುಟಾಣಿಗಳು ಈ ಸುಪ್ರಭಾತವನ್ನ ಎಷ್ಟು ಸಲ ಕೇಳಿರಬಹುದು ಯೋಚಿಸಿ? ರಜೆ ಬಂದರೆ ಸಾಕು, ಮಕ್ಕಳಿಗೆ ಟಚಿಣಜ ಆಗಿ ಏಳಬಹುದೆನ್ನುವ ಖುಷಿ. ಇವತ್ತಿನ ಈ Internet ಯುಗದಲ್ಲಿ, ಬೆಳಗಿನ ಸೂರ್ಯನನ್ನ ನೋಡಲು ಯಾರಿಗಿದೆ time? ಯಾರಿಗಿದೆ ಆಸಕ್ತಿ? ಮಕ್ಕಳು ಬಿಡಿ, ದೊಡ್ಡವರಿಗೆ ಕೂಡ ಮುಂಜಾನೆಯ ಸಿಹಿ ಸವಿಯಲು ಎಲ್ಲಿದೆ ಸಮಯ?

K-12 ಸ್ಕೂಲಿನ ಮಕ್ಕಳು ಪರವಾಗಿಲ್ಲ. Bus catch ಮಾಡಬೇಕೆಂದು ಆರು-ಏಳು ಗಂಟೆಗೆಲ್ಲ ಎದ್ದುಬಿಡುತ್ತಾರೆ. ಆದರೆ high school graduate DV college ಪ್ರಪಂಚಕ್ಕೆ ಕಾಲಿಟ್ಟ ಮೇಲೆ ಆ ಕತೆಯೆ ಬೇರೆ. ಆಡಾಟ ಎಂಬ ಸ್ವರ್ಗ ಲೋಕದಲ್ಲಿ ಎಲ್ಲಿದ್ದಾರೆ ಅಪ್ಪ-ಅಮ್ಮಂದಿರು ಹಾಸಿಗೆ ಕೆಡಿಸಲು? ಎಂಟು-ಒಂಬತ್ತು-ಹತ್ತು ಗಂಟೆಯಾದರೂ ಸರಿ, College ಮಕ್ಕಳಿಗೆ ದಿನದ ಆಗಮನ ಅವರದೇ ನಿಶ್ಚಯ. ಅವರದೇನು ತಪ್ಪಿಲ್ಲ ಬಿಡಿ, ಕಣ್ಣು ಮುಚ್ಚುವುದೇ ಮುಂಜಾನೆಯ ಎರಡು-ಮೂರು ಗಂಟೆಯಾದರೆ, ಮನುಶ್ಯನಿಗೆ ಕಮ್ಮಿಯೆಂದರೂ ಆರರಿಂದ ಎಂಟು ಗಂಟೆ ಕಾಲ ನಿದ್ರೆ ಬೇಡವೇ?

ಇವತ್ತಿನ ದಿನ, ಕೆಲಸ ಅಥವಾ ಸ್ಕೂಲಿಗೆ ಹೋಗುವ pressure ಇಲ್ಲವೆಂದರೆ, i.e. working day ಅಲ್ಲವೆಂದರೆ, late ಆಗಿ ಏಳಲು ಅಭ್ಯಂತರ ಇರಲಾರದು. Weekendsನಲ್ಲಿ ಕೂಡ ಸೂರ್ಯೋದಯದ ಮುಂಚೆ ಕಣ್ಣು ಬಿಡಬೇಕೆನ್ನುವವರು ಕಡಿಮೆ. ಕೆಲವು ವರ್ಷ rewind ಮಾಡಿ ನೋಡಿ, IT era ಗಿಂತ ಹಿಂದೆ, ಮುಂಜಾನೆಯೆಂದರೆ ಬ್ರಾಹ್ಮೀ ಮುಹೂರ್ತ. ಬೆಳಗ್ಗೆ ಬೇಗ ಏಳುವುದು ಮನಶ್ಶಾಂತಿ ಮತ್ತು ದೈಹಿಕ ಆರೋಗ್ಯಕ್ಕೆ ಒಂದು natural ritual ಆಗಿತ್ತು. It wasn't ever complained about?was simply a human practice nature ingrained ever since life existed. ಹಿಂದಿನ ಕಾಲದಲ್ಲಿ ಮುಂಜಾನೆಯ ವೇಳೆ, ತಣ್ಣೀರಿನಲ್ಲಿ ಸ್ನಾನ, ಸೂರ್ಯ ನಮಸ್ಕಾರ, ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವು. ಇವತ್ತಿನ ದಿನ, ರಜಾ ಬಂದರೆ ಸಾಕು, ಬೆಳಗ್ಗೆ ಬೇಗ ಏಳುವ compulsion ಇಲ್ಲವಲ್ಲಾ ಎಂಬ ಖುಷಿ ಮಕ್ಕಳಿಗೆ (ಕೆಲವು ದೊಡ್ಡವರಿಗೆ ಕೂಡ).

ಮುಂಜಾನೆಯ ಸಿಹಿ ಅಂದರೆ ಏನು? ಗುಬ್ಬಚ್ಚಿಗಳ ಚಿಲಿಪಿಲಿ, ನೀಲಿ ಆಕಾಶದಲ್ಲಿ ಕೇಸರಿಯ ಹೊಳಪು, ತಂಪು ಗಾಳಿ, ಮನಸ್ಸಿನ ಪಿಸುಮಾತು, ಶಾಂತಿಯ ಶಕ್ತಿ - ಇವೆಲ್ಲ ದಿನವಿಡಿಗೆ ಸ್ಫೂರ್ತಿದಾಯಕ. I personally love the Sunrise and early mornings. ದಿನವಿಡೀ bright ಇರುವುದಕ್ಕೆ ಈ ಮುಂಜಾನೆಯ ಸಿಹಿ ಒಂದು unique motivation. Research ಪ್ರಕಾರ, early risers are known to be happier, healthier and more successful. ಬೆಳಗ್ಗೆ ಐದರೊಳಗೆ ಏಳುವುದರಿಂದ ಹಲವಾರು advantagesಗಳಿವೆ: First and foremost is the amount of extra time earned, ದಿನ ಬೆಳಗ್ಗೆ ಎರಡು ಗಂಟೆಗಳು ಸಿಕ್ಕರೆ, ಒಂದು ತಿಂಗಳಿಗೆ ಅರವತ್ತು ಗಂಟೆಗಳು ಸಿಗುತ್ತದೆ; ಒಂದು ವರ್ಷಕ್ಕೆ ಏಳು ನೂರ ಇಪ್ಪತ್ತು ಗಂಟೆ ಅಂದರೆ ಮೂವತ್ತು ಪೂರ್ತಿ ದಿನಗಳು! ಮುಂಜಾನೆಯಲ್ಲಿ exercise ಮಾಡಲು, jogging ಹೋಗಲು ಅತ್ಯಂತ ಅನುಕೂಲ. ದಿನಕ್ಕೆ head-start ಸಿಗುವುದಲ್ಲದೆ "early birds catch the fish" ಎನ್ನುವ confidence ಇರುತ್ತದೆ.

ತಪ್ಪು ತಿಳಿಯಬೇಡಿ, ಸೂರ್ಯೋದಯವಾದ ಮೇಲೆ ಏಳುವವರು ಸಾಕಷ್ಟು ಮಂದಿ ಚೆನ್ನಾಗಿಯೇ ಇದ್ದಾರೆ. ಆದರೆ ನಮ್ಮ ಪೂರ್ವಜರು ನಿಭಾಯಿಸಿಕೊಂಡು ಬಂದ, upon nature's call for survival: practice of yoga, meditation, ಪೂಜೆ ಪುನಸ್ಕಾರ, ಸೂರ್ಯ ನಮಸ್ಕಾರ ? ಇವೆಲ್ಲವಕ್ಕೂ ಏನೋ ಒಂದು ಅರ್ಥ ಇರಬೇಕಲ್ಲವೆ? It is justifiable, ಇವತ್ತಿನ entertainment, computer, ಕೆಲಸ ಮತ್ತು ಸ್ಕೂಲಿನ pressure ಗಳ ಮಧ್ಯೆ ದಿನ ಮುಗಿಯುವುದು ಕಷ್ಟ. ಆದರೂ ಯೋಚಿಸಿ ನೋಡಿ, ಮುಂಜಾನೆಯ ಸಿಹಿ - ಇದೊಂದು ರೋಮಾಂಚನ!







# ವಿದ್ಯಾರ್ಥಿಗಳ ಅನುಭವಗಳು



## ಸೀಮಾ ಮೂರ್ತಿ

ಸುಮಾರು 17 ವರ್ಷಗಳಿಂದ ನ್ಯೂ ಜೆರ್ಸಿಯಲ್ಲಿ ನೆಲಸಿರುವ ನಾವು, ಇಲ್ಲಿ ನೆಲೆಸಿರುವ ಎಲ್ಲಾ ಭಾರತೀಯ ನಿವಾಸಿಗಳಂತೆ, ಪ್ರತಿ ಎರಡು ವರ್ಷಗಳಿಗೊಮ್ಮೆ ತಪ್ಪದೇ ಭಾರತಕ್ಕೆ ನಮ್ಮ ನೆಂಟರನ್ನ ಭೇಟಿಯಾಗಲು ಹೊರಡುತ್ತೇವೆ. ಇತ್ತೀಚೆಗೆ ಹೈಸ್ಕೂಲ್ ನಲ್ಲಿ ಓದುತ್ತಿರುವ ನನ್ನ ಮಗಳು ಭಾರತದಲ್ಲಿ ಅವಳ ವಯಸ್ಸಿನ ಮಕ್ಕಳು ಏನು ಓದುತ್ತಾರೆ ಹೇಗೆ ಕಲಿಯುತ್ತಾರೆ ಎಂದು ಬಹಳ ಕುತೂಹಲ ತೋರಿಸತೊಡಗಿದಳು. ಅಲ್ಲಿ ನಾವು ಭೇಟಿಯಾದ ಮಕ್ಕಳೂ ಕೂಡ ಬಹಳ ಕುತೂಹಲದಿಂದ ಇಲ್ಲಿಯ ಬಗ್ಗೆ ವಿಚಾರಿಸುವುದನ್ನು ಕಂಡ ನನಗೆ ಇವರಿಬ್ಬರ ಅನಿಸಿಕೆ ಅನುಭವಗಳನ್ನ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿತು. ಅವರ ಅನಿಸಿಕೆ ಅವರೇ ಬರೆದರೆ ಚೆನ್ನ; ಇಲ್ಲದಿದ್ದಲ್ಲಿ ಅದು ಮತ್ತೊಬ್ಬರ ವಿಮರ್ಶೆಯಾಗುವುದು ಖಂಡಿತವಲ್ಲವೇ? ಸಮರ್ಥರಾದ ಇಬ್ಬರು ವಿದ್ಯಾರ್ಥಿನಿಯರಿಂದ ಅವರ ಶಾಲೆಯ ಕುರಿತು ಒಂದು ಪ್ರಬಂಧವನ್ನು ನಿಮ್ಮ ಮುಂದೆ ಪ್ರಸ್ತುತ ಪಡಿಸುತ್ತಿದ್ದೇನೆ. ನಮ್ಮ ಈ ಪುಟ್ಟ ಪ್ರಯೋಗ ನಿಮಗೆ ಇಷ್ಟವಾದಲ್ಲಿ ಖಂಡಿತ ತಿಳಿಸಿ - ಅದಕ್ಕಿಂತ ಒಳ್ಳೆ ಪ್ರೋತ್ಸಾಹ ಈ ಮಕ್ಕಳಿಗೆ ಬೇರಿಲ್ಲ. ಇವರಿಬ್ಬರ ಕಿರು ಪರಿಚಯ. ಅನನ್ಯಳಿಗೆ 13 ವರ್ಷ ಹಾಗೂ ಸಂಹಿತಳಿಗೆ 15 ವರ್ಷ ವಯಸ್ಸಾಗಿದೆ. ಅನನ್ಯ ಅಮೇರಿಕಾದಲ್ಲಿ ಹುಟ್ಟಿ ಅವಳ ಮೊದಲ 6 ವರ್ಷಗಳನ್ನ ಇಲ್ಲಿ ಕಳೆದಳು. ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾಳೆ. ಸಂಹಿತ ಕೂಡ ಅಮೇರಿಕಾದಲ್ಲಿ ಹುಟ್ಟಿ, ಕೇವಲ ಒಂದು ವರ್ಷ ಭಾರತದಲ್ಲಿ ನೆಲೆಸಿ ಮತ್ತೆ ಅಮೇರಿಕಾಕ್ಕೆ ಹಿಂದಿರುಗಿದಳು.

***



**ಅನನ್ಯ ಗಿರೀಶ್**

ನಾನು ಬೆಂಗಳೂರಿನಲ್ಲಿ ಒಬ್ಬ ವಿದ್ಯಾರ್ಥಿನಿ. ಈ ನನ್ನ ದೊಡ್ಡ ಊರಿನಲ್ಲಿ ಶಾಲೆಗೆ ಬಹಳ ಮಹತ್ವ ಇದೆ. ಎಲ್ಲಿ ನೋಡಿದರೂ ದೊಡ್ಡ ಹೆಸರ ಶಾಲೆಗಳು ಇವೆ. ಒಂದು ಸಾವಿರಕ್ಕಿಂತ ಹೆಚ್ಚು ಶಾಲೆಗಳು ಇದ್ದರೂ ಅಚ್ಚರಿಯಿಲ್ಲ. ಪ್ರತಿಯೊಂದು ಶಾಲೆಯಲ್ಲೂ ಸುಮಾರು ಒಂದು ಸಾವಿರ ಮಕ್ಕಳು ಇರಬಹುದು. ಹೀಗೆ ಒಂದು ಸಾವಿರ ಶಾಲೆಗಳಲ್ಲಿ ಎಷ್ಟು ಮಕ್ಕಳಿರಬಹುದು? ಈ ಮಕ್ಕಳು ತಮ್ಮ ತಂದೆ, ತಾಯಿ, ಅಕ್ಕ, ಅಣ್ಣ, ಅಜ್ಜ, ಅಜ್ಜಿ, .... ಹೀಗೆ ಒಂದು ದೊಡ್ಡ ಕುಟುಂಬದೊಂದಿಗೆ ಬೆಂಗಳೂರಿನ ಪ್ರತಿಯೊಂದು ರಸ್ತೆಯಲ್ಲಿಯ ಮನೆಗಳಲ್ಲಿ ವಾಸ ಮಾಡುತ್ತಾರೆ. ಒಂದೊಂದು ರಸ್ತೆಯಲ್ಲೂ ಕುತೂಹಲ, ಶಬ್ದ ತುಂಬಿದ ಜಾತ್ರೆಗಳು!

ಪ್ರತೀ ದಿನ ಸೂರ್ಯೋದಯಕ್ಕಿಂತ ಸುಮಾರು ಅರ್ಧ ಘಂಟೆ ಮೊದಲು ಎದ್ದು, ತಟಪಟನೆ ಶಾಲೆಗೆ ತಯಾರಾಗಿ, ಶಾಲೆಯ ಬಸ್ಸಿನಲ್ಲಿ ಹಾರಿ ನಮ್ಮ ಬೆಂಗಳೂರಿನ ಗೊಂದಲ ಕೂಡಿದ ರಸ್ತೆಗಳಲ್ಲಿ ಶಾಲೆಗೆ ಹೋಗುತ್ತೇವೆ. ನಮ್ಮ ಶಾಲೆಯು ಊರಿನ ಹೊರಗಡೆ ಇರುವುದರಿಂದ ಅರ್ಧ-ಮುಕ್ಕಾಲು ಜನರು ಬಸ್ಸಿನಲ್ಲೇ ತೂಕಡಿಸಲು ಪ್ರಾರಂಭಿಸುತ್ತಾರೆ. ಶಾಲೆಯನ್ನು ತಲುಪಿದಾಗ ಮಲಗಿದ್ದವರನ್ನು ಎಬ್ಬಿಸಿ, ಬಸ್ಸಿನಿಂದ ಎಲ್ಲರೂ ಹೊರಗಡೆ ಬರುತ್ತೇವೆ. ಬೇರೆ ಬಸ್ಸಿನಲ್ಲಿ ಬಂದವರನ್ನು ಕಂಡು ತರಗತಿಗೆ ಹೋಗುವ ತನಕ ಸಮಾಚಾರ ಕೇಳಿ ನಗುತ್ತೇವೆ. ಸಿಬ್ಬಂದಿಯವರು ಹುಚ್ಚು ಮಕ್ಕಳೆಂದು ವ್ಯಂಗ್ಯವಾಗಿ ನೋಡುತ್ತಾರೆ. ತರಗತಿಯ ಒಳಗೆ ಹೋದಕೂಡಲೆ ನಲವತ್ತು ನಿಮಿಷದ ಒಂದು ಪಾಠ. ಅದಾದಮೇಲೆ ಇಪ್ಪತ್ತು ನಿಮಿಷದ ಒಂದು 'ಬ್ರೇಕ್'. ಈ ಬ್ರೇಕಿನಲ್ಲೂ ಸಹ ಬೇರೆ ತರಗತಿಯಲ್ಲಿರುವವರ ಜೊತೆ ಹರಟೆ. ಇಪ್ಪತ್ತು ನಿಮಿಷದ ನಂತರ ಹೃದಯವೇ ಬಾಯಲ್ಲಿ ಬರುವಂತೆ ಒಂದು ಘಂಟೆ ಬಾರಿಸುತ್ತದೆ. ಈ ಘಂಟೆಯನ್ನು ಕೇಳಿ ಎಲ್ಲರೂ ಏನೋ ಒಂದು ತಿಂದ ಹಾಗೆ ಮಾಡಿ ಮತ್ತೆ ನಾಲ್ಕು ನಲವತ್ತು ನಿಮಿಷದ ಪಾಠಗಳಿಗೆ ಸೇರುತ್ತಾರೆ. ಇದಾದ ಮೇಲೆ ಮತ್ತೊಂದು 'ಬ್ರೇಕ್' ಮತ್ತು ನಾಲ್ಕು ಅರ್ಧ ಘಂಟೆಯ ಪಾಠಗಳು. ಶಾಲೆಯಾದಮೇಲೆ, ಹತ್ತು ನಿಮಿಷ ಬಸ್ಸಿನ ಕಿಟಕಿಯಿಂದ 'ಬಾಯ್' ಎಂದು ಕೂಗಿ, ತಲೆಯನ್ನು ಹೊರಕ್ಕೆ ಹಾಕಿ, ಶಿಕ್ಷಕರಿಂದ ಬಯ್ಯಿಸಿಕೊಂಡು ಮನೆಗೆ ಹೋಗುತ್ತೇವೆ. ಮರುದಿನ ಶಾಲೆಗೆ ಬರಲು ಇಲ್ಲಿಯವರೆಗೆ ನನ್ನ ದಿನಚರಿ ಆಯಿತು. ಇನ್ನು ನನ್ನ ಶಾಲೆಯಲ್ಲಿ ಕಲಿಯುವುದರ ಬಗ್ಗೆ ಬರೆಯುತ್ತೇನೆ.





ನಾನು ಹಿರಿಯ ವರ್ಗದ ಶಾಲೆಯಲ್ಲಿ ಇರುವುದರಿಂದ ಮೂರು ಬೇರೆ ಭಾಷೆಗಳನ್ನ ಕಲಿಯಬೇಕು (ಆಂಗ್ಲ ಭಾಷೆ, ಸಂಸ್ಕೃತ, ಕನ್ನಡ), ಮೂರು ವಿಜ್ಞಾನ ವಿಷಯಗಳು, ಮೂರು ಸಮಾಜಶಾಸ್ತ್ರ ವಿಷಯಗಳು, ಮೂರು ಗಣಿತಶಾಸ್ತ್ರ ವಿಷಯಗಳು ಮತ್ತು ಒಂದು ಗಣಕಯಂತ್ರ ಶಾಸ್ತ್ರ. ಇದಲ್ಲದೆ, ನಮ್ಮ ಶಾಲೆಯಲ್ಲಿ ಆಟಕ್ಕೂ ಬಹಳ ಪ್ರಾಮುಖ್ಯತೆ ಇದೆ. ನಾನು ನಮ್ಮ ಶಾಲೆಯ 'ಬ್ಯಾಸ್ಕೆಟ್ ಬಾಲ್' ಟೀಮಿನಲ್ಲಿ ಇದ್ದೀನಿ. ಆದುದರಿಂದ ನಾನು ಶಾಲೆಗೆ ತುಂಬಾ ಉತ್ಸಾಹದಿಂದ ಹೋಗುತ್ತೇನೆ.

***



**ಸಂಹಿತಾ ಮೂರ್ತಿ**

ಒಬ್ಬ student ಆದ ನನ್ನ ದಿನನಿತ್ಯದ activities ನಲ್ಲಿ ಸ್ಕೂಲ್ ಬಹಳ ಪ್ರಮುಖವಾದ ಪಾತ್ರ ವಹಿಸುತ್ತದೆ. ಅಮೆರಿಕನ್ ಸ್ಕೂಲ್ system ಇಂಡಿಯನ್ ಸ್ಕೂಲ್ system ಗಿಂತ ತುಂಬ ವಿಭಿನ್ನವಾಗಿದ್ದರೂ ಸಮಾನತೆಗಳು ಕೂಡ ಇವೆ. ಅಮೆರಿಕದಲ್ಲಿ ಎರಡು ಥರ schooling systems ಇವೆ; ಪ್ರೈವೆಟ್ ಹಾಗೂ ಪಬ್ಲಿಕ್. ಪಬ್ಲಿಕ್ system ನಲ್ಲಿ ಪ್ರತಿ ಒಂದು ಊರಿಗೂ ಅದರದೆ ಆದ ಹೈ ಸ್ಕೂಲ್ಸ್, ಮಿಡಲ್ ಸ್ಕೂಲ್ಸ್ ಹಾಗೆ ಹಲವಾರು ಎಲಿಮೆಂಟರೀ ಸ್ಕೂಲ್ಸ್ ಇರತ್ತೆ. ಪ್ರೈವೆಟ್ ಸ್ಕೂಲ್ಸ್ ಅಷ್ಟು ಜನಪ್ರಿಯವಿಲ್ಲ; ಕೆಲವು ಮಕ್ಕಳು ಪ್ರೈವೆಟ್ ಸ್ಕೂಲ್ಸ್ ಗೆ ಹೋಗ್ತಾರೆ. ನಾನು ಒಂದು ಪಬ್ಲಿಕ್ ಹೈ ಸ್ಕೂಲ್ ನಲ್ಲಿ ಓದುತ್ತೇನೆ. ಅಮೆರಿಕನ್ Student ಆಗಿ, ನನ್ನ ದಿನಚರಿಯಲ್ಲಿ ಕೆಲವು ಸಮಾನತೆ Indian ಸ್ಟುಡೆಂಟ್ ಜೊತೆ ಇದ್ದರೂ ಅಷ್ಟೇ ಭಿನ್ನತೆ ಕೂಡ ಇದೆ.

ನನ್ನ ದಿನ ಬೆಳಿಗ್ಗೆ ಸುಮಾರು ಐದೂವರೆಗೆ ಶುರುವಾಗತ್ತೆ. ಸುಮಾರು ಆರೂವರೆಗೆ ನಾನು ಬಸ್ ಹತ್ತಿ ಶಾಲೆಗೆ ಹೊರಡುತ್ತೇನೆ. ಅಷ್ಟು ಬೇಗ ಎದ್ದ ನಾವುಗಳು ತಪ್ಪದೇ ದಿನ ಬೆಳಿಗ್ಗೆ ಬಸ್ ನಲ್ಲಿ ಮಲಗುತ್ತೇವೆ. ಏಳು ಗಂಟೆಗೆ ಸ್ಕೂಲ್ ತಲಪಿದಾಗ homework ಇದ್ದರೆ ಮುಗಿಸಿ ಸ್ನೇಹಿತರಿಗೆ ಕಾತುರದಿಂದ ಕಾಯುತ್ತೇನೆ. ನಾವು ಅರ್ಧ ಗಂಟೆನಲ್ಲಿ ಸ್ವಲ್ಪ ಹರಟೆ, ಸ್ವಲ್ಪ homework ಬಗ್ಗೆ complain ಮಾಡಿ ಮಜ ಮಾಡ್ತೀವಿ. ಆಮೇಲೆ ಎಂಟು ಗಂಟೆಗೆ ಮನಸ್ಸಿಲ್ಲದೇ ಎದ್ದು ನಮ್ಮ classes ಗೆ ಹೋಗ್ತೀವಿ.

ನನ್ನ ಶಾಲೆಯಲ್ಲಿ block scheduling system ಅನುಸರಿಸುತ್ತೇವೆ. ಒಟ್ಟು ಎಂಟು subjectಗಳನ್ನ ದಿನಕ್ಕೆ ನಾಲ್ಕರಂತೆ split ಮಾಡಿ 'A' ದಿನ ಮತ್ತೆ 'B' ದಿನದಂತೆ ಪಾಠ ಕಲೀತೀವಿ. ನನಗೆ ಈ system, regular system ಗಿಂತ ಇಷ್ಟ ಯಾಕಂದರೆ homework ಮಾಡುವುದಕ್ಕೆ ಸಮಯ ಸಿಗತ್ತೆ. 'A' ದಿನಗಳಲ್ಲಿ ನಾನು U.S.History, French, Research based analysis ಹಾಗೂ Chemistry ಕಲಿತೀನಿ. ಮುಂದಿನ ಎರಡು ವರ್ಷಗಳಿಗೆ ಒಂದು foreign ಭಾಷೆ ಕಲಿಯುವುದು ಕಡ್ಡಾಯ. ಆ ಕಾರಣಕ್ಕೊಂದೇ ನಾನು French ಕಲಿಯುತ್ತಾ ಇದ್ದೀನಿ. ನನಗೆ RBA classes ತುಂಬ interesting ಅನ್ನಿಸುತ್ತೆ. ನನ್ನ ಅಚ್ಚುಮೆಚ್ಚಿನ ಶಿಕ್ಷಕರು ನನ್ನ RBA class ನಲ್ಲಿ ಇದ್ದಾರೆ. ಈ class ನಲ್ಲಿ ನಾವು ಹಲವು topic ಗಳನ್ನ ಆಯ್ಕೆ ಮಾಡಿ ಮುಂದಿನ ಮೂರು ವರ್ಷಗಳ ಕಾಲ research ಮಾಡಿ ಅದನ್ನ competitions ಮತ್ತೆ colleges ಗಳಲ್ಲಿ present ಮಾಡ್ತೀವಿ. ವಿಜ್ಞಾನ ಮತ್ತು ಗಣಿತದ subject ಗಳನ್ನ ನಾಲ್ಕು ವರ್ಷದಲ್ಲಿ ವರ್ಷಕ್ಕೊಂದು subject ನಂತೆ ಪಾಠ ಹೇಳಿಕೊಡುತ್ತಾರೆ. ಉದಾಹರಣೆಗೆ, ಒಂಭತ್ತನೇ ತರಗತಿಯಲ್ಲಿ Biology, ಹತ್ತನೇ ತರಗತಿಯಲ್ಲಿ Chemistry, ಹನ್ನೊಂದನೇ ತರಗತಿಯಲ್ಲಿ Physics ಹೀಗೆ ಪಾಠ divide ಮಾಡಿದ್ದಾರೆ. ಇನ್ನು 'B' ದಿನಗಳಲ್ಲಿ American Literature, Pre-calculus, Art ಮತ್ತು Gym ಪಾಠಗಳಿವೆ. ನನಗೆ Pre-calculus ಮತ್ತು Art classes ಇಷ್ಟ.

ಅಂತೂ ಇಂತೂ ಮೂರು ಗಂಟೆಗೆ ಶಾಲೆ ಮುಗಿಯತ್ತೆ; ತಕ್ಷಣ ನಾನು locker ಗೆ ಓಡಿ ಬಟ್ಟೆ ಬದಲಾಯಿಸಿ Tennis practice ಅಥವಾ gameಗೆ ಓಡಬೇಕು. Tennis ಇಲ್ಲದಿದ್ದರೆ activity clubsಗೆ ಹೋಗಬೇಕಾಗತ್ತೆ. ಎರಡೂ ಇಲ್ಲದಿದ್ದರೆ ಬಸ್ ಹತ್ತಿ ಮನೆಗೆ ಹೊರಡುತ್ತೇನೆ. ಮನೆ ತಲಪಿದ ಮೇಲೆ ಸುಮಾರು ಮೂರು ಗಂಟೆಗಳ ಕಾಲ homework ನಲ್ಲಿ ಕಳೆಯುತ್ತೆ; ಇನ್ನು ಎರಡು ಗಂಟೆ ಪರೀಕ್ಷೆಗಳಿಗೆ ಓದಿ ಕೊಳ್ಳಬೇಕಾಗತ್ತೆ. ಕೊನೆಯದಾಗಿ ನಾನು ಕಾಲು ಗಂಟೆ dance ಅಭ್ಯಾಸ ಮಾಡಿ ಸುಸ್ತಾಗಿ ಮಲಗುತ್ತೇನೆ.



# ಕರ್ನಾಟಕದ ಅಮರ ಕೊಡುಗೆ



## ಡಾ। ಎಮ್. ಜಿ. ಪ್ರಸಾದ್

ವಿಶ್ವದ ವಿವಿಧ ದೇಶಗಳ ವಿದ್ವಾಂಸರು ರಚಿಸಿರುವ ಸಾಹಿತ್ಯವನ್ನು ಆಳವಾಗಿ ಓದಿದಾಗ ಕಾಣಬರುವುದೇನು? ಕಾಲ ದೇಶಗಳನ್ನು ದಾಟಿರುವ, ವಿಶ್ವ ವ್ಯಾಪಾರದ ತಳಹದಿಯಲ್ಲಿ ಅಡಗಿರುವ ಅಮರ ತತ್ವಗಳ ಸಮೂಹ ಗೋಚರವಾಗುತ್ತದೆ. ಆ ತತ್ವ ಸಮೂಹವೇ ಸನಾತನ ಧರ್ಮ. ಅದರ ನೆಲೆಯೇ ಭಾರತ. "ಅಗ್ನಿಮಿಚ್ಛಧ್ವಂ ಭಾರತಾಃ" ಎಂಬ ವೇದವಾಕ್ಯದ ಅರ್ಥ ನೋಡಿದಾಗ, 'ಭಾ' ಎಂದರೆ ಪ್ರಕಾಶ ರೂಪವಾದ ಜ್ಞಾನಾಗ್ನಿಯನ್ನು, 'ರತ' ಎಂದರೆ ಬಯಸಿ ಆರಾಧಿಸಿರಿ ಎಂಬ ಆದೇಶ ನೀಡುತ್ತದೆ. ಇಂತಹ ವೇದದ ಆದರ್ಶ ಆದೇಶವನ್ನು ಜೀವನದ ಧ್ಯೇಯವನ್ನಾಗಿಸಿಕೊಂಡ ಜಗಜ್ಜನನಿ ಭಾರತದಲ್ಲಿ ಗಣನೆಗೂ ಮೀರಿ ಅನೇಕಾನೇಕ ಮಹಾನ್ ವ್ಯಕ್ತಿಗಳು ಜೀವನದ ವಿವಿಧ ಕ್ಷೇತ್ರಗಳಲ್ಲಿ ಅಮರವಾದ ಕೊಡುಗೆ ನೀಡಿದ್ದಾರೆ.

ಅವ್ಯಕ್ತವಾದ ಶಕ್ತಿಯು ವ್ಯಕ್ತವಾಗಿ, ಮೂರ್ತರೂಪವಾಗಿ ಬಂದಾಗ ವ್ಯಕ್ತಿ ಎಂದಾಗುತ್ತಾನೆ. ಈ ಪುರುಷ ಹಾಗೂ ಸ್ತ್ರಿ ವ್ಯಕ್ತಿಗಳು ತಮ್ಮ ಧೀಮಂತ ಸಾಧನೆಯಿಂದ ಮತ್ತು ವಿಶ್ವನಿಯಾಮಕಶಕ್ತಿಯ ಅನುಗ್ರಹ ಬಲದಿಂದ ಅಸಾಧಾರಣ ಹಾಗೂ ಚಿರಂತನ ಸ್ಫೂರ್ತಿದಾಯಕ ಕೆಲಸಗಳನ್ನು ಮಾಡಿದಾಗ ಅದು ಅಮರವಾದ ಕೊಡುಗೆ ಎಂದೆನಿಸುತ್ತದೆ. ಈ ದೃಷ್ಟಿಕೋನದಲ್ಲಿ ವಿಶ್ವಕ್ಕೆ ಭಾರತದ ಅಮರಕೊಡುಗೆ ಅಪಾರವಾದುದು. ವೇದವನ್ನು ಬುನಾದಿಯನ್ನಾಗಿಸಿಕೊಂಡು ನಿರೂಪಿತವಾಗಿರುವ ರಾಮಾಯಣ - ಮಹಾಭಾರತ ಎಂಬ ಎರಡು ಒಳಗಣ್ಣುಗಳಿಂದ ಜೀವನದ ಆಮೂಲಾಗ್ರ ದರ್ಶನ ಮಾಡಲು ಸಾಧ್ಯ ಎಂದು ವಿಶ್ವಮಾನವನಿಗೆ ತೋರಿಸಿದೆ ಭಾರತ. ಇಂತಹ ಅವಿಚ್ಛಿನ್ನ ಪರಂಪರೆಯಲ್ಲಿ ಮೆರೆಯುತ್ತಿದ್ದ ಭಾರತ ಕಾಲಶಕ್ತಿಯಾದ ಇತಿಹಾಸದಲ್ಲಿ ವಿಧರ್ಮೀಯರ ಆಕ್ರಮಣಕ್ಕೆ ಸೋತು, ಮುಖ್ಯವಾಗಿ ಮೊದಲು ಮೊಗಲರು ನಂತರ ಬ್ರಿಟೀಷರ ಆಳ್ವಿಕೆಯಲ್ಲಿ ತನ್ನ ಭಾರತೀಯತೆ ಕೃಶವಾಗುವಿಕೆಯನ್ನು ಕಂಡಿತು. ಆ ಸಮಯಕ್ಕೆ ಸಮೂಹ ಶಕ್ತಿಯಿಂದ ರೂಪುಗೊಂಡ ಸ್ವಾತಂತ್ರ ಸಂಗ್ರಾಮದಲ್ಲಿ ಅನೇಕಾನೇಕ ವೀರರ ಹೋರಾಟದಿಂದ ಹಾಗೂ ಅಮರ ಕೊಡುಗೆಯಿಂದ ೧೯೪೭ರ ಆಗಸ್ಟ್ ೧೫ ರಂದು ಭಾರತವು ಸ್ವಾತಂತ್ರ್ಯವನ್ನು ಪಡೆದಿತು. ನಂತರ ಪ್ರಗತಿಪರವಾದ ಭಾರತದಲ್ಲಿ ಮೊದಲಿನಂತೆ ವಿವಿಧ ರಾಜ್ಯಗಳು ತಮ್ಮದೇ ಆದ ಸಂಸ್ಕೃತಿಯೊಡನೆ ಕೊಡುಗೆ ನೀಡುತ್ತಿವೆ. ಅದರಂತೆಯೇ ವಿಶ್ವದ ಎಲ್ಲಡೆಯಲ್ಲಿ ಕನ್ನಡ ಕೂಟಗಳು ರೂಪುಗೊಳ್ಳಲು ಕಾರಣವಾದ ತಾಯ್ನಾಡಾದ ಭಾರತದ ಕರ್ನಾಟಕದ ಅಮರ ಕೊಡುಗೆಯನ್ನು ಸಂಕ್ಷಿಪ್ತವಾಗಿ ಚಿತ್ರಿಸಲು ಯತ್ನಿಸಲಾಗಿದೆ.

ಅಧ್ಯಾತ್ಮ ದರ್ಶನದ ಮಹಾನಭದಲ್ಲಿ ಕನ್ನಡ ಭಾಷೆಯಲ್ಲಿನ ದಾಸ ಹಾಗೂ ಶರಣ ಸಾಹಿತ್ಯ ಅಮರ ಸ್ಥಾನ ಪಡೆದಿದೆ. ವಿಶ್ವ ಶಕ್ತಿಯ ಪ್ರಕಾಶವನ್ನು ನೋಡಿ ಅನುಭವಿಸಿ ಆ ಶಕ್ತಿಗೆ ಮಣಿದಾಗ ವ್ಯಕ್ತಿ 'ದಾಸ'ನಾಗುತ್ತಾನೆ. ಅಂತಹ ಮಹಾನ್ ದಾಸರ ಸಂಪ್ರದಾಯಕ್ಕೆ ಕರ್ನಾಟಕ ತವರೂರಾಯಿತು. ಕರ್ನಾಟಕದ "ಕಸ್ತೂರಿ" ಭಾಷೆಯಾದ ಕನ್ನಡದಲ್ಲಿ ದಾಸರುಗಳು ಅಮರ ತತ್ವಗಳನ್ನು ಅತಿ ಸುಲಭವಾಗಿ, ಸರಳವಾಗಿ ನೀಡಿದ್ದಾರೆ. ವಿಶ್ವವಿಜ್ಞಾನದಲ್ಲಿ ಮೊಳಗುತ್ತಿದ್ದ ಸತ್ಯಗಳನ್ನು ದಾಸರುಗಳು ಆಡುಮಾತಿನಲ್ಲಿ ನೀಡಿದ್ದಾರೆ. 'ಮಾನವ ಜನ್ಮ ದೊಡ್ಡದು; ಅದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ!...', ಹಾಗೂ 'ಆಲಯದೊಳಗೆ ಬಯಲೋ... ಬಯಲೊಳಗೆ ಆಲಯವೋ...' ಎಂಬ ಕೃತಿಗಳಿಂದ ಕರ್ನಾಟಕದ ಕೊಡುಗೆ ಅಮರವಾಗಿದೆ. ಸನಾತನವಾದ ಶೈವ ಮತದ ಹಾದಿಯಲ್ಲಿ ರೂಪಿತವಾಗಿರುವ ವೀರಶೈವ ದರ್ಶನವು ಕರ್ನಾಟಕದ ಮಹಾನ್ ಕೊಡುಗೆ. ಶಿವಶರಣ, ಶರಣೆಯರಾಗಿ ಜಂಗಮರಾಗಿ ಅಮರ ತತ್ವಗಳನ್ನು ನೀಡಿದ್ದಾರೆ. ಶರಣರ ಮಾತೊಂದನ್ನು ನೋಡಿ - 'ದೇಹಗುಣಗಳಳಿದು ಲಿಂಗದೇಹಿಯಾದ ಶರಣನು ಬಹಿರಂಗದ ವ್ಯವಹಾರದ ಮಾಯಾ ಮೋಹವನ್ನು ಗೆದ್ದನು.' ಈ ರೀತಿ ವೇದಾಂತ ತತ್ವ ಪ್ರವರ್ತಕರಾದ ಶ್ರೀಮಧ್ವಾಚಾರ್ಯರ ಪರಂಪರೆಯಲ್ಲಿ ಶ್ರೀಪಾದರಾಜ ರಂತಹ ಪ್ರವರ್ತಕರಿದ್ದ ದಾಸ ಸಂಪ್ರದಾಯದಲ್ಲಿ ಪುರಂದರದಾಸರು ಕನಕದಾಸರಂತಹ ಅನೇಕಾನೇಕ ದಾಸರು ಅಮರರಾಗಿದ್ದಾರೆ. ವೀರಶೈವ ಧರ್ಮ ಪ್ರವರ್ತಕರಲ್ಲಿ ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ನಿಜಗುಣ ಶಿವಯೋಗಿಗಳಂತಹ ಮಹಾನ್ ಶಿವಭಕ್ತರು ಅಮರರಾಗಿದ್ದಾರೆ. ಹರಿ ಹರರ ಭಕ್ತಿಯು ಸಮನ್ವಯಗೊಂಡಿದೆ ಕರ್ನಾಟಕದಲ್ಲಿ. ಅದೇ ಅಮರ ಅಧ್ಯಾತ್ಮ ದರ್ಶನದ ಕೊಡುಗೆ. ಭಾರತದ ಜೀವಾಳವೇ ಸಂಗೀತ. ಒಂದು ದೇಶದ ಆಳವನ್ನು ಸಂಗೀತ ತೋರುತ್ತದೆ. ಭಾರತದ ಸಂಗೀತದ ಅಮರತ್ವಕ್ಕೆ ಪ್ರಧಾನ ಕಾರಣವೇ ಕರ್ನಾಟಕ ಸಂಗೀತ. ಪುರಂದರದಾಸರು ಕರ್ನಾಟಕದ 'ಸಂಗೀತ ಪ್ರಪಿತಾಮಹ' ಎಂದೆನಿಸಿದ್ದಾರೆ. ಭಾವ, ರಾಗ, ತಾಳ ಸಂಯೋಗದಿಂದ







ಕರ್ನಾಟಕ ಸಂಗೀತವು ಶ್ರೋತೃಗಳನ್ನು ಅನುಭವದಲ್ಲಿ ಮುಳುಗಿಸುತ್ತದೆ. 'ಲಂಬೋದರ ಲಕುಮಿಕರಾ....' , 'ಕೆರೆಯ ನೀರನು ಕೆರೆಗೆ ಚೆಲ್ಲಿ...' ಎಂಬಂತಹ ಕೃತಿಗಳು ಸಂಗೀತ ಶಿಕ್ಷಣದ ಪ್ರಥಮ ಪಾಠ ಹಾಗೂ ಸನಾತನ ಸತ್ಯವನ್ನು ಸಾರುವ ಸಂಗತಿಯಾಗಿದೆ. ಕರ್ನಾಟಕ ಸಂಗೀತವು ವಿಶ್ವದಲ್ಲಿಯೇ ಅಮರ ಸ್ಥಾನ ಪಡೆದಿದೆ.

ರಾಜಕೀಯ ಕ್ಷೇತ್ರದಲ್ಲಿ ಅಮರತ್ವದ ಕೊಡುಗೆಯನ್ನು ವಿಜಯನಗರ ಸಾಮ್ರಾಜ್ಯದಲ್ಲಿ ಕಾಣಬಹುದು. ಕ್ರಿಸ್ತಶಕ ೧೩೩೬ರಲ್ಲಿ ವಿದ್ಯಾರಣ್ಯ ಸ್ವಾಮಿಗಳ  ಸ್ಫೂರ್ತಿ ಅನುಗ್ರಹದಲ್ಲಿ ಹಕ್ಕ - ಬುಕ್ಕರಾಯರಿಂದ ರೂಪುಗೊಂಡ ವಿಜಯನಗರ ಸಾಮ್ರಾಜ್ಯವು ನಂತರದ ೨೩೦ ವರ್ಷಗಳ ಕಾಲ ವಿಜೃಂಭಣೆಯಿಂದ ವಿರಾಜಿಸಿತು. ವಿಜಯನಗರ ಸಾಮ್ರಾಜ್ಯವು ಶ್ರೀಕೃಷ್ಣದೇವರಾಯನಂತಹ ರಾಜಮಣಿಗಳನ್ನು ನೀಡಿತು. ಅಧ್ಯಾತ್ಮ, ಆರ್ಥಿಕ, ಕಲೆ, ಶಿಲ್ಪ ಎಲ್ಲ ರೀತಿಯಲ್ಲಿಯೂ ಭವ್ಯವಾಗಿ ವಿಶ್ವದ ವಿವಿಧ ಯಾತ್ರಾ ವಿದ್ವಾಂಸರನ್ನು ಆಕರ್ಷಿಸಿ ಅವರ ಬರವಣಿಗೆಗಳಲ್ಲಿ ವಿಜಯನಗರವನ್ನು ಅಮರವಾಗಿಸಿದ್ದಾರೆ. ಈ ಸಾಮ್ರಾಜ್ಯದಲ್ಲಿಯೇ ಶ್ರೀಸಾಯಣಾಚಾರ್ಯರು ವೇದಭಾಷ್ಯ ರಚಿಸಿದುದು. ಶ್ರೀಪಾದರಾಜರು ಪ್ರವರ್ತಕರಾದ ದಾಸ ಸಂಪ್ರದಾಯದ ನೆಲೆಯಾಯಿತು ವಿಜಯನಗರ. ಬದಲಾವಣೆಯಾಗುವ ರಾಜಕೀಯ ಕ್ಷೇತ್ರದಲ್ಲಿ ಅಮರ ತತ್ವಗಳನ್ನು ಅದರ ಪ್ರಯೋಗವನ್ನು ಕಾಣಬೇಕಾದರೆ ವಿಜಯನಗರದ ಇತಿಹಾಸವನ್ನು ಓದಲೇಬೇಕು.

ಕಲೆಗಳ ತವರೂರು ಎಂದೆನಿಸಿದ ಬೇಲೂರಿನ ಕಲಾವೈಭವದಲ್ಲಿ ಅಮರತ್ವವನ್ನು ಕಾಣಬಹುದು. ಬೇಲೂರಿನ ಶ್ರೀಚೆನ್ನಕೇಶವನ ದೇವಾಲಯದಲ್ಲಿ ಶಿಲ್ಪಕಲೆಗಳ ಪರಾಕಾಷ್ಠೆಯನ್ನು ಕಾಣಬಹುದು. ಶಿಲಾಬಾಲಿಕೆಯರ ಶಿಲ್ಪಗಳು ಸೌಂದರ್ಯ, ಕಲೆ, ಭಾವ ಎಲ್ಲವನ್ನು ಸಮಗ್ರವಾಗಿ ದಿಗ್ದರ್ಶಿಸುತ್ತಿವೆ. ಬೇಲೂರು - ಹಳೇಬೀಡು - ಸೋಮನಾಥಪುರದಲ್ಲಿನ ದೇವಾಲಯಗಳು ಕರ್ನಾಟಕದಲ್ಲಿರುವ ಅನೇಕಾನೇಕ ದೇವಾಲಯಗಳ ಪ್ರತೀಕ.

ಈ ರೀತಿ ವಿವಿಧ ಕ್ಷೇತ್ರಗಳಲ್ಲಿ ಅಮರ ಕೊಡುಗೆ ನೀಡಿರುವ ಕರ್ನಾಟಕ ಈಗಿನ ಆಧುನಿಕ ಕಾಲದಲ್ಲಿಯೂ ಅಮರ ಹಿನ್ನೆಲೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಮುಂದಾಳಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಸರ್. ಸಿ.ವಿ.ರಾಮನ್ ಅವರ ಸಂಶೋಧನಾಲಯ ಹಾಗೂ ವಿಶ್ವ ವಿಖ್ಯಾತ 'ಭಾರತೀಯ ವಿಜ್ಞಾನ ಮಂದಿರ'  ಕರ್ನಾಟಕದಲ್ಲಿ ನೆಲೆಸಿವೆ.  ತಾಂತ್ರಿಕ ಕ್ಷೇತ್ರದಲ್ಲಿ ಸರ್ ಎಮ್. ವಿಶ್ವೇಶ್ವರಯ್ಯನವರು ವಿಶ್ವದಲ್ಲಿಯೇ ಶ್ರೇಷ್ಠ ತಾಂತ್ರಿಕ ಜ್ಞಾನ ಹಾಗೂ ಕಾರ್ಯ ದಕ್ಷತೆಯಲ್ಲಿ ಅಮರ ಕೊಡುಗೆ ನೀಡಿದ್ದಾರೆ.

ಈ ಸಂಕ್ಷಿಪ್ತ ಲೇಖನದ ಉದ್ದೇಶವೇನೆಂದರೆ, ಈ ನಮ್ಮ ಕನ್ನಡಕೂಟಗಳ ಸಮಾರಂಭದಲ್ಲಿ ನಮ್ಮ ಕರ್ನಾಟಕದ ಗತ ವೈಭವ ಹಾಗೂ ಪ್ರಸ್ತುತ ವೈಭವದ ಹಿಂದಿರುವ ಅಮರತ್ವವನ್ನು ಕಾಣುವುದು. ಎಲ್ಲೆಡೆಯ ಕನ್ನಡಿಗರೆಲ್ಲರೂ ತಮ್ಮ ಭಾಷೆ, ಭಾವ, ಸಂಸ್ಕೃತಿ, ಸಾಹಿತ್ಯ ಎಲ್ಲವನ್ನೂ ಮರೆಯದೇ ಉಳಿಸಿ ಬೆಳೆಸಬೇಕು. ಈ ಪ್ರಯತ್ನ ಮೂಲ ಕರ್ನಾಟಕದಲ್ಲಿಯೂ ನಡೆಯುತ್ತಿದೆ. ಉದಾಹರಣೆಗೆ ಬೆಂಗಳೂರಿನ ಭಾರತದರ್ಶನ ಎಂಬ ಸಂಸ್ಥೆಯು ೫೨ ಸಂಪುಟಗಳಲ್ಲಿ ರಾಮಾಯಣ - ಮಹಾಭಾರತ - ಶ್ರೀಮದ್ಭಾಗವತ ಗ್ರಂಥಗಳನ್ನು ತಿಳಿಕನ್ನಡದಲ್ಲಿ (ಸಂಸ್ಕೃತ ಮೂಲದ ಜೊತೆಗೆ ಅರ್ಥ ನೀಡಿ) ಪ್ರಕಟಿಸಿದೆ. ಎಲ್ಲ ಕನ್ನಡಿಗರೂ ಮಾನವತೆಯ ಅಮರ ಸಾಹಿತ್ಯವನ್ನು ಕನ್ನಡದಲ್ಲಿ ಓದಿ ಆನಂದಿಸಲು ಇದೊಂದು ಸದವಕಾಶ. ಈ ಚಿರಂತನ ಬೇರಿನ ಮೇಲೆ ನಿಂತಿದೆ ಕರ್ನಾಟಕದ ಮಧ್ಯಕಾಲೀನ ಹಾಗೂ ಈಗಿನ ಸಾಹಿತ್ಯ. ಈ ಶುಭ ಸಂದರ್ಭದಲ್ಲಿ ನನಗೆ ಸನಾತನ ಧರ್ಮದ ಆ ಸಂಸ್ಕೃತಿಯ ಅಮರತ್ವದ ಮಹತ್ವವನ್ನು ಮನಗಾಣಿಸಿ ನನ್ನ ಜೀವನದ  ಸ್ಫೂರ್ತಿಯಾಗಿ ನನ್ನ ಹೃದಯಗುರುವಾದ ಕರ್ನಾಟಕದ ಮಹಾಯೋಗಿಗಳೂ ಹಾಗೂ ಜ್ಞಾನಿಗಳೂ ಆದ ಶ್ರೀ ಶ್ರೀರಂಗಸದ್ಗುರುವಿನ ಅಮರವಾಣಿಯನ್ನು ಸ್ಮರಿಸುತ್ತೇನೆ:

ಕಲೆಯ ಪೆಣ್ಣಿಗೆ ರಂಗದೆಡೆಯಿದು
ಸಲೆ ನಲಿವುದಕೆ ಸಿರಿಗೆವಸಿಸಲು
ನೆಲೆಯ ಮನೆಯಿದು ವೇದಧರ್ಮದ ಮೊಳಕೆಗಳು ಬಳೆದು
ಫಲಿಸಿವುದಕಿದು ಮೇಣ್ ಶಮದಮದ-
ಮಲ ಶಾಂತಿಗೆ ಬೀಡೆನಿಸಿ ಮೆರೆದ
ಲಲಿತಭಾರತ ಮರಳಿ ಬೆಳಗಲಿ ಸಗ್ಗಕೆಣೆಯಾಗಿ

ಗ್ರಂಥ ಸೂಚಿ:


1. ಧೀಮಂತ ಕರ್ನಾಟಕ, ಅರಳುಮಲ್ಲಿಗೆ ಪಾರ್ಥಸಾರಥಿ, ರಾಘವೇಂದ್ರ ಪ್ರಕಾಶನ, ಬೆಂಗಳೂರು - 1986.
2. ದಾಸ ಸಾಹಿತ್ಯ ವಾಹಿನಿ, ಅರಳುಮಲ್ಲಿಗೆ ಪಾರ್ಥಸಾರಥಿ, ರಾಘವೇಂದ್ರ ಪ್ರಕಾಶನ, ಬೆಂಗಳೂರು - 1997
3. ರಾಮಾಯಣ - ಮಹಾಭಾರತ - ಭಾಗವತ, ಭಾರತದರ್ಶನ ಪ್ರಕಾಶನ, ಬೆಂಗಳೂರು ೧೯೯೭ (೫೨ ಸಂಪುಟಗಳು)
4. ಅಮರವಾಣಿ (೧೭ ಸಂಪುಟಗಳು), ಶ್ರೀರಂಗ ಸದ್ಗುರುವಿನ ಪ್ರವಚನಗಳು, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಬೆಂಗಳೂರು, ೨೦೦೧.
5. ಭವ್ಯ ಮಾನವ, ಸಂ.ಶಿ. ಭೂಸನೂರು ಮಠ, ಮಂಗಳೂರು - 1983
6. ಪುರಂದರ ದರ್ಶನ (೪ ಸಂಪುಟಗಳು), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು - 1988.








# ವಿಶ್ವ ಸಾಹಿತ್ಯದ ವಿಶಿಷ್ಟ ಸಂವಾದ - ಶ್ರೀಕೃಷ್ಣಾರ್ಜುನ ಸಂವಾದ



ಡಾ। ಎಮ್. ಜಿ. ಪ್ರಸಾದ್

ಹಿನ್ನೆಲೆ :-

ಸಂವಾದ, ಮಾತುಕತೆ, ಪರಸ್ಪರ ವಿಚಾರ ವಿನಿಮಯ ಮಾನವ ಜನಾಂಗದ ಎಲ್ಲ ಮಟ್ಟಗಳಲ್ಲಿಯೂ ಅತಿ ಪ್ರಾಮುಖ್ಯತೆಯನ್ನು ಹೊಂದಿದೆ. ಮನಸ್ಸಿನಲ್ಲಿರುವ ಭಾವನೆಯನ್ನು, ಭಾಷೆಯನ್ನು, ಮಾಧ್ಯಮವಾಗಿಟ್ಟುಕೊಂಡು ಮಾತನಾಡಿ ತಿಳಿಯಪಡಿಸುವುದು ಮಾನವ ಜನಾಂಗ ಹಾಗೂ ಪ್ರಾಣಿಗಳನ್ನು ಬೇರ್ಪಡಿಸುವ ಲಕ್ಷಣವಾಗಿದೆ. ಇಂತಹ ವಾಕ್ ಶಕ್ತಿಯನ್ನು ವಿಶೇಷ ರೂಪದಲ್ಲಿ ಪಡೆದಿರುವ ಮಾನವನು ಜ್ಞಾನಾರ್ಜನೆಗೆ ತನಗಿಂತ ತಿಳಿದವರಿಂದ (ಇತರ ಮಾನವ ಅಥವಾ ಅವತಾರ ರೂಪ ಮಾನವ) ಪ್ರಶ್ನೆಗಳ ಮೂಲಕ ವಿಚಾರ ವಿನಿಮಯ ಮಾಡುವುದು ಸಹಜ. ಸಂವಾದಗಳು ಎಲ್ಲ ಮಟ್ಟಗಳಲ್ಲಿಯೂ (ಭೌತಿಕ, ದೈವಿಕ, ಆಧ್ಯಾತ್ಮಿಕ) ಅವಶ್ಯಕ. ಇಂತಹ ಅನೇಕ ರೀತಿಯ ಸಂವಾದಗಳಲ್ಲಿ ಆಧ್ಯಾತ್ಮಿಕ ಮಟ್ಟದ ಸಂವಾದಗಳು ಬಹಳ ಗಹನವಾದುವು. ಈ ಗಹನತೆ ಸಂವಾದದಲ್ಲಿ ಭಾಗವಹಿಸುವವರ ಅನುಭವ, ಜ್ಞಾನ, ಧ್ಯೇಯ ಇತ್ಯಾದಿ ಗುಣಗಳನ್ನು ಅವಲಂಬಿಸುತ್ತದೆ. ವಿಶ್ವ ಸಾಹಿತ್ಯದಲ್ಲಿ ಸಂವಾದಗಳ ಮೂಲಕ ಪ್ರಕಟವಾಗಿರುವ ಸಾಹಿತ್ಯ ಅಗಣಿತ ಸಂಖ್ಯೆಯಲ್ಲಿವೆ. ನಾಟಕ ಸಾಹಿತ್ಯವೇ ಸಂವಾದಗಳನ್ನು ಆಧರಿಸಿದೆ. ವಿಶೇಷವಾಗಿ ಅಧ್ಯಾತ್ಮಿಕ ವಿಚಾರ ವಿನಿಮಯವು ಸಂವಾದಗಳನ್ನು ಆಧರಿಸಿದೆ. ಭಾರತೀಯ ವೇದಾಂತ ಸಾಹಿತ್ಯವು ಸಂವಾದಗಳ ರೂಪಿನಲ್ಲಿ ಹೊರಬಂದಿದೆ. ಇದೇ ರೀತಿ ಗ್ರೀಕ್ ಸಾಹಿತ್ಯದ ಅಧ್ಯಾತ್ಮ ವಿಚಾರಗಳ ಬಗ್ಗೆ ಸಾಕ್ರಟಿಸ್ ಹಾಗೂ ಶಿಷ್ಯರಲ್ಲಿ ನಡೆದ ಸಂವಾದ ಪ್ರಸಿದ್ಧವಾಗಿದೆ. ವೇದಾಂತ ಸಾಹಿತ್ಯವಾದ ಉಪನಿಷತ್ತುಗಳು ಬಹುಪಾಲು ಸಂವಾದದ ರೂಪದಲ್ಲಿ ಬಂದಿವೆ. ಅನೇಕಾನೇಕ ಮಹಾಋಷಿಗಳ (ವ್ಯಾಸ, ಭೃಗು, ಗೌತಮ, ಗಾರ್ಗಿ, ಸತ್ಯಕಾಮ, ವಸಿಷ್ಠ, ಪತಂಜಲಿ ಇತ್ಯಾದಿ) ಸಂವಾದಗಳೇ ಭಾರತೀಯ ದಾರ್ಶನಿಕ ಸಾಹಿತ್ಯವನ್ನು ತುಂಬಿವೆ. ಅತಿ ಪ್ರಾಚೀನವಾದ ಈ ದಾರ್ಶನಿಕ ಸಾಹಿತ್ಯ ಇಂದಿಗೂ ಬೆಳಕು ನೀಡುತ್ತಿರುವುದು ಈ ಸಂವಾದದ ರೂಪದಲ್ಲಿದ್ದು ಅತಿ ಗಹನವಾದ ವಿಷಯವನ್ನು ಆಧರಿಸಿರುವುದರಿಂದ ಎನ್ನಬಹುದು. ಸತ್ಯ ಶೋಧನೆಯ ಮಾರ್ಗದಲ್ಲಿ ಹೊರಬಂದ ತತ್ವಗಳನ್ನು ಋಷಿಗಳು ತಮ್ಮ ಹೆಸರಿಗಿಂತ ಮುಖ್ಯವಾಗಿ ವಿಷಯ ತತ್ವ ನಿರೂಪಣೆಗಳನ್ನು ಸಂವಾದದ ರೂಪಿನಲ್ಲಿಟ್ಟು ಮಾನವ ಜನಾಂಗಕ್ಕೆ ಅಳಿಯದ ಜ್ಞಾನ ಭಂಡಾರವನ್ನು ನೀಡಿದ್ದಾರೆ.

ಶ್ರೀ ಕೃಷ್ಣಾರ್ಜುನ ಸಂವಾದ - ಶ್ರೀಮದ್ಭಗವದ್ಗೀತಾ ಮಹರ್ಷಿ ವೇದವ್ಯಾಸರಿಂದ ನಿರೂಪಿತವಾದ ಮಹಾಭಾರತದಲ್ಲಿನ ಪಂಚರತ್ನಗಳಲ್ಲಿ ವಿಶೇಷವಾಗಿ ಕಾಣಬರುವುದೇ ಶ್ರೀಕೃಷ್ಣಾರ್ಜುನ ಸಂವಾದದ ರೂಪದಲ್ಲಿ ಮೂಡಿ ಬಂದಿರುವ ಶ್ರೀಮದ್ಭಗವದ್ಗೀತೆ. ಇದು ಜೀವನದ ಎಲ್ಲ ಮಟ್ಟಗಳಲ್ಲಿಯ ಮಾನಸಿಕ ಸಮಸ್ಯೆಗಳಿಗೆ ಸಮಾಧಾನ ನೀಡುವ ಕೈಪಿಡಿ ಎನ್ನಬಹುದು. ಗೀತೆಯು ಭಾರತೀಯ ದರ್ಶನದ ಪ್ರಸ್ಥಾನತ್ರಯದಲ್ಲಿ ಒಂದಾಗಿದೆ. ಮಿಕ್ಕ ಎರಡು ಉಪನಿಷತ್ತು ಮತ್ತು ಬ್ರಹ್ಮಸೂತ್ರ. ಸರ್ವ ಉಪನಿಷತ್ತುಗಳ ಸಾರವಾಗಿ, ಹದಿನೆಂಟು ಅಧ್ಯಾಯಗಳನ್ನು ಒಳಗೊಂಡ ಭಗವದ್ಗೀತೆಯಲ್ಲಿ ಮಹಾವೀರ, ಮಹಾಭಕ್ತ, ಜಿಜ್ಞಾಸುವಾದ ಅರ್ಜುನನು ವಿವಶನಾಗಿ, ಸರ್ವಜ್ಞನಾದ, ಸರ್ವವ್ಯಾಪಿಯಾದ ಪರಮಾತ್ಮನಾದ ಶ್ರೀ ಕೃಷ್ಣನನ್ನು ಕೇಳಿದ ಪ್ರಶ್ನೆಗಳು ಮತ್ತು ಆ ಪ್ರಶ್ನೆಗಳಿಗೆ ಜಗದ್ಗುರುವಾದ ಶ್ರೀಕೃಷ್ಣನು ನೀಡಿದ ಸಮಂಜಸ ಉತ್ತರಗಳು ಮೂಡಿವೆ. ಭಗವದ್ಗೀತೆಯನ್ನು ಒಂದು ಸಂವಾದದ ದೃಷ್ಟಿಕೋನದಲ್ಲಿ ನೋಡಿದಾಗ ಅರ್ಜುನನ ಪ್ರಶ್ನೆಗಳು ಎಷ್ಟು ಗಹನವಾದುವು ಎಂಬುದು ಅರಿವಿಗೆ ಬರುತ್ತದೆ. ಪ್ರಶ್ನೆಯನ್ನು ಕೇಳುವುದು ಸುಲಭ ಎಂದೆನಿಸಬಹುದು, ಆದರೆ ಗಹನವಾದ ಪ್ರಶ್ನೆಯನ್ನು ಕೇಳುವುದು ಎಷ್ಟು ಕಷ್ಟ ಎನ್ನುವುದು ಪ್ರಯತ್ನಿಸಿದವರ ಅನುಭವಕ್ಕೆ ಬರುತ್ತದೆ. ಅದೇ ರೀತಿ ಸಾಮಾನ್ಯ ಪ್ರಶ್ನೆಗೆ ಸಮಾಧಾನ ನೀಡುವುದು ಬಹು ಸುಲಭ, ಆದರೆ ಗಹನವಾದ ಪ್ರಶ್ನೆಗೆ ಸಮಂಜಸ ಉತ್ತರ ನೀಡುವುದು ಅಷ್ಟು ಸುಲಭವಲ್ಲ. ಕುತೂಹಲಕ್ಕೆ ಕೇಳುವ ಪ್ರಶ್ನೆ , ಕುಚೋದ್ಯ ಅಥವಾ ವ್ಯಂಗ್ಯಕ್ಕೆ ಕೇಳುವ ಪ್ರಶ್ನೆಗಿಂತ ಉನ್ನತ ಮಟ್ಟದ್ದು. ಅದೇ ರೀತಿ ತಿಳಿಯುವ ಮನಸ್ಸಿನಿಂದ ಕೇಳುವ ಪ್ರಶ್ನೆ ಕೇವಲ ಕುತೂಹಲಕ್ಕೆ ಕೇಳುವ ಪ್ರಶ್ನೆಗಿಂತ ಗಹನವಾಗಿರುತ್ತದೆ. ಪ್ರಶ್ನೆ ಎಷ್ಟು ಆಳವಾದ ವಿಚಾರದಿಂದ ಮೂಡಿ ಬರುತ್ತಿದೆಯೋ ಅಷ್ಟೇ ಆಳವಾದ ಹಾಗೂ ಗಹನವಾದ ಉತ್ತರವನ್ನು







ಅಪೇಕ್ಷಿಸುತ್ತದೆ. ಈ ಪ್ರಶ್ನೆ - ಉತ್ತರಗಳ ವೈಚಾರಿಕ ಹಿನ್ನೆಲೆಯಲ್ಲಿ ನೋಡಿದಾಗ ಶ್ರೀ ಕೃಷ್ಣಾರ್ಜುನ ಸಂವಾದವು ಅತಿ ಗಹನವಾದ ಆದರ್ಶವಾದ ಸಂವಾದ ಎಂದು ಕಾಣುತ್ತದೆ. ಎಲ್ಲ ಕಾಲದಲ್ಲಿಯೂ ಜಿಜ್ಞಾಸುಗಳಿಗೆ ಕೈಪಿಡಿಯಾಗಿರುತ್ತದೆ. ಅರ್ಜುನನ ಪ್ರಶ್ನೆಗಳ ಗಹನತೆಯನ್ನು ಅರ್ಥಮಾಡಿಕೊಂಡರೆ ನಂತರ ಶ್ರೀ ಕೃಷ್ಣನ ಉತ್ತರಗಳ ಗಹನತೆಯ ಬಗ್ಗೆ ಒಂದು ನೋಟ ಬರುತ್ತದೆ. ಶ್ರೀಕೃಷ್ಣನು ನೀಡುವ ಉತ್ತರದಲ್ಲಿ ತತ್ವಗಳ ಸಮೂಹವೇ ಅಡಗಿದೆ. ಉದಾಹರಣೆಗೆ ಭಕ್ತಿಯೋಗದಲ್ಲಿ ಶ್ರೀಕೃಷ್ಣನು ನೀಡುವ ಉತ್ತರಗಳಲ್ಲಿ ಭಕ್ತಿಯನ್ನು ಆಧರಿಸಿದರೂ ಅನೇಕವಾದ ಮತ್ತಿತರ ತತ್ವಗಳಾದ ದೃಢ ನಿಶ್ಚಯ, ಸಮಾನತೆ, ಅಭ್ಯಾಸ ಇತ್ಯಾದಿಗಳು ಮೂಡಿವೆ. ಈ ರೀತಿ ಶ್ರೀ ಭಗವದ್ಗೀತೆಯನ್ನು ಸಂವಾದದ ರೂಪದಲ್ಲಿ ನೋಡಿದಾಗ ಮೂಡುವ ವಿಚಾರಗಳನ್ನು ಸಂಕ್ಷಿಪ್ತವಾಗಿ ಇಡುವುದೇ ಈ ಕಿರು ಲೇಖನದ ಉದ್ದೇಶ. ಈ ಸಂವಾದವು ಒಂದು ಸಾಗರದಂತೆ. ಈ ಕಿರು ಲೇಖನದ ಪುಟ್ಟ ಪ್ರಯತ್ನವನ್ನು ಶ್ರೀಕೃಷ್ಣನ ಸೇವೆಯ ಭಾವದಲ್ಲಿ ಅರ್ಪಿಸಿದೆ. ಈ ಸಂವಾದ ಸಾಗರದ ಆಳಕ್ಕೆ ಹೋದಾಗಲೇ ಜಿಜ್ಞಾಸುಗಳಿಗೆ ಸಮಾಧಾನ ದೊರಕಲು ಸಾಧ್ಯ.

ಅರ್ಜುನನ ಪ್ರಶ್ನೆಗಳು -

ಏಳುನೂರು ಶ್ಲೋಕಗಳನ್ನು ಒಳಗೊಂಡ ಶ್ರೀ ಕೃಷ್ಣಾರ್ಜುನ ಸಂವಾದದಲ್ಲಿ ಅರ್ಜುನನ ಪ್ರಶ್ನೆಗಳ ರೂಪದಲ್ಲಿರುವ ಶ್ಲೋಕಗಳನ್ನು ಕ್ರೋಢೀಕರಿಸಿ ನೋಡಿದರೆ ೨೦ ಪ್ರಶ್ನೆಗಳನ್ನಾಗಿ ರೂಪಿಸಬಹುದು. ಈ ಪ್ರಶ್ನೆಗಳಲ್ಲಿಯೂ ಕೆಲವು ಅತಿ ಗಹನವಾಗಿದ್ದು ಜಿಜ್ಞಾಸುಗಳಿಗೆ ಬರುವ ಅನೇಕಾನೇಕ ಪ್ರಶ್ನೆಗಳ ಸಾರಭೂತವಾಗಿ ಕಂಡುಬರುತ್ತದೆ. ಅರ್ಜುನನ ಪ್ರಶ್ನೆಗಳನ್ನು ಆರಂಭದಿಂದ ಕೊನೆಯವರೆಗೆ ನೋಡಿದಾಗ ವಿವಶತೆ, ವಿಷಾದದಿಂದ ಜನಿಸಿದ ಪ್ರಶ್ನೆಗಳು, ನಂತರ ಸ್ಥಿತಪ್ರಜ್ಞನ ಲಕ್ಷಣಗಳು, ನಿಷ್ಕಾಮ ಕರ್ಮ, ಮನೋ ನಿಗ್ರಹ, ಕರ್ಮಸಂನ್ಯಾಸ, ಶ್ರದ್ಧೆ, ಕರ್ಮ, ಭಕ್ತಿ, ಜ್ಞಾನ, ಪರಮಾತ್ಮನ ವಿಶ್ವರೂಪ, ಸಾಕಾರ-ನಿರಾಕಾರ ಭಕ್ತಿ, ಪುರುಷ-ಪ್ರಕೃತಿ, ಕ್ಷೇತ್ರ-ಕ್ಷೇತ್ರಜ್ಞ, ವಿವಿಧ ಗುಣಗಳು, ಸಂನ್ಯಾಸ, ಮೋಕ್ಷ ಈ ರೀತಿಯಾದ ಅತಿ ಗಹನವಾದ ಹಾಗೂ ಮಾನವ ಜನಾಂಗಕ್ಕೆ ಅನ್ವಯಿಸುವ ವಿಷಯಗಳ ಬಗ್ಗೆ ಪ್ರಶ್ನೆಗಳು ಮೂಡಿರುವುದು ಕಾಣಿಸುತ್ತದೆ. ಕಡೆಗೆ ಅರ್ಜುನನು ಶ್ರೀ ಕೃಷ್ಣನಿಂದ ದೊರಕಿದ ಉತ್ತರಗಳಿಂದ ಸಮಾಧಾನ ಪಡೆದುದನ್ನು ತಿಳಿಸುತ್ತಾನೆ. ಈ ಪ್ರಶ್ನೆಗಳನ್ನು ಮೊದಲು ಅರಿಯಲು ಪ್ರಯತ್ನಿಸಬೇಕು. ಪ್ರಶ್ನೆಗಳ ಆಳ ಹಾಗೂ ವಿಸ್ತಾರತೆ ಎರಡನ್ನೂ ವಿಚಾರಮಾಡಿ ಅರಿತಮೇಲೆ ಉತ್ತರಗಳ ಬಗ್ಗೆ ಗಮನ ನೀಡಬಹುದು.

ಉದಾಹರಣೆಗೆ ೩ನೇ ಅಧ್ಯಾಯದಲ್ಲಿ ೧ನೇ ಶ್ಲೋಕ ನೋಡಿದಾಗ ಅರ್ಜುನನ ಪ್ರಶ್ನೆ ಈ ರೀತಿಯಾಗಿದೆ. ‘‘ಜನಾರ್ದನ, ಜ್ಞಾನವು ಕರ್ಮಕ್ಕಿಂತ ಉತ್ತಮವೆಂದಮೇಲೆ, ಅದರಲ್ಲೂ ಈ ಘೋರ ಕರ್ಮದ ರೂಪದಲ್ಲಿರುವ ಬಂಧುಗಳ ಮೇಲೆ ಯುದ್ಧವನ್ನು ಮಾಡಲು ಏಕೆ ಪ್ರೇರಿಸುತ್ತಿದ್ದೀಯಾ?’’ ಮುಂದೆ ೩:೩೬ರ ಪ್ರಶ್ನೆ ಈ ರೀತಿ ಇದೆ. ‘‘ಕೃಷ್ಣ , ತನಗೆ ಇಷ್ಟವಿಲ್ಲದಿದ್ದರೂ ಬಲವಂತವಾಗಿಯೋ ಎಂಬಂತೆ ಏಕೆ ಒಬ್ಬನು ಪಾಪವನ್ನು ಮಾಡುತ್ತಾನೆ (೪)?" ನಂತರ ೬:೩೩-೩೪ರಲ್ಲಿ ಅರ್ಜುನನು ‘‘ಮಧುಸೂದನ, ಮನಸ್ಸು ಬಹಳ ಚಂಚಲವಾದದ್ದು. ನೀನು ಹೇಳುತ್ತಿರುವ ಅಚಲವಾದ ಸ್ಥಿತಿ ಕಾಣುತ್ತಿಲ್ಲ. ಗಾಳಿಯನ್ನು ಹೇಗೆ ನಿಗ್ರಹಿಸುವುದು ಕಷ್ಟವೋ ಹಾಗೆಯೇ ಮನೋನಿಗ್ರಹವೂ ಕಷ್ಟವಾದುದು’’ ಎಂದು ಹೇಳುತ್ತಾನೆ. ಮತ್ತೆ ೬:೩೭-೩೮ ರಲ್ಲಿ ‘‘ಕೃಷ್ಣ! ಒಬ್ಬನಿಗೆ ಶ್ರದ್ಧೆಯಿದ್ದರೂ ಮನಸ್ಸನ್ನು ನಿಗ್ರಹ ಮಾಡಲು ಆಗದೆಯೇ ಸಮತ್ವವನ್ನು ಪಡೆಯದೆ ದೂರವಾಗಿ ಕರ್ಮ, ಜ್ಞಾನಯೋಗದಿಂದಲೂ ಇರಲಾಗದಿದ್ದರೆ ಚದುರಿದ ಮೋಡದಂತೆ ಅವನ ಸ್ಥಿತಿಯಾಗುವುದಲ್ಲವೇ?’’ ಎಂದೂ ಕೇಳಿದ್ದಾನೆ. ೧೮:೧ರಲ್ಲಿ ಅರ್ಜುನನು ‘‘ಕೃಷ್ಣ, ಸಂನ್ಯಾಸ ಮತ್ತು ತ್ಯಾಗದ ತತ್ತ್ವಗಳನ್ನು ತಿಳಿಯಲು ಇಚ್ಛಿಸುತ್ತೇನೆ’’ ಎಂದು ಕೇಳಿ, ಅದರ ಉತ್ತರಗಳಾದ ಮೇಲೆ ೧೮ನೇ ಅಧ್ಯಾಯದಲ್ಲಿ ೭೩ನೇ ಶ್ಲೋಕದಲ್ಲಿ ‘‘ನಿನ್ನಿಂದ ನನ್ನ ಮೋಹವು ನಷ್ಟವಾಗಿ ಸಂದೇಹ, ಪ್ರಶ್ನೆಗಳ ಸಮಾಧಾನವಾಗಿದೆ. ನಾನು ನೀನು ಹೇಳಿದಂತೆ ಕರ್ಮದಲ್ಲಿ ತೊಡಗುವೆನು’’ ಎಂದು ಶ್ರೀಕೃಷ್ಣ ಪರಮಾತ್ಮನಿಗೆ ಹೇಳಿದಾಗ ಈ ಸಂವಾದವೂ ಮುಕ್ತಾಯವಾಗುತ್ತದೆ.

ಶ್ರೀಕೃಷ್ಣ ಪರಮಾತ್ಮನ ಉತ್ತರಗಳು -

ಅತಿ ಗಹನವಾದ ಪ್ರಶ್ನೆಯನ್ನು ಬಹಳ ವಿಚಾರಮಾಡಿ ಅರ್ಥ ಮಾಡಿಕೊಂಡ ಮೇಲೆ ಅದಕ್ಕೆ ಸಿಗುವ ಉತ್ತರಗಳನ್ನು ಅರ್ಥ ಮಾಡಿಕೊಂಡು ಅನುಭವಾತ್ಮಕವಾಗಿಸುವುದು ಎಷ್ಟು ಕಠಿಣ! ಶ್ರೀಕೃಷ್ಣನ ಉತ್ತರಗಳು ವಿಸ್ತಾರವಾಗಿದ್ದು ಸಮಗ್ರವಾಗಿ ಎಲ್ಲ ಅಂಶಗಳನ್ನು ಕೂಡಿ ೫೭೪ ಶ್ಲೋಕಗಳಲ್ಲಿ ಮೂಡಿಬಂದಿದೆ. ಅನೇಕ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿರುವ ಶ್ಲೋಕಗಳ ಸಂಖ್ಯೆ ಬಹಳವಾಗಿದ್ದು ಕೆಲವು ಪ್ರಶ್ನೆಗಳಿಗೆ ಉತ್ತರವಾಗಿ ೩-೪ ಶ್ಲೋಕಗಳು ಮೂಡಿವೆ. ಈ ಕಿರುಲೇಖನದಲ್ಲಿ ಮೇಲೆ ವಿಚಾರಮಾಡಿದ ಪ್ರಶ್ನೋತ್ತರಗಳ ಒಂದು ವಿಹಂಗಮ ನೋಟವನ್ನು ನೀಡಿದ್ದೇನೆ.

೩ನೇ ಅಧ್ಯಾಯದ ೧-೨ನೇ ಶ್ಲೋಕದಲ್ಲಿನ ಪ್ರಶ್ನೆಗೆ ಉತ್ತರವಾಗಿ ೩೩ ಶ್ಲೋಕಗಳು ಹೊರಬಂದಿವೆ. ಮಹಾಭಕ್ತನಾದ







ಅರ್ಜುನನು ಅವನ ಕರುಣೆ ಹಾಗೂ ಸ್ವಜನ ಮೋಹದಿಂದ ಉಂಟಾದ ಭಾವವನ್ನು ನಿಜವಾದ ಜ್ಞಾನವೆಂಬಂತೆ ತಿಳಿದುದು ಈ ಪ್ರಶ್ನೆಗೆ ಕಾರಣವಾಗಿರಬಹುದು. ಅದಕ್ಕೆ ಉತ್ತರಗಳಲ್ಲಿ ಕರ್ಮಯೋಗದ ವಿಷಯಗಳು ಹಾಗೂ ಜ್ಞಾನಪ್ರಧಾನ ಸಾಂಖ್ಯ ಯೋಗದ ವಿಚಾರಗಳು ಬಂದಿವೆ. ಕರ್ಮ ಹಾಗೂ ಜ್ಞಾನದ ಸಂಬಂಧ ಮತ್ತು ಅದು ವಿವಿಧ ವ್ಯಕ್ತಿ ಸ್ವಭಾವಗಳ ಮೇಲೆ ಹೇಗೆ ಅವಲಂಬಿಸಿದೆ ಮತ್ತು ಕರ್ಮದ ಅಗತ್ಯದ ಬಗ್ಗೆಯೂ ಪ್ರಸ್ತಾಪವಿದೆ. ೩:೩೬ರ ಪ್ರಶ್ನೆಗೆ ಕೊಟ್ಟಿರುವ ಶ್ಲೋಕಗಳ ಉತ್ತರದಲ್ಲಿ ವ್ಯಕ್ತಿಯಲ್ಲಿರುವ ರಜೋಗುಣದಿಂದ ಜನಿಸುವ ಕಾಮ, ಕ್ರೋಧಗಳು ಹೇಗೆ ವ್ಯಕ್ತಿಯನ್ನು ಆವರಿಸಿ, ಉದ್ರೇಕಿಸಿ ವಿಚಾರವನ್ನು ಮಸಕುಮಾಡಿ ಕೆಟ್ಟ ಕರ್ಮಗಳಿಗೂ ಉತ್ತೇಜನಕಾರಿಯಾಗಬಲ್ಲದು ಎಂದು ವಿವರಿಸಿದೆ. ನಂತರದ ೬ನೇ ಅಧ್ಯಾಯದ ೩೩-೩೪ನೇ ಶ್ಲೋಕದ ಪ್ರಶ್ನೆಗಳಿಗೆ ಉತ್ತರವು ೨ ಶ್ಲೋಕಗಳಲ್ಲಿ ನಿರೂಪಿತವಾಗಿದೆ. ಮನಸ್ಸನ್ನು ಹಿಡಿಯುವುದು ಎಷ್ಟು ಕಷ್ಟವೆಂಬುದು ಅರ್ಜುನನ ಪ್ರಶ್ನೆಯಿಂದ ಮೂಡಿತು. ಅದಕ್ಕೆ ಶ್ರೀಕೃಷ್ಣ ಪರಮಾತ್ಮನು ಬಹುಕಷ್ಟವೆಂದು ಹೇಳಿ ಕೇವಲ ಅಭ್ಯಾಸ - ವೈರಾಗ್ಯ ಎಂಬ ಎರಡು ಬಲವಾದ ಸಾಧನಗಳಿಂದ ಸಾಧ್ಯ ಎಂದು ಹೇಳಿರುವುದು ಮನನೀಯವಾಗಿದೆ. ಸತ್ಕರ್ಮಗಳ ಅಭ್ಯಾಸ - ದುಷ್ಕರ್ಮಗಳ ವೈರಾಗ್ಯದಿಂದ ಮನೋನಿಗ್ರಹ (control) ಮಾಡಿದಾಗಲೇ ಪ್ರಗತಿ ಎಂದು ಉತ್ತರದ ೨ನೇ ಶ್ಲೋಕದಲ್ಲಿ ಬಂದಿದೆ. ಉತ್ತರ ಸುಲಭವಾಗಿದೆ ಎಂದು ಕಾಣುತ್ತದೆ, ನಿಜ! ಏಕೆಂದರೆ ಎಲ್ಲರಿಗೂ ಅನ್ವಯಿಸುವ ಸುಲಭದ ಉತ್ತರ ಪರಮಾತ್ಮನ ಅವತಾರದ ಶ್ರೀಕೃಷ್ಣನಂತಹವರಿಂದಲೇ ತಾನೇ ಬರಲು ಸಾಧ್ಯ? ಅದೇ ಅಧ್ಯಾಯದ ಇನ್ನೆರಡು ಪ್ರಶ್ನೆಗಳಿಗೆ ೩೮ ಶ್ಲೋಕಗಳ ಉತ್ತರ ಕೊಟ್ಟಿದ್ದಾನೆ ಶ್ರೀಕೃಷ್ಣ. ಶ್ರದ್ಧೆಯೊಂದೇ ಹೇಗೆ ಬೀಳುತ್ತಿರುವ ವ್ಯಕ್ತಿಗೆ ಆಸರೆಯಾಗಿ ಮೇಲಕ್ಕೆ ಎತ್ತಬಲ್ಲುದು ಎಂಬುದೂ, ನಂತರ ಜ್ಞಾನ-ವಿಜ್ಞಾನಗಳ ವಿಚಾರಣೆಯೂ ರೂಪಿತವಾಗಿದೆ. ಹಾಗೆಯೇ ವಿವಿಧ ತತ್ತ್ವಗಳೂ ಭಗವಂತನ ವಿವಿಧ ವಿಭೂತಿಗಳು, ವಿಶ್ವರೂಪದರ್ಶನ ನಿರೂಪಿತವಾಗಿರುವುದು ಮನೋಜ್ಞವಾಗಿದೆ. ೧೮ನೇ ಅಧ್ಯಾಯದಲ್ಲಿ ೧ನೇ ಶ್ಲೋಕ ಈ ಸಂವಾದದ ಕೊನೆಯ ಪ್ರಶ್ನೆ. ಅದಕ್ಕೆ ಉತ್ತರವಾಗಿ ೭೧ ಶ್ಲೋಕಗಳಲ್ಲಿ ಫಲಕಾಮನೆಗಳಿರುವ ಕರ್ಮಗಳನ್ನು ತ್ಯಜಿಸಿದಾಗ ಸಂನ್ಯಾಸವೆಂದು, ಸರ್ವ ಕರ್ಮ (ಫಲ)ಗಳನ್ನು ಬಿಟ್ಟಾಗ ತ್ಯಾಗವೆಂದು ಆರಂಭವಾಗಿ ಸಂನ್ಯಾಸ - ತ್ಯಾಗಗಳ ವಿವರಣೆ ವಿಶದವಾಗಿ ಮೂಡಿದೆ. ಬಹಳ ಗಮನೀಯವಾದ ಅಂಶವು ೧೮ನೇ ಅಧ್ಯಾಯದ ೬೩ನೇ ಶ್ಲೋಕದಲ್ಲಿ ಬಂದಿದೆ. ಶ್ರೀಕೃಷ್ಣನು ವಿವರವಾಗಿ ಎಲ್ಲ ಪ್ರಶ್ನೆಗಳಿಗೂ ಸಮನ್ವಯವಾದ ಉತ್ತರಗಳನ್ನು ನೀಡಿ ೧೮-೬೩ನೇ ಶ್ಲೋಕದಲ್ಲಿ ಅರ್ಜುನನಿಗೆ "ನಿನಗೆ ಗೂಢವಾದ ತತ್ವಗಳನ್ನು ಹೇಳಿದ್ದಾಗಿದೆ. ಇನ್ನು ವಿಚಾರ ಮಾಡಿ ನಿನ್ನ ಇಷ್ಟದಂತೆ ಮಾಡು" ಎಂದು ಸ್ವಾತಂತ್ರ್ಯ ನೀಡಿದಾಗ ಮಹಾಭಕ್ತ, ಮಹಾ ಬುದ್ಧಿಶಾಲಿಯಾದ ಅರ್ಜುನನು ೧೮-೭೩ರಲ್ಲಿ "ನನ್ನ ಮೋಹ ನಷ್ಟವಾಗಿ ನನಗೆ ನಿಜವಾದ ಜ್ಞಾನ (ಸ್ಮೃತಿ) ಬಂದಿದೆ. ನೀನು ಹೇಳಿದಂತೆ ಈ ಧರ್ಮ ಯುದ್ಧದಲ್ಲಿ ತೊಡಗುವೆ" ಎಂದಿದ್ದಾನೆ. ಈ ರೀತಿಯಾದ ಪರಮ ಉತ್ಕೃಷ್ಟವಾದ ಸಂವಾದವು ನಡೆದುದನ್ನು ಶ್ರೀ ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ.

ಸಾರಾಂಶ -

ಈ ಕಿರು ಲೇಖನದಲ್ಲಿ ಭಾರತೀಯ ವೇದಾಂತ ಸಾಹಿತ್ಯದಲ್ಲಿ ಉತ್ಕೃಷ್ಟ ಗ್ರಂಥಗಳಲ್ಲಿ ಒಂದಾದ ಶ್ರೀ ಭಗವದ್ಗೀತೆಯನ್ನು ವಿಶಿಷ್ಟವಾದ ಸಂವಾದದ ರೂಪದಲ್ಲಿ ನೋಡಿ ಕೆಲವು ಪ್ರಶ್ನೆ - ಉತ್ತರಗಳನ್ನು ಸಾರಾಂಶದ ರೂಪದಲ್ಲಿಟ್ಟಿದೆ. ಈ ಸಂವಾದ ವಿಶ್ವದ - ಸಾಹಿತ್ಯದಲ್ಲಿಯೇ ಒಂದು ಅಗ್ರಗಣ್ಯ ಸ್ಥಾನ ಪಡೆದಿದೆ. ವಿಶ್ವದಲ್ಲಿನ ಎಲ್ಲ ದೇಶಗಳಲ್ಲಿ ವಿವಿಧ ಮಹಾವ್ಯಕ್ತಿಗಳಿಗೆ ಸ್ಫೂರ್ತಿ ನೀಡಿದೆ. ಸಾಹಿತ್ಯದ ಭಾಷಾಂತರ, ಅದಕ್ಕೆ ಭಾಷ್ಯ, ವಿಚಾರ ವಿನಿಮಯಗಳು ಅನೇಕಾನೇಕವಾಗಿವೆ.

ಈ ಲೇಖನವು ಶ್ರೀ ಭಗವದ್ಗೀತೆ ಮತ್ತು ಅದನ್ನು ಒಳಗೊಂಡ ಮಹಾಭಾರತದ ಬಗ್ಗೆ ಸ್ಫೂರ್ತಿ ನೀಡಿದರೆ ಸಾಕು ಎಂಬುದೇ ನನ್ನ ಉದ್ದೇಶ. ಈ ಸಾಹಿತ್ಯದ ಬಗ್ಗೆ ಇರುವ ಅನೇಕಾನೇಕ ಗ್ರಂಥರಾಶಿಗಳು ಕನ್ನಡ ಓದುಗರಿಗೆ ಒಂದು ಸದವಕಾಶ. ಈ ಲೇಖಕನಿಗೆ ಸ್ಫೂರ್ತಿನೀಡಿದ ಗ್ರಂಥ ಬೆಂಗಳೂರಿನ ಭಾರತದರ್ಶನ ಸಂಸ್ಥೆಯು ಪ್ರಕಾಶ ಮಾಡಿರುವ ೩೨ ಸಂಪುಟದ ಮಹಾಭಾರತ. ಅದರಲ್ಲಿ ಸಂಪುಟ ೧೨, ೧೩, ೧೪ ಶ್ರೀ ಭಗವದ್ಗೀತೆಯನ್ನು ಒಳಗೊಂಡಿದೆ. ಇದರ ಬಗ್ಗೆ ಲೇಖಕರಿಂದ ಹೆಚ್ಚಿನ ವಿವರ ತಿಳಿಯಬಹುದು.







# ತಮಸೋ ಮಾ ಜ್ಯೋತಿರ್ಗಮಯ

ಹೇಮಾ ಶ್ರೀಕಂಠ



ಅಬ್ಬ, ಎಂತಹ ಅದ್ಭುತ ಸಂದೇಶ.  ಅದರಲ್ಲೂ ಈ ವರ್ಷ ಪೂರ್ವ ಕರಾವಳಿಯ ಜನಗಳಿಗೆ ಇದು ಬಹಳ ಸಾಂಕೇತಿಕವಾಗಿದೆ. ಕತ್ತಲೆ ಹಾಗೂ ಚಳಿಯಿಂದ ಪರಿತಪಿಸಿದ ಜನತೆಗೆ ದೀಪ ಒಂದು ದೊಡ್ಡ ಕೊಡುಗೆ. ದೀಪ ಉರಿಸುವುದು ಸಾಧ್ಯವಾಗಬೇಕಾದರೆ ಮನುಷ್ಯರ ಪರಸ್ಪರ ಸಹಕಾರದಿಂದ ಮಾತ್ರ ಸಾಧ್ಯ. ಬಾಹ್ಯ ಮತ್ತು ಅಂತರ್ " ದೀಪ" ಮನುಷ್ಯನ ಅಭ್ಯುದಯಕ್ಕೆ ಬೇಕೇ ಬೇಕು.

ನಂಗೆ ಕುವೆಂಪು ಅವರ ಒಂದು ಪದ್ಯ ನೆನಪಿಗೆ ಬರುತ್ತಿದೆ "ಏಳು ಎದ್ದೇಳು ನಿದ್ದೆಗಣ್ಣನು ಕೀಳು ಹೊದ್ದಿರ್ದ ವೇದಗಂಬಳಿಯ ಮೂಲೆಗೊದ್ದು, ಎದ್ದು ಬರುತಿಹ ಬಾನು ಎದ್ದಿತಯ್ಯಾ ಜಪಾನು ಬಿದ್ದುಕೊಂಡಿರುವಿಯೇಕೆ ಕತ್ತಲೆಯಲಿ ನೀನು." ಇದನ್ನು ಸ್ವಲ್ಪ ವ್ಯತ್ಯಾಸಮಾಡಿ (ಕ್ಷಮಿಸಿ, ಶ್ರೀ ಕುವೆಂಪು ಅವರೇ) "ಎದ್ದಿತಯ್ಯ ಚೈನಾ, ಅಮೇರಿಕ ನೀನು ಇನ್ನೂ ಮಲಗಿರುವುದು ವೈನಾ?" ಅಮೆರಿಕಾದಲ್ಲಿ ನಮ್ಮೆಲ್ಲರ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ನಮ್ಮ ಹಾಗೂ ಮುಂದಿನ ಜನಾಂಗದವರನ್ನು ಕೇಳಬೇಕಾದಂತಹ ಮುಖ್ಯವಾದ ಪ್ರಶ್ನೆಯಿದು. ದೀಪಾವಳಿಯ ಈ ಸಮಯದಲ್ಲಿ, ಅಮೇರಿಕ ಈಗತಾನೆ ಬಿಳುಪಲ್ಲದ  ಅಧ್ಯಕ್ಷರನ್ನು ಪುನಃ ಚುನಾಯಿಸಿರುವ ಸಮಯ ಅತ್ಯಂತ ಸೂಚಕವಾಗಿದೆ. "ಕಸ್ತೂರಿ ಕಪ್ಪಾದರೂ ಪುನುಗು ಕಪ್ಪೇ?" ಅಂದ ಹಾಗೆ, ಅವರ ಆಚಾರ ವಿಚಾರ ಪ್ರಕಾಶಮಾನವಾಗಿದೆ. ಅವರ ನೇತೃತ್ವದಲ್ಲಿ ಅವರಿಗೆ ನೆರವಾಗಿ ಅಮೆರಿಕದ ಏಳಿಗೆಯಲ್ಲಿ ಭಾಗವಹಿಸಿ ಪ್ರಪಂಚದಲ್ಲಿ ಶಾಂತಿಯೆಂಬ ಬೆಳಕನ್ನು ಹರಡೋಣ.

ಭಾರತದ ಪ್ರಸಿದ್ದ ದೀಪಾವಳಿ
ವಿಶ್ವದ ಮೂಲೆ ಮೂಲೆಯಲ್ಲೂ ಆಚರಿಸಲ್ಪಡುತ್ತದೆ, ಕೇಳಿ
ಹೊರದೋಡಿಸಿತು ಕತ್ತಲಿನ ಧೂಳಿ
ಅಮೆರಿಕಾದ "ಬಿಳಿ ಮನೆ" ಯಲ್ಲೂ ದೀಪಾವಳಿಯ ಸಂಭ್ರಮದ ಗಾಳಿ
ಶಾಂತಿಸಂದೇಶವ ಹೊತ್ತು ತಂದಿತು "ಜನರೇ ಬೆಳಕಿನಲಿ ಬಾಳಿ."





# ಕವನಗಳು

ರವೀಂದ್ರ ಲಂಬಿ



## ಸ್ವಪ್ನ ಗೀತೆ

ಸ್ವಪ್ನದಲಿ ನೀ ಬಂದೆ ಮೊದಲು ಗೆಳತಿ
ಒಲ್ಲದ ಮನಸಲಿ ಬೆಳೆಯಿತು ಪ್ರೀತಿ
ಇಲ್ಲಿ ಈಗ ನಿನ್ನ ಬಿಟ್ಟು ಬದುಕು ಗೆಳತಿ ॥೧॥

ನೊಂದು ಬೆಂದು
ಭಾರವಾದ ಮನಕೆ
ಹೃದಯ ತಟ್ಟಿ ಹಾಡಿದಳು ಸ್ವಪ್ನಗೀತೆ ॥೨॥

ಅವಳ ಮಧುರ ಭಾವ-ಪ್ರೇಮ
ಅವಳದೆ ರೂಪ-ಲಹರಿ-ಸಮ್ಮಿಲನ
ಅವಳೆ ತುಂಬಿ ನಿಂತ ಭಾವಗೀತೆ ॥೩॥

ತುಂಬು ಸ್ವರದಲಿ
ಉಣಿಸಿದಳು ಸ್ವಪ್ನ-ಗೀತೆ
ಹಾ! ಎಂದು ಮಲಗಿದೆನು ಮೌನದಲಿ ಗೆಳತಿ ॥೪॥

ಯು.ಎಸ್.ಏ (ವಸುಧೆ) ಒಳಗೆ
ಸಪ್ನ ನಿನ್ನಬಿಟ್ಟು
ಇಲ್ಲಿ ಎಲ್ಲಿಯ ಮನಕೆ ಶಾಂತಿಯುಂಟು ॥೫॥

ಕಣ್ಣು ಬಿಟ್ಟು ನೋಡುತಿರಲು
ಅವಳ ಬಿಂಬ ಲಹರಿ
ಹರಿಸಿದಳು ಧರೆಯ ಮೇಲೆ
ಅವಳೆ ಈಗ ನಮ್ಮ ಅ-ಕ್ಷ-ಯ ... ದಂತೆ ॥೬॥



# ಕವನಗಳು

## ಡಾ। ಜಿ.ವಿ. ಕುಲಕರ್ಣಿ



## ದೀಪಾವಳಿ

ಬಂದಿತು ದೀಪಾವಳಿಯು
ಜನರ ಮಾನವ ಬೆಳಗೇ ....।ಪ।

ಮನೆಯೊಳಗೆ ಹೊರಗೆ
ಬೆಳಕನ್ನು ತುಂಬಿ
ಮನದೊಳಗೆ ಹೊರಗೆ
ಥಳಕನ್ನು ತುಂಬಿ
ಹರಿಯಿತು ಹರುಷದ ಹೊನಲು ಜಗದ ಕೊಳೆಯ ತೊಳೆಯೇ.....।೧।

ದೀಪದ ಸಾಲು
ಮೆಟ್ಟಿಲನು ಕಟ್ಟಿ
ಆಕಾಶ ಬುಟ್ಟಿ
ಗಗನಕ್ಕೆ ಮುಟ್ಟಿ
ಸುರಿಯಿತು ಬೆಳಕಿನ ಮಳೆಯು
ಭುವಿಯ ಸ್ವರ್ಗ ಮಾಡೇ........।೨।

ತಾರೆಗಳ ಕಣ್ಣು
ಬೆರಗಾಗಿ ನಾಚಿ
ಚಂದಿರನ ಜಂಬ
ಅಡಗಿರಲು ಇಂದು
ಚಿಮ್ಮಿತು ಪ್ರೀತಿಯ ಹೊಳೆಯು
ಕೋಪ ತಾಪವು ಅಳಿಯೇ ......।೩।

## ಬಂಧ

ಅಂದು ನಾವಿಬ್ಬರೂ
ಬಲು ಸ್ನೇಹದಿಂದ
ನೆನಪಿದೆಯೆ ಮೈಮರೆತು
ಕುಳಿತಿದ್ದ ಚೆಂದ? ।೧।

ಮರೆಯಲಾಗದ ಸರಸ
ಸಲಿಗೆ ಇಂದ
ಯಕ್ಷ ಪ್ರಶ್ನೆ ಬಂತು
ನಿನ್ನ ಬಾಯಿಂದ! ।೨।

ನನ್ನ ನಿನ್ನ ಬಂಧ
ಎಂಥ ಸಂಬಂಧ ?
ಎಂದು ಕೇಳಿದೆ ನೀನು
ಅನುರಾಗ ದಿಂದ ।೩।

ಏನು ಉತ್ತರವೆಂಬ
ಅನುಮಾನ ದಿಂದ
ಬೆಚ್ಚಿ ಬಿದ್ದೆನು ನಾನು
ಆಶ್ಚರ್ಯ ದಿಂದ ! ।೪।

ಪೆಚ್ಚು ಮುಖವಾಗಿರಲು
ನಾ ಸಂಕೋಚದಿಂದ
ಮೈ ಕುಲುಕಿ ನಕ್ಕೆ ನೀ
ಬಲು ತುಂಟತನದಿಂದ ।೫।

ಹಾಗೆ ನೋಡಿದರೆ ಇದೊಂದು
ಸ್ನೇಹ ಬಂಧ
ಹೇಗೆ ನೋಡಿದರೆ ಕೇವಲ
ಕಲ್ಪನಾ ಬಂಧ ! ।೬।

ಒಮ್ಮೆ ಕಾಣುವುದು
ಭಾವ ಬಂಧ
ಮತ್ತೊಮ್ಮೆ ಕಂಡದ್ದು
ಅಭಾವ ಬಂಧ ! ।೭।

ನೀ ಬಯಸಿ ಬಂದದ್ದು ಬಂಧನ
ಇಲ್ಲದ ಅನುಬಂಧ
ನಾ ಬಯಸಿ ನಿನಗಿತ್ತದ್ದು
ಬಾಂಧವ್ಯದನುರಾಗ ಬಂಧ ! ।೮।

ಎಲ್ಲ ಜೀವಿಗಳು ಬೇಡುವುದು







# "ಸುಮಧುರ ಸ್ನೇಹ ಸಮ್ಮಿಲನ" ನಮ್ಮೀ ಬೃಂದಾವನ



## ವಿ. ಪ್ರಸನ್ನ ಕುಮಾರ್

ಬೃಂದಾವನ, ನಮ್ಮ ನ್ಯೂಜೆರ್ಸಿಯ ಬೃಂದಾವನ
ಬೆಳೆಯುತಿದೆ ಬೆಳಗುತಿದೆ ನೀಡುತ ಸದ್ಭಾವನ
ಕರ್ನಾಟಕದ ಕಲೆ ಸಂಸ್ಕೃತಿಗಿದು ಚಂದನವನ
"ಸ್ಫೂರ್ತಿ" "ಮೈತ್ರಿ" ಮಾಡಿತಿದನು ನಂದನವನ

ಸಣ್ಣ ಪುಟ್ಟ ಚಿಣ್ಣರಿಗಿದು ಬಾಲಭವನ
ಕಲೆ ನೃತ್ಯ ನಾಟಕಗಳ ಸಮ್ಮೋಹನ
ಸಾಹಿತ್ಯ ಸಂಗೀತ ಸಂಸ್ಕೃತಿಯ ಸಮ್ಮಿಲನ
ಸಕಲರಿಗಿದು ಹೆಮ್ಮೆಯ ಕಲಾ ನಿಕೇತನ

ಎಂಟುವರ್ಷದ ಹಿಂದೆ ಬೃಂದಾವನ ಜನನ
ಇದರೇಳ್ಗೆಗಾಗಿ ಶ್ರಮಿಸಿತು ಹಲವಾರು ಜೀವನ
ಸಕಲ ಸ್ವಯಂಸೇವಕರಿಗಿದೋ ನನ್ನ ನಮನ
ಪ್ರೀತಿಬಾಂಧವ್ಯ ಬೆಸೆದಾಯ್ತಿದು ಪರಮ ಪಾವನ

ಅಬಾಲವೃದ್ಧರಾದಿಯಾಗಿ ಎಲ್ಲರ ಈ ಬೃಂದಾವನ
ಸುಮಧುರ ಸ್ನೇಹ ಸಮ್ಮಿಲನದ ಸುಂದರತಾಣ
ಮಕ್ಕಳು ಮೊಮ್ಮಕ್ಕಳಿಗಾಗಿ ಒಂದುಗೂಡಿ ಬೆಳಸೋಣ
ನಮ್ಮೆಲ್ಲರ ನಲುಮೆಯ ಒಲುಮೆಯ ಬೃಂದಾವನ





# KCOB – CHARITY

*Anil Kumar*

**“Charity isn't about pity, it is about love.**
Charity and love are the same -- with charity you give love,
**so don't just give money but reach out your hand instead”**

— ***Mother Teresa***

## CHARITY ACTIVITIES IN BRINDAVANA

Since its inception, Brindavana has regarded charity as its foremost priority and promotes charitable activities in every program.

Brindavana promotes charity in the following ways:

Selecting a charitable institution for the year/term and raising funds through cultural events and activities. This practice has been in place for the last couple of years.

- Conducting cultural events to raise funds.
- Organizing coat drives and collecting soup cans to support the local shelters and neighborhood.
- Raising funds on a need basis to help the victims of catastrophic events around the world.
- Participating in local walk-a-thons supporting various common causes.

The young members of Brindavana have been an integral part of all its charity activities. The contribution by the Youth Committee volunteers to this pursuit is commendable.

**Donation to Shankara Cancer Foundation**

Maitri tanda raised and donated $1600 to **Shankara Cancer Foundation**, **Bangalore, India.**




**Donation to Red Cross North America**

American Red Cross

Maitri tanda supported the local communities by donating $500/- to **Red Cross North America**.

**Donation to Samarthanam.**
Maitri tanda supported **Samarthanam Trust for the Disabled, Bangalore, India,** by donating $1250.

(Brindavana raised $1000 and one of our members gave $250 directly to Samarthanam during our fund raising event).



HELP FOUNDATION
HEALTH AND EDUCATION FOR LESS PRIVILEGED



**Donation to Help Foundation**

Maitri tanda raised and donated $300 to **Help Foundation, New Jersey.**

**Donation to Local Communities (Coat and Food Drive)**

Maitri tanda organized a successful coat and food drive and donated all the collected items to **Red Cross.**

## Hurricane Sandy Relief Drive

**KCO Brindavana** in coordination with other Kannada organizations has come together in an enormous effort to help Hurricane Sandy victims across the tri-state area. With the combined effort, we are able to collect **fifty boxes of cloths, food and other basic essentials** for the Hurricane Sandy victims.

On Sunday November, 11th, we had donated all the collected items to, "**Legion of Good Will**" charity organization for immediate distribution to Hurricane Sandy victims.





# ಅಮೆರಿಕಾದಲ್ಲಿ ಕನ್ನಡ ಕಾರ್ಯಕ್ರಮದ ಅಡಿಗಲ್ಲು - ಒಳ್ಳೆ ಭೋಜನ



## ಮಲ್ಲಿಕ್‌ಪ್ರಸಾದ್

ನನ್ನ ಎರಡು ವರ್ಷದ ಅನುಭವ ಹಂಚಿಕೊಳ್ಳ ಬೇಕು! ಮೈತ್ರಿ ತಂಡವಾಗಿ ಸೇರಿದ ನಮ್ಮ ಮೊದಲ ಮೀಟಿಂಗಲ್ಲಿ ತಂಡದ ಮೊದಲ ಬಯಕೆ - ಕಾರ್ಯಕ್ರಮಗಳಲ್ಲಿ ಊಟ ಜಬರ್ದಸ್ತ್ ಇರಬೇಕು!! ನನ್ನ ಮನಸ್ಸಿನಲ್ಲಿ ಒಂದು ದೊಡ್ಡ ಪ್ರಶ್ನೆ ಬಂತು - ಊಟ ಮುಖ್ಯವೋ? ಒಳ್ಳೆ ಪ್ರೊಗ್ರಾಂ ಇರಬೇಕೋ? ಅಮೆರಿಕಾದಲ್ಲಿ ಕನ್ನಡ ಕಾರ್ಯಕ್ರಮಗಳ ಸೀಕ್ರೆಟ್ ಸಾಸ್ ಏನು?

ನಾನು ಹೊರಟೆ ಓಕ್ ಟ್ರೀ ರೋಡ್ ನಲ್ಲಿ ಕನ್ನಡ ಪ್ರೊಗ್ರಾಮ್ ಗೆ ಸಪೋರ್ಟ್ ಮಾಡೊ ರೆಸ್ಟೊರೆಂಟ್ ಗಳತ್ತ. ಅಮೆರಿಗನ್ನಡಿಗರನ್ನು (ನ್ಯೂ ಜೆರ್ಸಿ ಮಂದಿ) ಗೆಲ್ಲುವ ದಾರಿ ಹುಡುಕುತ್ತ, ನನ್ನ Plan, ``The best way to person's heart being through stomach!''

ಎರಡು ವರುಷ ಉರುಳಿತು, ಹತ್ತಾರು ಕಾರ್ಯಕ್ರಮದ ನಂತರ ಊಟದ ಮಜಾ ಸವಿದ ಮಂದಿ ಕಾರ್ಯಕ್ರಮ ಎಂಜಾಯ್ ಮಾಡಿ ವಾಹ್ ವಾಹ್ ಎಂದು ಗಾಡಿ ಬಿಟ್ಟಿದ್ರು. ಪ್ರತಿ ಪ್ರೋಗ್ರಾಮಲ್ಲೂ ಬಂದ feedback ಸ್ವಲ್ಪ ಹೀಗಿತ್ತು ನೋಡಿ:

- ಯುವ ಕಮಿಟಿ ಮೊಸ್ಟ್ ಫೇವರೀಟ್ - Always ready for volunteering with a smile, ಎಲ್ಲರಿಗೂ ಬಫೆ ಸರ್ವ್ ಮಾಡೋದು ಬೆಸ್ಟ್ ಪಾರ್ಟ್
- ಬೃಂದಾವನ ಮೆಂಬರ್ಸ್ ಮೋಸ್ಟ್ ಫೇವರೀಟ್ - After great loaded Program, ಒಂದೇ ಒಂದು ಬೇಕು - ಭರ್ಜರಿ ಊಟ
- BOD/BOTಗಳ ಮೋಸ್ಟ್ ಫೇವರೀಟ್ - ನಮ್ಮ ಮೆಂಬರ್ಸ್ ಎಲ್ಲರಿಗೂ ಕಾರ್ಯಕ್ರಮಗಳ ರಸದೌತಣವಾಯಿತು, ಊಟದ ಕ್ಲಿಫ್ಹ್ಯಾಂಗರ್ ನೆಕ್ಸ್ಟ - ಹ್ಯಾಗಿರುತ್ತಪ್ಪಾ?
- ಬಂದ ಕಲಾವಿದರ ಮೋಸ್ಟ್ ಫೇವರೀಟ್ - ಕಾರ್ಯಕ್ರಮ ಮುಗಿದು ಫ್ಯಾನ್ ಗಳ ಜೊತೆ socialize ಮಾಡುತ್ತಾ ಚಪ್ಪಾಳೆ ಮೆಲುಕುಹಾಕುತ್ತ ಊಟ ಬೇಗ ಬೇಗ ಇಳಿಸಬೇಕಾ?
- ಕಾಫಿ ಪ್ರಿಯರ ಮೋಸ್ಟ್ ಫೇವರೀಟ್ - ಸ್ಪೇಶಲ್ ಫಿಲ್ಟರ್ ಕಾಫಿ ಜೋತೆಗೆ ಸ್ಪೆಶಲ್ ಮಸಾಲೆ ಮಿಕ್ಸ್. ಅಹಾ!
- Finally volunteers' ಮೋಸ್ಟ್ ಫೇವರೀಟ್ - ಕನ್ನಡದ ರಸದೌತಣವಾಯಿತು, ಭರ್ಜರಿ ಊಟವಾಯಿತು, ಈಗ ಕೇಲೋರೀಸ್ ಬರ್ನ್ ಮಾಡೊ ಸಮಯ, ಎನಿವೇ ಲೆಟ್ಸ್ ಸ್ಟಾರ್ಟ್.

ಒಟ್ಟಿನಲ್ಲಿ ಊಟದ ಕಮಿಟಿ ಎಕ್ಸಪೆಕ್ಟೇಷನ್ ಮೇನೇಜ್ ಮಾಡುತ್ತಾ, ಸ್ಪೆಷಲ್ ಮೆನು ಬಡ್ಜೆಟ್ ನಲ್ಲಿ ರೆಡಿ ಮಾಡಿ, ಖುಶಿಪಟ್ಟ ನ್ಯೂ ಜೆರ್ಸಿ ಕನ್ನಡ ಮಂದಿ ಜೊತೆ ಮತ್ತೊಂದು ಸುಂದರ ಸಂಜೆ ಎಂಬ ಸಂತಸ.

ನೆಕ್ಸ್ಟ ಪ್ರೋಗ್ರಾಮ್ ಸಿದ್ಧತೆಗೆ ಹಾದಿ.









# ರಮಿತಾಳ ರಂಗಪ್ರವೇಶ

## ಜಿ. ಜಿ. ನಾಗರಾಜ

ಕಳೆದ ಆಗಸ್ಟ್ ತಿಂಗಳಿನಲ್ಲಿ ನ್ಯೂ ಜೆರ್ಸಿಯ ಡಾ। ರಮೇಶ್ ಗೌಡ ಮತ್ತು ಡಾ। ಮಮತಾ ಗೌಡ ಅವರ ಪುತ್ರಿ ರಮಿತಾ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ತನ್ನ ಭರತನಾಟ್ಯದ "ರಂಗಪ್ರವೇಶ" (ಅರಂಗೇಟ್ರಂ) ಪ್ರದರ್ಶನ ನೀಡಿದಳು. ಕಾರ್ಯಕ್ರಮ ಬಹಳ ಉತ್ತಮವಾಗಿದ್ದು, ಕಿಕ್ಕಿರಿದು ನೆರೆದ ಪ್ರೇಕ್ಷಕರ ಮನಮೆಚ್ಚಿಸಿತು.

ನ್ಯೂ ಜೆರ್ಸಿಯ ಲಿವಿಂಗ್ಸ್ಟನ್ ನ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ರಮಿತಾ ಆನೇ ವಯಸ್ಸಿನಿಂದ ಶ್ರೀಮತಿ ಪದ್ಮಾ ತ್ಯಾಗರಾಮ್ ಅವರ ಅಭಿನಯ ನೃತ್ಯಶಾಲೆಯಲ್ಲಿ ಭರತನಾಟ್ಯ ಅಭ್ಯಾಸ ಮಾಡತೊಡಗಿದಳು. ಹಲವು ವೇದಿಕೆ ಗಳಲ್ಲಿ ಭರತನಾಟ್ಯ ಪ್ರದರ್ಶನ ನೀಡಿದ್ದ ರಮಿತಾ ೨೦೧೦ರಲ್ಲಿ ಅಮೆರಿಕದಲ್ಲಿ ನಡೆದ 'ಅಕ್ಕ' ಸಮ್ಮೇಳನದಲ್ಲಿ ಖ್ಯಾತ ಕಲಾವಿದೆ ಹೇಮಾ ಪಂಚಮುಖಿ ಅವರ ಭರತನಾಟ್ಯ ಪ್ರದರ್ಶನದಿಂದ ಪ್ರಭಾವಿತಳಾಗಿ ತನ್ನನ್ನು ಅವರ ಶಿಷ್ಯೆಯಾಗಿ ಸ್ವೀಕರಿಸಲು ಕೇಳಿಕೊಂಡಳು. ಅವರ ಮಾರ್ಗದರ್ಶನದಲ್ಲಿ ಪಳಗಿದ ರಮಿತಾ ಉತ್ತಮ ಕಲಾವಿದೆಯಾಗಿ ಹೊರಹೊಮ್ಮಿ ಪ್ರೇಕ್ಷಕರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯಾಗಿದ್ದಾಳೆ. ೨೦೧೧ ರಲ್ಲಿ ೪೯ನೇ ಬೆಂಗಳೂರು ಗಣೇಶೋತ್ಸವದಲ್ಲಿ ಭರತನಾಟ್ಯ ಪ್ರದರ್ಶನ ನೀಡಿದ್ದಳು.


ಆರಂಗೇಟ್ರಂ ಸಮಾರಂಭದಲ್ಲಿ ಉಪಸ್ಥಿತರಿದ್ದ ಆದಿ ಚುಂಚುನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಚಂದ್ರಶೇಖರ್, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ನಟ ಅಂಬರೀಶ್ ಮುಂತಾದ ಗಣ್ಯರು ಈ ಯುವ ಕಲಾವಿದೆಯನ್ನು ಹರಸಿದರು.



೧೫ ಸೆಪ್ಟೆಂಬರ್ ೧೯೯೬ರಲ್ಲಿ ಜನಿಸಿದ ರಮಿತಾಳಿಗೆ ವಿದೇಶದಲ್ಲಿದ್ದರೂ ಭಾರತೀಯ ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿಯ ಸೊಬಗಿನತ್ತ ವಿಶೇಷ ಆಸಕ್ತಿ. "ನನಗೆ ಭಾರತೀಯ ಸಂಸ್ಕೃತಿ ಅಚ್ಚುಮೆಚ್ಚು. ಮೇಲಾಗಿ ನನ್ನವರೆಲ್ಲರೂ ಹೆಚ್ಚಾಗಿ ಬೆಂಗಳೂರಿನಲ್ಲೇ ಇರುವುದರಿಂದ ರಂಗಪ್ರವೇಶ ಪ್ರದರ್ಶನವನ್ನು ಬೆಂಗಳೂನಲ್ಲೇ ಹಮ್ಮಿಕೊಳ್ಳುವುದು ನನ್ನ ಮಹದಾಸೆಯಾಗಿತ್ತು" ಎನ್ನುತ್ತಾಳೆ ರಮಿತಾ.

ತನ್ನ ತಂದೆ, ತಾಯಿ ಮತ್ತು ತಮ್ಮ ರೋನಕ್ ನ ಒಡನೆ ನ್ಯೂ ಜೆರ್ಸಿಯಲ್ಲಿ ವಾಸಿಸುತ್ತಿರುವ ರಮಿತಾ ಭರತನಾಟ್ಯದೊಂದಿಗೆ ಗಿಟಾರ್ ಮತ್ತು ಕೊಳಲು ವಾದ್ಯಗಳಲ್ಲೂ ತರಬೇತಿಯನ್ನು ಹೊಂದುತ್ತಿದ್ದಾಳೆ. ಇವಳು ದಿ.ನ್ಯಾಯಮೂರ್ತಿ ದೊಡ್ಡಕಾಳೇ ಗೌಡ ಹಾಗೂ ಶ್ರೀಮತಿ ಯಶೋದಮ್ಮ ದೊಡ್ಡಕಾಳೇ ಗೌಡ ಅವರ ಮೊಮ್ಮಗಳು. ಬೆಂಗಳೂರಿನಲ್ಲಿರುವ ಉದ್ಯಮಿ ಶ್ರೀ. ಎ.ಮರಿಯಪ್ಪ ಮತ್ತು ಶ್ರೀಮತಿ ಜಯರತ್ನ ಅವರು ತಮ್ಮ ಮೊಮ್ಮಗಳಾದ ಕುಮಾರಿ ರಮಿತಾಳಿಗೆ ತುಂಬ ಪ್ರೋತ್ಸಾಹ ನೀಡುತ್ತಿದ್ದಾರೆ. ರಮಿತಾ ಉತ್ತಮ ಕಲಾವಿದೆಯಾಗಿ ರೂಪುಗೊಂಡು, ಭರತನಾಟ್ಯದಲ್ಲಿ ಬಹಳ ಯಶಸ್ಸು ಪಡೆಯಲಿ ಎಂದು ಹಾರೈಸೋಣ.





# ಹಚ್ಚೇವು ಕನ್ನಡದ ದೀಪ

## ಸೀಮಾ ಮೂರ್ತಿ



ಕಳೆದ ಒಂಭತ್ತು ವರ್ಷಗಳಿಂದ, ಪ್ರತಿವಾರ ತಪ್ಪದೇ, ತಮ್ಮ ಸಮಯ ಹಾಗು ಹುರುಪನ್ನು ಮುಡುಪಾಗಿಟ್ಟು ನಮ್ಮ ಮುಂದಿನ ಪೀಳಿಗೆಯ ಯುವಕ ಯುವತಿಯರಿಗೆ ಕನ್ನಡ ಪಾಠ ಮಾಡುತ್ತಿರುವ ತಾಯಂದಿರ ಶ್ರಮ ಪ್ರಶಂಸನೀಯ. ಈ ಸ್ವಯಂಸೇವಕರೊಂದಿಗೆ ನನಗೂ ಕೂಡ ಭಾಗವಹಿಸಲು ಅವಕಾಶ ದೊರಕಿರುವುದು ನನ್ನ ಭಾಗ್ಯವೆಂಬುದು ನನ್ನ ಭಾವನೆ. ಈ ಲೇಖನ, ಒಗ್ಗೂಡಿದ ಎಲ್ಲ ಸ್ವಯಂಸೇವಕರ ದೃಢಚಿತ್ತ ಕೆಲಸಕ್ಕೆ ಒಂದು ನಮನ.

ವರ್ಷಗಳಿಂದ ಏಕಚಿತ್ತದಿಂದ ಶ್ರಮ ಪಡುತ್ತಿರುವ ನಮಗೆ ಅಗ್ಗೊಮ್ಮೆ ಈಗ್ಗೊಮ್ಮೆ ಹಲವಾರು ಭಿನ್ನಾಭಿಪ್ರಾಯಗಳು, ಸಲಹೆಗಳು ಕೇಳಿಬರುತ್ತವೆ. ಈ ಲೇಖನದ ಮೂಲಕ ಹಲವನ್ನು ಉತ್ತರಿಸುವ ಹಂಬಲ ನನ್ನದು.



ನಮ್ಮೊಂದಿಗೆ ಒಡನಾಡುವ ಸ್ನೇಹಿತರು ಹಾಗೂ ಪರಿಚಿತರು ನಮ್ಮ ಕಾರ್ಯಗಳನ್ನು ಮೆಚ್ಚಿ ಸಾಕಷ್ಟು ಬಾರಿ ನಮ್ಮನ್ನು ಮನತುಂಬ ಹೊಗಳುತ್ತಾರೆ. ನನ್ನ ದೃಷ್ಟಿಯಲ್ಲಿ ಆ ಹೊಗಳಿಕೆ ನಮಗೆ ಸಲ್ಲದ್ದಲ್ಲ. ನಮ್ಮ ಜೀವನದಲ್ಲಾಗಲಿ, ಕೆಲಸದಲ್ಲಾಗಲಿ ಅಥವಾ ದಿನನಿತ್ಯದ ಬಳಕೆಯಲ್ಲಾಗಲಿ, ಉಪಯೋಗಿಸದ ಕಲೆಯನ್ನು ನಾವು ಖಂಡಿತ ಕಲಿಯುವುದಿಲ್ಲ. ಇಂತಹ ಸಂದರ್ಭದಲ್ಲಿ ಸ್ವತಃ ಮುಂದೆ ಬಂದು ಕನ್ನಡ ಕಲಿಯುತ್ತಿರುವ / ಕಲಿತಿರುವ ಸುಮಾರು ೭೦ ಮಕ್ಕಳ ಹುಮ್ಮಸ್ಸು ನಮ್ಮನ್ನು ಹುರಿದುಂಬಿಸುತ್ತಿದೆ. ಈ ಮಕ್ಕಳಿಗೆ ಕನ್ನಡ ಕಲಿಸುವುದು ನಮ್ಮ ಕರ್ತವ್ಯ ಹೌದು, ಆದರೆ ಅವರೇ ನಮ್ಮ ಪ್ರೇರಣೆ ಎಂದರೆ ತಪ್ಪಾಗಲಾರದು. ಬಹಳ ಶ್ರಮ ಪಟ್ಟು ತಮಗೆ ಪರಕೀಯವಾದ ಭಾಷೆಯನ್ನು ಕಲಿಯುವ ಈ ಮಕ್ಕಳ ಪ್ರಯತ್ನ ಪ್ರಶಂಸನೀಯವಾಗಿದೆ. ಮೊದಲಿಗೆ, ಬರುವ ಆಸಕ್ತಿ ಇಲ್ಲದಿದ್ದರೂ ಅವರ ಪೋಷಕರ ಒತ್ತಾಯದಿಂದ ಶಾಲೆಗೆ ಬಂದ ಮೇಲೆ ಅವರ ಪ್ರಸಕ್ತಿ ಹಾಗೂ ಪ್ರಯತ್ನ ನಮ್ಮನ್ನೆಲ್ಲಾ ಉತ್ತೇಜಿಸುತ್ತದೆ.

ಶಿಕ್ಷಕರಿಗೆ ಸಾಧಾರಣವಾಗಿ ಕೇಳಿಬರುವ ಸಲಹೆ ಏನೆಂದರೆ - ನಾನು ಸ್ವತಃ ಮನೆಯಲ್ಲಿ ನನ್ನ ಮಕ್ಕಳಿಗೆ ಕನ್ನಡ ಹೇಳಿ ಕೊಡುತ್ತೇನೆ. ನನ್ನ ಮಕ್ಕಳು ತುಂಬಾ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ. ಇದನ್ನು ಕೇಳಿದಾಗ ನಮಗೆ ಬಹಳ ಸಂತೋಷವಾಗುತ್ತದೆ. ಬ್ರಿಡ್ಜ್ ವಾಟರ್ ಕನ್ನಡ ಶಾಲೆಯಲ್ಲದೇ ಮನೆಮನೆಗಳಲ್ಲೂ ಈ ಸುಂದರ ಭಾಷೆಯ ಪಾಠ ನಡೆ–ಯುತ್ತಿರುವ ವಿಷಯ ಬಹಳ ಸ್ಫೂರ್ತಿದಾಯಕ. ಆದರೆ ಈ ಸಂದರ್ಭದಲ್ಲಿ 'ದಿ ಮೋರ್ ದಿ ಮೆರಿಯರ್' ಎಂಬ ನಂಬಿಕೆ ನಮ್ಮದು. ಶಾಲೆಯಲ್ಲಿ ಬೇರೆ ಮಕ್ಕಳೊಂದಿಗೆ ಕಲಿಯುವ ಮೋಜೇ ಬೇರೆ. ಅಷ್ಟೇ ಅಲ್ಲದೆ ಶಾಲೆಯಲ್ಲಿ ಕಲಿಯುವ ಮಕ್ಕಳ ಭಾಷೆಯ ಜ್ಞಾನ ಹಾಗು ಅರಿವು ಸ್ವಲ್ಪ ಉತ್ತಮವಾಗಿರುತ್ತದೆ ಎಂದರೆ ತಪ್ಪಾಗಲಾರದು. ಬಹುಶಃ ಇದಕ್ಕೆ



ಕಾರಣ, ತಮ್ಮಂತೆ ಬೇರೆ ಮಕ್ಕಳು ಕೂಡ ಪಾಠ ಕಲಿತು ಭಾಷೆಯನ್ನು ಉಪಯೋಗಿಸುತ್ತಾರೆ ಎಂಬ ಭರವಸೆ ಅವರ ಚಳಿ ಬಿಡಿಸಬಹುದು. ಇಲ್ಲ, ಶಾಲೆಯಲ್ಲಿನ ಇತರ ಮಕ್ಕಳಿಂದ ಭಾಷೆಯ ಹಾಗೂ ಸಂಸ್ಕೃತಿಯ ಬಗ್ಗೆ ಬಹಳಷ್ಟು ಸ್ವಾರಸ್ಯಕರ ಮಾಹಿತಿಗಳನ್ನು ಕಲಿಯುವುದರಿಂದ ಇರಬಹುದು. ಕಲಿಯುವುದು ಶಾಲೆಯಲ್ಲೋ ಅಥವಾ ಶಾಲೆಯ ಹೊರಗೋ? ಎಂಬ ಈ ತರ್ಕ ಹೊಸದಲ್ಲ. ಈ ವಾದವಿವಾದಕ್ಕೆ ವಿಭಿನ್ನ ಜನರೆಷ್ಟೋ ಅಷ್ಟೇ ಅಭಿಪ್ರಾಯಗಳು!


ಮತ್ತೊಂದು ಸಲಹೆ ಪದೇ ಪದೇ ನಮಗೆ ಕೇಳಿಬರುತ್ತದೆ - "ನಮ್ಮ ಮಕ್ಕಳು ಕನ್ನಡ ಮಾತನಾಡಿದರೆ ಸಾಕು". ಈ ಮನೋಭಾವ ಅರ್ಥವಾದರೂ ನಮಗೆ ಸಮ್ಮತಿ ಇಲ್ಲ. ನಿಜ ಹೇಳಬೇಕೆಂದರೆ ಮಕ್ಕಳಿಗೆ ಕೇವಲ ಮಾತನಾಡಲು ಹೇಳಿಕೊಡುವುದು ನಮಗೆ ಬಹಳ ಸುಲಭ. ತಾಂತ್ರಿಕ ನೆರವನ್ನು ಉಪಯೋಗಿಸಬಹುದಲ್ಲದೇ, ಅದರಿಂದ ಪಾಠ ಹೇಳಿಕೊಡುವ ವಿಧಾನ ಬಹಳ ಮನೋರಂಜಕವಾಗುತ್ತದೆ ಕೂಡ. ಮಕ್ಕಳು ಗಮ್ಮತ್ತಿನಿಂದ ಪಾಠವನ್ನು ಕಲಿಯುತ್ತಾರೆ. ಮಕ್ಕಳ ಗೊಣಗಾಟ ಕೂಡ ತಪ್ಪುತ್ತದೆ! ನಾವು ಏಕೆ ಶಾಲೆಯಲ್ಲಿ ಭಾಷೆಯ ಎಲ್ಲಾ ರೂಪಗಳನ್ನು ಪರಿಚಯಿಸುತ್ತೇವೆ ಎಂದು ತಿಳಿದುಕೊಳ್ಳಬೇಕಾದರೆ ನಿಮ್ಮ ಬಾಲ್ಯಕ್ಕೆ ಸ್ವಲ್ಪ ಹಿಂದಿರುಗಿ. ನಮ್ಮ ಚಿಕ್ಕ ಪುಟ್ಟ ವಯಸ್ಸಿನಲ್ಲಿ ಭಾರತದಲ್ಲಿ ನಾವೆಲ್ಲರೂ ನಮ್ಮ ನೆರೆ ಹೊರೆಯವರೊಂದಿಗೆ ಒಡನಾಡಿ ಅವರ ಭಾಷೆಗಳನ್ನು ಬಹಳ ಬೇಗ ಕಲಿತವರು. ಆದರೆ ಕಾಲ ಕ್ರಮೇಣ ಅದನ್ನು ಪ್ರಯೋಗಿಸದೇ ಅಷ್ಟೇ ಬೇಗ ಮರೆತವರೂ ಕೂಡ. ಭಾಷೆಯನ್ನು ಸಂಪೂರ್ಣವಾಗಿ ಕಲಿಯುವುದರಿಂದ ಮಕ್ಕಳಿಗೆ ಮತ್ತೊಂದು ನವನೂತನ ಪ್ರಪಂಚದ ಅರಿವು ಉಂಟಾಗುತ್ತದೆ. ಬೇರೆ ಬರಹಗಾರರ ಪರಿಚಯವಲ್ಲದೇ, ಅವರ ಭಿನ್ನ ಅಭಿಪ್ರಾಯಗಳು ನಮ್ಮ ಮಕ್ಕಳ ಕುತೂಹಲವನ್ನು ಕೆರಳಿಸುತ್ತದೆ. ಮತ್ತೊಂದು ಕಾರಣ, ನಮ್ಮ ಸಂಸ್ಕೃತಿಯ ಸ್ವರೂಪ ನಮ್ಮ ಭಾಷೆ. ಹೀಗಿರುವಾಗ ಹಲವಾರು ಶೈಲಿಯಲ್ಲಿ ಕಲಿಯುವುದರಿಂದ ಸಂಸ್ಕೃತಿಯ ಆಧಾರ ಕೂಡ ಸ್ಥಿರವಾಗಿ ನಿಲ್ಲುತ್ತದೆ ಎಂಬ ನಂಬಿಕೆ. ಹೀಗೆ ಬೇರೆ ಬೇರೆ ಮಾರ್ಗಗಳು ದೊರಕಿದಲ್ಲಿ ಮಾತ್ರ ನಾವು ಅವರ ಆಸಕ್ತಿ ಕೆರಳಿಸಬಹುದು. ಇಷ್ಟು ಕಾರಣಗಳು ಸಾಲದಿದ್ದಲ್ಲಿ, ಕೊನೆಯದಾಗಿ ನಾವು ಹೇಳುವುದೇನೆಂದರೆ "ಟೀಚ್ ಎ ಮ್ಯಾನ್ ಹೌ ಟು ಫಿಶ್ ಎಂಡ್ ಯು ಹ್ಯಾವ್ ಫೆಡ್ ಹಿಮ್ ಫಾರ್ ಲೈಫ್" ಎಂಬ ಹೇಳಿಕೆಯನ್ನು ನೀವೆಲ್ಲ ಕೇಳಿರಬಹುದು. ನಮ್ಮ ಮುಂದಿನ ಪೀಳಿಗೆ ಇವರು. ಇವರಿಗೆ ನಾವು ಸಂಪೂರ್ಣವಾಗಿ ಹೇಳಿಕೊಟ್ಟರೆ ತಾನೆ ಅವರು ಮುಂದೆ ಕನ್ನಡದ ನಂದಾ ದೀಪವನ್ನು ಬೆಳಗಿಸಬಲ್ಲರು?

ಅಮೆರಿಕದಲ್ಲಿ ಕನ್ನಡದ ದೀಪವನ್ನು ಸದಾ ಬೆಳಗಲು ನಮಗೆ ಬೇಕಾಗಿರುವುದು ಹೊಸ ಮುಖಗಳು ಮತ್ತು ವಿಭಿನ್ನ ಮಾರ್ಗಗಳು. ಇದನ್ನೇ ಧ್ಯೇಯವಾಗಿಟ್ಟು ಕೊಂಡ ಸ್ವಯಂಸೇವಕರು ಈ ಪ್ರಯತ್ನದಲ್ಲಿ ಬಹಳ ಸಫಲರಾಗಿದ್ದಾರೆ ಎಂದು ನನ್ನ ನಂಬಿಕೆ. ನಿಧಾನವಾಗಿಯಾದರೂ ನಿರಂತರವಾಗಿ ನಮ್ಮ ಕನ್ನಡ ಸಮುದಾಯದ ಮುಂದಿನ ನಾಯಕ ಹಾಗು ನಾಯಕಿಯರನ್ನ ತಯಾರು ಮಾಡುತ್ತಿರುವ ಇವರಿಗೆ ನನ್ನ ಬೆಂಬಲ ಎಂದೆಂದಿಗೂ ಇರುತ್ತದೆ.











# ಧ್ವನಿ ಬೆಳಕು ಮತ್ತು ದೃಶ್ಯ ಚಿತ್ರಗಳ ಸಮ್ಮಿಲನದ ನಮ್ಮೀ ಬೃಂದಾವನ



## ಡಾ|| ರಾಜು ಮುತ್ತು

ಸುಶ್ರಾವ್ಯವಾಗಿ ಕೇಳಿಸುವ ಮತ್ತು ಅಂದವಾಗಿ ಕಾಣಿಸುವ ಕಾರ್ಯಕ್ರಮ ನೋಡುಗರ ಕಣ್ಣಿಗೆ ಚಿರಸ್ಮರಣೀಯ ಅನುಭವ ನೀಡುತ್ತದೆ. ಅದೇ ಅನುಭವ ಮತ್ತೊಮ್ಮೆ ಪಡೆಯಲು ಆಶಿಸಿದರೆ, ಒಳ್ಳೆಯ ಚಿತ್ರೀಕರಣದಲ್ಲಿ ಮಾಧ್ಯಮದ ಮೂಲಕ ಎಲ್ಲ ಸದಸ್ಯರಿಗೆ ಒದಗಿಸಿದರೆ ಚೆನ್ನ ಅಲ್ಲವೇ? ಈ ಒಂದು ಗುರಿಯೊಂದಿಗೆ ನಮ್ಮ ಮೈತ್ರಿ ತಂಡದ ಪರವಾಗಿ ನಾನು ಜವಾಬ್ದಾರಿ ವಹಿಸಿಕೊಂಡೆ. ಎರಡು ವರ್ಷಗಳ ನಂತರ ಈ ಗುರಿಯಿಂದ ಎಷ್ಟು ದೂರವೋ, ಹತ್ತಿರವೋ ನೋಡೋಣ ಬನ್ನಿ.

ನಮ್ಮ ಬೃಂದಾವನದ ಅಧ್ಯಕ್ಷರಾದ ಸಂತೋಷ್ ರವರು ಮೈತ್ರಿ ತಂಡಕ್ಕೆ ಆದೇಶ ಕೊಟ್ಟರು-"ಕಾರ್ಯಕ್ರಮಗಳನ್ನು ನಿಗದಿತ ಸಮಯಕ್ಕೆ ಪ್ರಾರಂಭಿಸಿ, ಯಾವ ಅಡಚಣೆಗಳಿಲ್ಲದೆ ಸರಿಯಾದ ಸಮಯಕ್ಕೆ ಮುಗಿಸಿಕೊಟ್ಟು ಸಮಯ ಪ್ರಜ್ಞೆಯನ್ನು ತೋರಿಸಿ". ಈ ಆದೇಶ ಒಂದು ರೀತಿ ಧ್ವನಿ ಬೆಳಕಿನವರಿಗೆ ಹೇಳಿದ್ದಾಗಿತ್ತು. ಏಕೆಂದರೆ ಧ್ವನಿ ಉಪಕರಣಗಳನ್ನು ಜೋಡಿಸಿ, ಸಮರ್ಪಕವಾಗಿ ಕೆಲಸ ಮಾಡುವಂತೆ ಮಾಡಲು ಸಮಯ ಬೇಕಾಗುತ್ತಿತ್ತು. ಈ ತಯಾರಿ ಸಮಯವನ್ನು ಕಡಿಮೆ ಮಾಡಲು ಎರಡು ರೀತಿ ಸಹಾಯ ಮಾಡಿರೆಂದು ಮೈತ್ರಿ ತಂಡಕ್ಕೆ ಕೇಳಿಕೊಳ್ಳಲಾಯಿತು. ಒಂದು ಕೆಲಸ ಮಾಡಲು ಹೆಚ್ಚಿನ ಜನಬಲ, ಉತ್ತಮ ಉಪಕರಣಗಳನ್ನು ಕೊಳ್ಳಲು ಹಣಬಲ. ನಮ್ಮ ಮೈತ್ರಿ ಖಜಾಂಚಿಯವರು ದೊಡ್ಡ ಮನಸ್ಸು ಮಾಡಿದುದರಿಂದ ಅನುಕೂಲವಾಯಿತು.

ಮೈತ್ರಿ ಯುವ ತಂಡವನ್ನು ಆಯ್ಕೆ ಮಾಡಿದಾಗ ಆನೆ ಬಲವೇ ಬಂದಂತಾಯ್ತು. ನಮ್ಮ ಯುವಕರ ಶ್ರಮ ಮತ್ತು ಶ್ರದ್ಧೆಯಿಂದ ಇತ್ತೀಚಿನ ಕಾರ್ಯಕ್ರಮಗಳು ಅತ್ಯುತ್ತಮವಾಗಿ ಮಾಡಿ ಬಂದಿತು.  ಒಂದು ಸಮಸ್ಯೆಯನ್ನು ಎದುರಿಸುವುದು ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಯಿತು. ಕಲಾವಿದರಿಗೆ ತಾವು ಹಾಡುವುದು ವೇದಿಕೆಯ ಮೇಲೆ ಕೇಳಿಸುವುದು ಸ್ವಲ್ಪ ಕಡಿಮೆಯಾಗಿ, ಸ್ಟೇಜ್ ಮಾನಿಟರ್ ಎತ್ತಿ, ಇಳಿಸಿ, ಸ್ಥಾನ ಬದಲಿಸಿ- ಎಲ್ಲಾ ಪ್ರಯತ್ನ ಮಾಡಿದರೂ ಫಲಕಾರಿಯಾಗಲಿಲ್ಲ. ಈ ಕ್ರಿಯೆಯನ್ನು ಗಮನಿಸುತ್ತಿದ್ದ ನಮ್ಮ ತಂಡದ ಸತೀಶ್ ರವರು "ನೀವು ಹೊಸ ಮಾನಿಟರ್ ಕೊಂಡು, ಸಮಸ್ಯೆ ಬಗೆಹರಿಸಿ ಎಂದು ಸಲಹೆ ಕೊಟ್ಟರು". ಅವರ ಸಲಹೆ ಸಮಂಜಸವಾಗಿತ್ತು. ಆದರೆ ಹಣವನ್ನು ಹೇಗೆ ಹೊಂದಿಸುವುದು ಎಂದು ಯೋಚಿಸಿ, 'ದೃಶ್ಯ ಚಿತ್ರದ ಬ್ಲೂ ರೇ ಡಿವಿಡಿಗಳನ್ನು ಮಾಡಿ, ಮೈತ್ರಿ ತಂಡದ ಸದಸ್ಯರಿಗೆ ಮಾರಿ ಹಣವನ್ನು ಹೊಂದಿಸಬಹುದೇ' ಎಂದು ಕೇಳಿದಾಗ, ಎಲ್ಲರೂ ಒಕ್ಕೊರಲಿನಿಂದ ಸಹಮತ ವ್ಯಕ್ತಪಡಿಸಿದರು.

ಮಕ್ಕಳೋತ್ಸವ, ಗಣೇಶೋತ್ಸವ ಮತ್ತು ರಾಜೇಶ್ ಕೃಷ್ಣನ್ ಕಾರ್ಯಕ್ರಮಗಳ ಬ್ಲೂ ರೇ ಡಿವಿಡಿಗಳನ್ನು ಮಾಡಿ, ಸ್ಟೇಜ್ ಮಾನಿಟರ್ ಕೊಳ್ಳುವಷ್ಟು ಹಣ ಸಂಗ್ರಹಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಹಕರಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಲೇಬೇಕು. ಅದರ ಸಾರ್ಥಕತೆ ಇತ್ತೀಚಿನ ರಸಸಂಜೆ ಕಾರ್ಯಕ್ರಮದಲ್ಲಿ ಕಲಾವಿದರಿಂದ ಮೂಡಿಬಂದ ಸುಶ್ರಾವ್ಯ ಸಂಗೀತದಲ್ಲಿ ವ್ಯಕ್ತವಾಯಿತು. ಬಣ್ಣದ ಬೆಳಕು ಕೊಡುವ ಉಪಕರಣ ಈಗ ಬೃಂದಾವನದ ಆಸ್ತಿಯಾಗಿದೆ. ಇದನ್ನು ಇನ್ನೂ ಉತ್ತಮಗೊಳಿಸಲು ಎರಡು ಸ್ಪಾಟ್ ಲೈಟ್ ಗಳು ಬೇಕು. ಮೇಲೆ ವಿವರಿಸಿದ ರೀತಿ ಬೃಂದಾವನ ಸದಸ್ಯರಿಂದ ಸಹಕಾರ ಮತ್ತು ಧನಸಹಾಯ ದೊರೆತರೆ, ನಮ್ಮ ಸಂಸ್ಥೆ ಅದನ್ನು ಪಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಹಿಂದಿನ ಎರಡು ವರ್ಷಗಳಲ್ಲಿ ನಡೆದ ಅನೇಕ ಕಾರ್ಯಕ್ರಮಗಳನ್ನು ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ಇತ್ತೀಚಿಗೆ ೩ಡಿ ವೀಡಿಯೋದಲ್ಲಿ ಸಹಾ ಚಿತ್ರೀಕರಿಸಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲಾಗಿದೆ. ಸಮ್ಮಿಲನವಾಗಿದೆಯೋ ಇಲ್ಲವೋ ಎಂಬುದನ್ನು ಸದಸ್ಯರೇ ಹೇಳಬೇಕು. ಇನ್ನೂ ಆಗಬೇಕು ಎಂದು ಭಾವನೆ. ನಿಮ್ಮಗಳ ಸಹಕಾರ ಮುಂದೆಯೂ ಇರುತ್ತದೆ ಎಂದು ನಂಬಿದ್ದೇನೆ. ಮುಂಬರುವ ತಂಡಕ್ಕೆ ನಮ್ಮೆಲ್ಲರಿಂದ ಹಾರ್ದಿಕ ಶುಭಾಶಯಗಳು, ಮತ್ತು ಇನ್ನೂ ಉತ್ತಮ ಕೆಲಸ ಮಾಡಲೆಂದು ಹಾರೈಕೆ.

ಕೆಲವು ದೃಶ್ಯ ಚಿತ್ರಗಳ ಕೊಂಡಿಗಳು ಇಲ್ಲಿವೆ:



http://www.youtube.com/watch?v=VGCY58em1Xg
http://www.youtube.com/my_videos_edit?ns=1&video_id=7Ju9pCadpkM
http://www.youtube.com/my_videos_edit?ns=1&video_id=kpen1iaqk-U
http://www.youtube.com/my_videos_edit?ns=1&video_id=3_P3gRTazJs
http://www.youtube.com/my_videos_edit?ns=1&video_id=hhqIDIWfcGM





# ವಿಜಯನಗರ ಸಾಮ್ರಾಜ್ಯದ ಉದಯ

## ರವೀಂದ್ರ ಲಂಬಿ



ಕ್ರಿಸ್ತಶಕ ೧೩೩೬ ರ ವೇಳೆಗೆ ಉತ್ತರ ಭಾರತವು ಮುಸ್ಲಿಮರ ದಾಳಿಗೆ ನಲುಗಿ ಹೋಗಿದ್ದು, ಹಿಂದೂ ಸಂಸ್ಕೃತಿಯು ಸಂಪೂರ್ಣ ಕಣ್ಮರೆಯಾಗುತ್ತಿರುವ ಕಾಲದಲ್ಲಿ, ದಕ್ಷಿಣ ಭಾರತದಲ್ಲಿಯೂ ಸಹ ಬಹಮನಿ ಸುಲ್ತಾನರ ಉಪಟಳದಿಂದ  ಹಿಂದೂ ರಾಜಮನೆತನಗಳು ಅವನತಿಯತ್ತ ಸಾಗತೊಡಗಿದ್ದವು.  ಇದೇ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗಿದ್ದು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ, ಏಕೆಂದರೆ ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಮುಸ್ಲಿಮರ ದಾಳಿಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಉಳಿವಿಗಾಗಿ, ಅತ್ಯಂತ ಸಂದಿಗ್ಧ ಸಮಯದಲ್ಲಿ ಉದಯವಾದ ಸಾಮ್ರಾ್ಯಜ್ಯವೇ ವಿಜಯನಗರ ಸ್ಸಾಮ್ರಾಜ್ಯವೆಂದು ಹೇಳಬಹುದು.

ವಿಜಯನಗರ ಸಾಮ್ರಜ್ಯದ ಉಗಮದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ತೆಲುಗು ಮೂಲಾಧಾರಗಳು ಸಂಗಮ ಸಹೋದರರು ವಾರಂಗಲ್ಲಿನಿಂದ ಬಂದವರೆಂದು ಹೇಳುತ್ತವೆ. ಇವರ ಮಕ್ಕಳಾದ ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರಿಂದ ವಿಜಯನಗರ ಸ್ಥಾಪನೆಯಾಗಿದೆಯೆಂದೂ ಪ್ರಚಲಿತವಿದೆ. ರಾಬರ್ಟ್ ಸೀವೆಲರ ಅಭಿಪ್ರಾಯದಂತೆ ವಾರಂಗಲ್ಲಿನ ಪ್ರತಾಪರುದ್ರದೇವನ ಆಶ್ರಯದಲ್ಲಿದ್ದ ಹರಿಹರ ಮತ್ತು ಬುಕ್ಕ ಸಹೋದರರು ವಾರಂಗಲ್ಲಿನ ಅವನತಿ ಹೊಂದಿದ ಮೇಲೆ ಆನೆಗುಂದಿಯ ಕಂಪಿಲರಾಯನ ಆಸ್ಥಾನದಲ್ಲಿ ಉನ್ನತಾಧಿಕಾರವನ್ನು ಪಡೆದಿದ್ದು, ಮುಹಮ್ಮದ್-ಬಿನ್.ತುಘಲಕ್ಕನ ಪ್ರತಿನಿಧಿ ತನ್ನ ಆಳ್ವಿಕೆಯಲ್ಲಿ ಯಶಸ್ಸು ಕಾಣದಾದ ಪರಿಣಾಮವಾಗಿ ಹರಿಹರನನ್ನು ರಾಜನನ್ನಾಗಿಯೂ, ಬುಕ್ಕನನ್ನು ಮಂತ್ರಿಯಾಗಿಯೂ ಮಾಡಲಾಯಿತೆಂದೂ, ಈ ಸಹೋದರರೇ ಮುಂದೆ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದರೆಂದು ಹೇಳಲಾಗುತ್ತದೆ.

ಆದರೆ ಕನ್ನಡದ ಮೂಲಾಧಾರಗಳ ಪ್ರಕಾರ ವಿಜಯನಗರ ಸಂಸ್ಥಾಪಕರು ಎಲ್ಲಿಂದಲೂ ಬಂದವರಲ್ಲ, ಮೂಲತಃ ಕನ್ನಡನಾಡಿನವರೇ ಎಂದು ವಿದ್ವಾಂಸರಾದ ಬಿ.ಮ. ಸಾಲೆತೋರೆ ಮತ್ತು ಪಿ. ಬಿ. ದೇಸಾಯಿ ಅಭಿಪ್ರಾಯ ಪಟ್ಟಿದ್ದಾರೆ. ವಿಜಯನಗರದ ಅರಸರು ಬಿಟ್ಟ ಶಾಸನದಲ್ಲಿ ಅರ್ಧದಷ್ಟು ಶಾಸನಗಳು ಕನ್ನಡದಲ್ಲಿಯೇ ಇದ್ದು ಮತ್ತು ವಿಜಯನಗರ ಸಂಸ್ಥಾಪಕನಾದ ಹರಿಹರನ ಮಗಳನ್ನು ಹೊಯ್ಸಳ ಅರಸನ ಮಗನಾದ ಮೂರನೇ ಬಲ್ಲಾಳನ ಪುತ್ರ ಬಾಳಪ್ಪ ದಂಡನಾಯಕ ವಿವಾಹವಾಗಿರುವುದರಿಂದ, ಇತಿಹಾಸಕಾರರು ವಿಜಯನಗರ ಸ್ಥಾಪಕರು ಕರ್ನಾಟಕದವರೆಂದು ಅಬಿಪ್ರಾಯ ಪಡುತ್ತಾರೆ. ಇವರ ರಾಜಮುದ್ರೆ "ಶ್ರೀ ವಿರೂಪಾಕ್ಷ" ಎಂದಿದ್ದು, ಚಾಲುಕ್ಯರ ರಾಜ ಲಾಂಛನವಾದ "ವರಾಹ" ವಾಗಿತ್ತು ಮತ್ತು ಕರ್ನಾಟಕದ ಬೇಲೂರಿನ ಕೇಶವ ಹಾಗು ಹಂಪೆಯ ವಿರೂಪಾಕ್ಷ ದೇವರು ಸಂಗಮ ಸಹೊದರರ ಆರಾಧ್ಯ ದೇವರುಗಳಾಗಿದ್ದರು. ಇವರಲ್ಲಿ ಆಳಿಹೋದ ಅನೇಕ ಅರಸರ ಬಿರುದುಗಳೂ ಸಹ ಕನ್ನಡಮಯವಾಗಿದ್ದವೆಂದು ಹೇಳಲಾಗುತ್ತದೆ.

ವಿಜಯನಗರ ಸ್ಥಾಪನೆಗೆ ಪ್ರೇರಕರಾದವರು ವಿದ್ಯಾರಣ್ಯರು:  ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪ್ರೇರಣೆ ನೀಡಿದವರು ಸಂಗಮ ವಂಶದ ಮನೆತನದ ಗುರುಗಳಾದ ವಿದ್ಯಾರಣ್ಯರು ಹರಿಹರ, ಬುಕ್ಕರ ಆರಾಧ್ಯ ಗುರುಗಳು ಮತ್ತು ಮಾರ್ಗದರ್ಶಕರೂ ಆಗಿದರು. ಇವರು ಕ್ರಿ.ಶ. ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣಕರ್ತರಾದರು. ವಿದ್ಯಾರಣ್ಯರು ಹಂಪೆಯಲ್ಲಿ ಸಾರಂಗಪಾಣಿ ಮತ್ತು ಶೀದೇವಿ ಎಂಬುವವರ ಕುಟುಂಬದಲ್ಲಿ ಕ್ರಿ.ಶ. ೧೨೬೮ ರಲ್ಲಿ ಜನಿಸಿದರು. ಇವರು ಹಂಪೆ, ಕಂಚಿ, ಮತ್ತು ಶೃಂಗೇರಿಯಲ್ಲಿ ಶಿಕ್ಷಣವನ್ನು ಪಡೆದು ಅದ್ವೈತ ಸಿದ್ಧಾಂತ ಬೋಧಿಸುತ್ತ ಭಾರತದಾದ್ಯಂತ ಪ್ರವಾಸ ಮಾಡಿದರು. ಅನಂತರ ಹಂಪೆಯ ಶಂಕರಮಠದ ಅಧಿಪತಿಗಳೂ ಆಗಿದ್ದರು. ಆ ಸಮಯದಲ್ಲೇ ಹರಿಹರ ಮತ್ತು ಬುಕ್ಕರಾಯ ಸಹೋದರರಿಗೆ ಮಾರ್ಗದರ್ಶಕರಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದರು. ಒಟ್ಟಿನಲ್ಲಿ ವಿದ್ಯಾರಣ್ಯರು ಗುರುಗಳಾಗಿ, ವಿಧ್ವಾಂಸರಾಗಿ, ಮಾರ್ಗದರ್ಶಕರಾಗಿ ವಿಜಯನಗರ ಸ್ಥಾಪನೆಗೆ ಕೇಂದ್ರ ಬಿಂದುವಾಗಿದ್ದೂ ಅಲ್ಲದೆ ಸಂಗಮವಂಶದ ಆರಾಧ್ಯದೇವರಾಗಿದ್ದರು. ತಮ್ಮ ಜೀವನದುದ್ದಕ್ಕೂ ರಾಜ್ಯದ ಕಲ್ಯಾಣಕ್ಕಾಗಿ ನಾಡಿನ ಹಿತಕಾಯಲು ತಮ್ಮ ಮಾರ್ಗದರ್ಶನದಲ್ಲಿ ಹರಿಹರ ಮತ್ತು ಬುಕ್ಕರಾಯರನ್ನು ತಯಾರು ಮಾಡಿದ್ದಲ್ಲದೇ "ವಿಜಯನಗರ" ದಕ್ಷಿಣ ಭಾರತದವಲ್ಲದೇ, ದೇಶ-ವಿದೇಶಗಳಲ್ಲಿ ತಮ್ಮ ಬೆಳಕನ್ನು ಚೆಲ್ಲಿದರೆಂದು ಇಂದಿಗೂ ಇತಿಹಾಸದ ಪುಟಗಳು ಸಾರಿ ಹೇಳುತ್ತವೆ.

# ನಾ ಕಂಡ ಕನ್ನಡದ ಕನಸು ನನಸಾಗದಿರಲಿ!

## ಅಶೋಕ್ ಕಟ್ಟಿಮನಿ



೨೦೫೬ರ ನವೆಂಬರ್ ೧ ರಂದು ಕನ್ನಡ ರಾಜ್ಯೋತ್ಸವದ ದಿನ. ಕರ್ನಾಟಕ ರಾಜ್ಯ ಉದಯವಾಗಿ ಸರಿಯಾಗಿ ೧೦೦ ವರ್ಷ ಕಳೆದಿವೆ. ಹುಯಿಲಗೋಳ ನಾರಾಯಣ ರಾಯರ "ಉದಯವಾಗಲಿ ನಮ್ಮ ಕನ್ನಡ ನಾಡು" ನೆನ್ನೆ ಮೊನ್ನೆ ಕೇಳಿದಂತಿದೆ.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರೇ ಇಲ್ಲ! ಎಲ್ಲಿ ನೋಡಿದರೂ ತಮಿಳು, ತೆಲುಗು, ಮಲಯಾಳಂ, ಹಿಂದಿ, ಇಂಗ್ಲಿಷ್, ಅಲ್ಲಲ್ಲಿ ಕಂಗ್ಲಿಷ್ ತಮ್ಮ ಸ್ಥಾನಗಳಲ್ಲಿ ಮೆರೆಯುತ್ತಿದ್ದವು. ಜನರೆಲ್ಲಾ ಕನ್ನಡ ಲಿಪಿಯನ್ನು ಬಿಟ್ಟು ಬಹಳ ಕಾಲವಾಗಿತ್ತು.ಎಲ್ಲರೂ ಇಂಗ್ಲೀಷ್ ಅಕ್ಷರದಲ್ಲಿ ಕನ್ನಡ ಬರೆಯುತ್ತಿದ್ದರು. ಕನ್ನಡದ ಮಾತಿನಲ್ಲಿ ಶೇಖಡಾ ಎಂಭತ್ತರಷ್ಟು ಬೇರೆ ಬೇರೆ ಭಾಷೆಗಳು ಬೆರೆತಿದ್ದವು. ಹಳೆಯ ತಲೆಮಾರಿನ ಸಾಹಿತಿಗಳು, ಕತೆಗಾರರು, ಕವಿಗಳು ಸತ್ತು ಸ್ವರ್ಗ ಸೇರಿದ್ದರು. ಸರ್ಕಾರ ಕನ್ನಡದ ಶಾಲೆಗಳನ್ನು ಮುಚ್ಚಿದ್ದರಿಂದ ಮಕ್ಕಳಿಗೆ ಕನ್ನಡ ಕಲಿಯುವ ಅವಕಾಶವೇ ತಪ್ಪಿಹೋಗಿತ್ತು. ಗಂಡ ಹೆಂಡತಿ ಕೂಡಿಯೇ ದುಡಿಯುವ ಈ ಬಿಜಿ ದಿನಗಳಲ್ಲಿ ಯಾರಿಗೆ ಬೇಕು ಈ ಕನ್ನಡ ಕಾಯುವ ಶ್ರಮ. ಮಕ್ಕಳು ಪ್ರಾರಂಭದಲ್ಲಿ ಒಂದೆರೆಡು ಕನ್ನಡ ಶಬ್ಧ ಕಲಿತರೂ, ಶಾಲೆಗೆ ಬರುವಷ್ಟರಲ್ಲಿ ಮತ್ತಿತರ ಭಾಷೆಗಳು ಮತ್ತು ಇಂಗ್ಲೀಷ್ ಆ ಶಬ್ದಗಳನ್ನು ತಿಂದು ಬಿಡುತ್ತಿದ್ದವು. ಕನ್ನಡ ಕಲಿಸುವ ಇರಾದೆ ಯಾರಿಗೂ ಇರದಿದ್ದರಿಂದ, ಕನ್ನಡ ಮೇಷ್ಟ್ರುಗಳಿಗೆ, ಪ್ರಾಧ್ಯಾಪಕರಿಗೆ ಕೆಲಸವೇ ಇರಲಿಲ್ಲ. ಹೀಗಾಗಿ ಕನ್ನಡದ ಉನ್ನತ ಶಿಕ್ಷಣಕ್ಕೆ ಯಾವುದೇ ಅವಕಾಶವಿಲ್ಲದೆ ಅವುಗಳನ್ನೆಲ್ಲಾ ಮುಚ್ಚಿಯಾಗಿತ್ತು. ಕರ್ನಾಟಕದ ಆಡಳಿತ ಭಾಷೆಯಾದ ಕನ್ನಡ ಬರಿಯ ಕಡತಗಳಲ್ಲಿ ಉಳಿದಿತ್ತು. ತಮ್ಮ ಮಕ್ಕಳಿಗೆ ಉತ್ತಮ ಉದ್ಯೋಗ ದೊರಕಿಸಬೇಕೆಂಬ ಆಸೆಯಿಂದ ಪೋಷಕರು ಮಕ್ಕಳಿಗೆ ಇಂಗ್ಲೀಷ್ ಮಾತ್ರ ಕಲಿಯಲು ಪ್ರೋತ್ಸಾಹ ನೀಡುತ್ತಿದ್ದರು. ಕನ್ನಡದ ಯುವ ಜನತೆ ಕನ್ನಡ ಮರೆತು ಹಳೆಯ ಮಾತಾಗಿತ್ತು. ಕನ್ನಡ....ಸಂಸ್ಕೃತವಾಗಿತ್ತು......!!

ಅಂದು ೨೦೫೬ ನವೆಂಬರ್ ೧, ಕರ್ನಾಟಕದ ಹುಟ್ಟು ಹಬ್ಬ, ಕನ್ನಡ ರಾಜ್ಯೋತ್ಸವ ದಿನ !

ನೂತನ ಕರ್ನಾಟಕ ಮುಖ್ಯ ಮಂತ್ರಿಗಳಿಗೆ ಎಲ್ಲಾದರೂ ಶುದ್ಧ ಕನ್ನಡ ಮಾತನಾಡುವ ಯುವ ಕನ್ನಡಿಗರಿದ್ದಾರೆಯೇ ಎಂದು ತಿಳಿದುಕೊಳ್ಳುವ ಹಂಬಲ. ಅವರನ್ನು ಕಂಡುಹಿಡಿದು ಸತ್ಕರಿಸುವ ಅಭಿಮಾನ! ಆದರೆ ಅದರ ದೂರದೃಷ್ಟಿ ಮೈನಾರಿಟಿ ಕನ್ನಡಿಗರ ವೋಟ್ ಬ್ಯಾಂಕಿನ ಮೇಲೆ. ಅದಕ್ಕಾಗಿ ಪತ್ರಿಕಾ ಪ್ರಕಟಣೆ ಹೊರಡಿಸಿದರು. ಅಂತರ್ಜಾಲದಲ್ಲಿ ಹುಡುಕಾಟಕ್ಕಾಗಿ ಸುತ್ತೋಲೆ ಕಳುಹಿಸಿದರು.....ಟಿವಿ ಮಾಧ್ಯಮಗಳಲ್ಲಿ ಜಾಹೀರಾತುಗಳನ್ನು ಹೊರಡಿಸಿದರು. ಕೊನೆಗೆ ಒಂದೇ ಒಂದು ಅರ್ಜಿ ಬಂತು. ಅಚ್ಚ ಕನ್ನಡ ಮಾತನಾಡುವೆ ಎಂದು ಒಬ್ಬನೇ ಒಬ್ಬ ಯುವಕ ಆತ್ಮ ವಿಶ್ವಾಸದಿಂದ ಬರೆದುಕೊಂಡಿದ್ದ. ಆ ಯುವಕನ ಅರ್ಹತೆ ಪರಿಶೀಲಿಸಲು ಅಳಿದುಳಿದ ಕನ್ನಡ ಭಾಷಾ ಪಂಡಿತರನ್ನು ಕೇಳಿಕೊಳ್ಳಲಾಯಿತು. ಆ ಯುವಕ ಆಶ್ಚರ್ಯಕರ ರೀತಿಯಲ್ಲಿ ಎಲ್ಲಾ ಕನ್ನಡ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ, ಮೊದಲ ಸ್ಥಾನ ಪಡೆದ......ಎಲ್ಲರಿಗೂ ಅಚ್ಚರಿ!! ಪತ್ರಿಕೆಯವರು, ಟಿವಿ ಮಾಧ್ಯಮದವರು ಯುವಕನ ಸಂದರ್ಶನಕ್ಕೆ ದುಂಬಾಲು ಬಿದ್ದರು. ಎಲ್ಲರದೂ ಒಂದೇ ಪ್ರಶ್ನೆ....ಇದು ಹೇಗೆ ಸಾಧ್ಯ? ಸಾಯುತ್ತಿರುವ ಕನ್ನಡ ಭಾಷೆಯನ್ನು ಹೇಗೆ ಕಲಿತ? ಅದೂ ಹೀಗೆ ಶುದ್ಧ ಕನ್ನಡ ಮಾತನಾಡಲು ಸಾಧ್ಯವೇ! ಯುವಕ ಉತ್ತರಿಸಿದ. ""ನಾನು ಹುಟ್ಟಿದ್ದು ಅಮೇರಿಕಾದ ನ್ಯೂಜೆರ್ಸಿಯಲ್ಲಿ, ನನ್ನ ತಂದೆ ತಾಯಿ ಅಲ್ಲಿಯ ಬೃಂದಾವನ ಕನ್ನಡ ಕೂಟದ ಸದಸ್ಯರು......'ಕನ್ನಡ ಕಲಿ' ಶಾಲೆಯಲ್ಲಿ ನನ್ನ ಮೊದಲ ಕನ್ನಡ ಕಲಿಕೆ. ಅಲ್ಲಿ ಪ್ರಾರಂಭವಾದ ನನ್ನ ಕನ್ನಡ ಕಲಿಕೆ ನಿರಂತರವಾಗಿ ಮುಂದುವರಿಯುತ್ತಿದೆ." ಚಪ್ಪಾಳೆಯ ಮೇಲೆ ಚಪ್ಪಾಳೆ....ಪ್ರಶಂಸೆಗಳ ಸುರಿಮಳೆ....ಎಲ್ಲರೂ ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟವನ್ನು ಹೊಗಳುವವರೇ.......ದಿಗ್ಗನೇ ಎಚ್ಚರವಾಯಿತು. ಇಷ್ಟರವರೆಗೆ ನಡೆದದ್ದೆಲ್ಲಾ ಕನಸು......೨೦೫೬ರ ಕನ್ನಡದ ಸ್ಥಿತಿ ಒಂದು ಕನಸು ಎಂದು ತಿಳಿದ ಮೇಲೆ ಮನಸ್ಸು ಸ್ವಲ್ಪ ನಿರಾಳವಾಯಿತು. ಜೊತೆಗೆ ಈಗಿರುವ ಕನ್ನಡ ಪರಿಸ್ಥಿತಿಯಲ್ಲಿ....ಆ ಕನಸು ನಿಜವಾದ ಅಚ್ಚರಿಯೇನಿಲ್ಲ ಎನಿಸಿ ಭಯವೂ ಆಯಿತು.

ಕನ್ನಡ ಭಾಷೆ ನಿಜಕ್ಕೂ ಸಾಯುತ್ತಿದೆಯೇ? ಎಂಬ ಪ್ರಶ್ನೆ ಮನಸ್ಸನ್ನು ಕಾಡಿತು. ಅಂತರ್ಜಾಲದಲ್ಲಿ ಹುಡುಕಾಡಿ ಹಲವಾರು ಲೇಖನಗಳನ್ನು, ಸಂಶೋಧಕರ ಪ್ರಬಂಧಗಳನ್ನು ವಿಕಿಪೀಡಿಯಾದ ಲೇಖನಗಳನ್ನು ಓದಿದಾಗ ಕೆಲವು ಪ್ರಮುಖ ವಿಷಯಗಳು ಕಂಡುಬಂದವು.



ಜಗತ್ತಿನಲ್ಲಿ ಸುಮಾರು ೬೮೦೦(೧೯೯೯ ಪ್ರಕಾರ) ಪ್ರಚಲಿತ ಭಾಷೆಗಳಿವೆ. ಅವುಗಳಲ್ಲಿ ೯೬% ಭಾಷೆಗಳನ್ನು ಕೇವಲ ೪% ರಷ್ಟು ಜನ ಉಪಯೋಗಿಸುತ್ತಿದ್ದಾರೆ. ಸುಮಾರು ೫೦೦೦ ಭಾಷೆಗಳನ್ನು ಲಕ್ಷಕ್ಕೂ ಕಡಿಮೆ ಜನರು ಉಪಯೋಗಿಸುತ್ತಿದ್ದಾರೆ. ಸುಮಾರು ೫೧ ಭಾಷೆಗಳಿಗೆ ಮಾತನಾಡುವವರು ಒಬ್ಬರೋ ಇಬ್ಬರೋ ಇದ್ದಾರು. ಭಾಷೆಗಳು ನಿರಂತರವಾಗಿ ಅವಸಾನಗೊಳ್ಳುತ್ತಿವೆ ಇಲ್ಲಾ ರೂಪಾಂತರ ಹೊಂದುತ್ತಿವೆ. ಕೆಲವು ಭಾಷಾ ತಜ್ಞರ ಪ್ರಕಾರ ಸರಾಸರಿ ವಾರದಲ್ಲೋ ಎರೆಡುವಾರದಲ್ಲೋ ಒಂದಾದರೂ ಭಾಷೆ ಅವಸಾನಗೊಳ್ಳುತ್ತಿದೆ.
ಒಂದು ಅಧ್ಯಯನದ ಪ್ರಕಾರ ೨೦೫೬ರ ವೇಳೆಗೆ ೫೦೦೦ಕ್ಕೂ ಹೆಚ್ಚು ಭಾಷೆಗಳ ರೂಪಾಂತರ ಹೊಂದುತ್ತವೆ ಇಲ್ಲವೇ ಅವಸಾನಗೊಳ್ಳುತ್ತವೆ.

ವಿಕೆಪಿಡಿಯಾದಲ್ಲಿ 'extinct languages' ನ list ಕೇಳಿದಾಗ ೨೧ಕ್ಕೂ ಹೆಚ್ಚು ಭಾಷೆಗಳ list ಕಾಣಿಸಿತು. ಡೇವಿಡ್ ಕ್ರಿಸ್ಟಲ್ ಎಂಬ ಭಾಷಾ ತಜ್ಞ (ಹುಟ್ಟಿದ್ದು ೧೯೪೧, Northern Ireland, ಪ್ರಸ್ತುತ ವಾಸ Holy-head,ಯು ) ಬರೆದಿರುವ "how language works" ತಿಳಿಸಿರುವಂತೆ ಭಾಷೆಗಳ ಸಾವಿಗೆ ಮುಖ್ಯ ಕಾರಣಗಳು - ನೈಸರ್ಗಿಕ ವಿಕೋಪ, genocide(ಒಂದು ಜನಾಂಗದ ಹತ್ಯೆ) ಮತ್ತು ಸಂಸ್ಕೃತಿಗಳ ಸಂಕರಣದಿಂದ (culatural assassination).. ಕಳೆದ ೫೦೦ ವರ್ಷಗಳಲ್ಲಿ ಭಾಷೆಗಳು ಸಾಯಲು ಮುಖ್ಯ ಕಾರಣ cultural assassi-nation.

ಡೇವಿಡ್ ಕ್ರಿಸ್ಟಲ್, ಭಾಷೆಗಳ ಸಾವನ್ನು ಮೂರು ಘಟ್ಟಗಳೆಂದು ಗುರುತಿಸುತ್ತಾರೆ. ಮೊದಲ ಘಟ್ಟ-ಬೇರೆ ಭಾಷೆಗಳ ಲಗ್ಗೆ, ಅದಕ್ಕೆ ಮೂಲ -Economical,Social, Political, ಕಾರಣಗಳಿರಬಹುದು.ಕ್ರಿಸ್ಟಲ್ ಹೇಳುವ ಪ್ರಕಾರ ಡಾಮಿನೆಂಟ್ ಭಾಷೆಯನ್ನು ಜನತೆ ದುಂಬಾಲು ಬಿದ್ದು ಬಳಸಲು ಮುಖ್ಯ ಕಾರಣ ...ಉತ್ತಮ ಜೀವನ ಶೈಲಿ ಕೂಡಿಸಿಕೊಳ್ಳುವ ಆತುರ. ಎರೆಡನೆಯ ಘಟ್ಟ...ದ್ವಿಭಾಷಾ ಪರಿಸ್ಥಿತಿಯ ಬೆಳವಣಿಗೆ. ಹೀಗಾಗಿ ಈ ಹಂತದ ಜನ ಹಳೆಯ ಮತ್ತು ಹೊಸ ಭಾಷೆಗಳಿಗೆ ಕೊಂಡಿಯಾಗಿರುತ್ತಾರೆ. ಈ ಕೊಂಡಿಯ ಜನ ಹೊಸ ಮತ್ತು ಹಳೆಯ ಭಾಷೆಗಳ ಮಧ್ಯ ತೊಯ್ದಾಡುತ್ತಿರುತ್ತಾರೆ. ಮೂರನೆಯ ಘಟ್ಟ-ಹೊಸ ಜನಾಂಗ ಹೊಸ ಭಾಷೆಯನ್ನು ಉಪಯೋಗಿಸುತ್ತಾ ಹಳೆಯ ಭಾಷೆಯ ಉಪಯೋಗವನ್ನು ಬಹಳಷ್ಟು ಕಡಿಮೆ ಮಾಡುತ್ತಾರೆ. ಕ್ರಿಸ್ಟಲ್ ನ ಭಾಷೆಯಲ್ಲಿ ಹೇಳುವುದಾದರೆ,
"The third stage -This is often accompanied by a feeling of shame about us-ing the old language on the part of the parents as well as their childrenn. Those families that do continue to use the language find that there are fewer other families to talk to and their own usage becomes inward-looking and idio-synchratic resulting in family dialects. within a generation, healthy bilin-gualism within a family can slip into self-conscious semi lingualism and hence into monolingualism."

ಈ ಭಾಷಾ ಪಂಡಿತನ ಉಲ್ಲೇಖನವನ್ನು ಓದಿದಾಗ, ಕನ್ನಡ ಪರಿಸ್ಥಿತಿಯು ಖಂಡಿತವಾಗಿ ಎರೆಡನೆಯ ಘಟ್ಟದಿಂದ ಮೂರನೆಯ ಘಟ್ಟಕ್ಕೆ ದಾಪುಗಾಲಿಡುತ್ತಿರುವುದು ನಿಶ್ಚಯವಾಯಿತು. ನೂರಾರು ಅವಸಾನಗೊಂಡಿರುವ, ಮತ್ತು ಅವಸಾನದ ಹಂತದಲ್ಲಿರುವ ಭಾಷೆಗಳನ್ನು ಅಭ್ಯಸಿಸಿ ತನ್ನ ವಾದವನ್ನು ಮಂಡಿಸಿರುವ ಡೇವಿಡ್ ಕ್ರಿಸ್ಟಲ್ ನ ವಾದವನ್ನು ಬಹಳಷ್ಟು ಜನ ಒಪ್ಪುತ್ತಾರೆ. ಚಂದ್ರಶೇಖರ ಕಂಬಾರರು ಕೂಡಾ ಮೊನ್ನೆ ನ್ಯೂಜೆರ್ಸಿಯಲ್ಲಿ ಮಾತನಾಡಿದಾಗ ಕನ್ನಡ ಭಾಷೆಯ ಅವಸಾನದ ಬಗ್ಗೆ ವಿಷಾದ ವ್ಯಕ್ತ ಪಡಿಸಿದರು. ಮತ್ತೊಂದು ಸಂಶೋಧನೆಯ ಪ್ರಕಾರ ಜಗತ್ತಿನ ಅವಸಾನಗೊಳ್ಳುತ್ತಿರುವ ಭಾಷೆಗಳಲ್ಲಿ ಕನ್ನಡ ಭಾಷೆ ೨೬ನೇ ಸ್ಥಾನದಲ್ಲಿದೆ. ಮತ್ತೆ ಹಲವಾರು ಮಾಹಿತಿಗಳನ್ನು ತಡಕಾಡಿದಾಗ ದೊರಕಿದ ಅಂಕಿ ಸಂಖ್ಯೆಗಳ ಪ್ರಕಾರ ಕನ್ನಡ ಭಾಷೆ ಬಲ್ಲವರ ಸಂಖ್ಯೆ- ರಾಜಧಾನಿ ಬೆಂಗಳೂರಿನಲ್ಲಿ ೫೫% ಮತ್ತು ಬೆಂಗಳೂರಿಗೆ ಪ್ರತಿವರ್ಷ ಸುಮಾರು ಎರೆಡು ಲಕ್ಷದಷ್ಟು ಜನ ಹೊರ ರಾಜ್ಯಗಳಿಂದ ಬರುತ್ತಾರೆ.





ಬಹಳಷ್ಟು ಜನ ತಿಳಿದಿರುವಂತೆ ಕನ್ನಡದ ಬಳಕೆ ಜಿಲ್ಲಾವಾರು ಕ್ಷೇತ್ರಗಳಲ್ಲಿ ಕೂಡ ಬಹಳ ಹೆಚ್ಚಿಲ್ಲ. ರಾಯಚೂರು ಗುಲ್ಬರ್ಗ ೩೫%, ದಕ್ಷಿಣ ಕನ್ನಡ ೧೨%  ಬೆಳಗಾಂ ೫೪%.

ಈ ಎಲ್ಲಾ ಭಾಷಾ ತಜ್ಞರ ಸಂಶೋಧನೆ, ಅಂಕಿ ಅಂಶಗಳನ್ನು ತಿಳಿದಾಗ ಕನ್ನಡದ ಅವಸಾನ ಸುಳ್ಳೇ ಎಂದುಕೊಂಡು ಜಾಣ ಕಿವುಡರಾದರೆ ಉಪಯೋಗವೇ? ಕನ್ನಡಕ್ಕೆ ಸಾವಿಲ್ಲ ಎಂದು ವಾದಿಸುವವರು ಇತ್ತೀಚೆಗೆ ಹೆಚ್ಚಾಗಿರುವ ಕನ್ನಡ ಪತ್ರಿಕೆಗಳ, ಪುಸ್ತಕಗಳ, ಟಿವಿ ಚಾನಲ್ ಗಳ ಉದಾಹರಣೆ ಕೊಡುತ್ತಾರೆ. ಸಾಕಷ್ಟು ಕನ್ನಡ ಬ್ಲಾಗ್ ಗಳು ಬಂದಿವೆ ಎಂದು ವಾದಿಸುತ್ತಾರೆ. ಇದನ್ನು ಕೇಳಿದಾಗೆಲ್ಲಾ ಆ ವಾದ ನಿಜವೇನೋ ಅನಿಸುತ್ತದೆ. ಆದರೆ ಇತ್ತೀಚೆಗೆ ಕನ್ನಡ ಮಾಧ್ಯಮದ ಬಳಕೆ ಹೆಚ್ಚಾಗಲು ಮುಖ್ಯ ಕಾರಣ 'ಎರೆಡನೆಯ ಘಟ್ಟದ ಕೊಂಡಿಯ'ಜನ ಅವರ buying power ಹೆಚ್ಚಾಗಿರುವ ಕಾರಣ. ಆದರೆ ಇಂದಿನ ಮಕ್ಕಳು ಕನ್ನಡ ಕಲಿಯುವ, ಬರೆಯುವ ಸಂಖ್ಯೆ ಕಡಿಮೆಯಾಗುತ್ತಿರುವುದು ನಮ್ಮ ಸುತ್ತ ಮುತ್ತ ಮಕ್ಕಳನ್ನು ನೋಡಿದರೆ ಗುರುತಿಸಬಹುದಲ್ಲವೇ?  ಇಂದಿನ ಈ ಪರಿಸ್ಥಿತಿಯಲ್ಲಿ ನಾವೆಲ್ಲರೂ ಹಿಂದಿನ ಮತ್ತು ಮುಂದಿನ ಜನಾಂಗದ ಕೊಂಡಿಯಾಗಿದ್ದೇವೆ. ನಾವೇನು ಮಾಡಬಹುದು ಎಂದು ಒಂದು ಕ್ಷಣ ಗಂಭೀರವಾಗಿ ಯೋಚಿಸಬೇಕಾಗಿದೆ. ಕನ್ನಡ ಭಾಷೆಯ ಪೂರ್ತಿ ಅವಸಾನವನ್ನು ತಡೆಯಲು ಮುಂದಾಗಲು ಸಾಕಷ್ಟು ಅವಕಾಶಗಳಿವೆ. ನನ್ನ ಅನಿಸಿಕೆಯಂತೆ ಐದು ಸೂತ್ರಗಳ ಆಣೆಯೊಂದಕ್ಕೆ ನಾವು ಬದ್ದರಾದರೆ, ಕನ್ನಡ ಉಳಿಸಲು ಕಿಂಚಿತ್ತಾದರೂ ಸಹಾಯವಾದೀತು. ಈ ಕನ್ನಡದ ಮೇಲಾಣೆ ಹಾಕೋಣವೇ?

ಕನ್ನಡದ ಮೇಲಾಣೆ:

೧.ನಾವಿಬ್ಬರು ಕನ್ನಡಿಗರು ಸೇರಿದಾಗ ಕನ್ನಡದಲ್ಲೇ ಮಾತನಾಡೋಣ. ಹೆಚ್ಚು ಹೆಚ್ಚು ಕನ್ನಡ ಪದಗಳನ್ನು ಉಪಯೋಗಿಸೋಣ.

೨.ಒಂದಾದರೂ ಕನ್ನಡ ಪತ್ರಿಕೆಯನ್ನು ಓದೋಣ. ತಿಂಗಳಿಗೊಂದಾದರೂ ಕನ್ನಡ ಕತೆ ಕಾದಂಬರಿಗಳನ್ನು ಓದೋಣ.

೩.ನಮ್ಮ ಮಕ್ಕಳಿಗೆ ಖಂಡಿತವಾಗಿ ಕನ್ನಡದಲ್ಲಿ ಮಾತನಾಡಿಸೋಣ. ಕಡ್ಡಾಯವಾಗಿ  ಕನ್ನಡ ಲಿಪಿಯನ್ನು ಕಲಿಸೋಣ.

೪.ಕನ್ನಡ ಪುಸ್ತಕಗಳನ್ನು ಕಡ್ಡಾಯವಾಗಿ ಖರೀದಿಸೋಣ. ಎರೆಡು ತಿಂಗಳಿಗೊಂದಾದರೂ ಕನ್ನಡ ಚಿತ್ರಗಳನ್ನು ನೋಡೋಣ.

೫.ಕನ್ನಡ ಸಭೆ ಸಮಾರಂಭಗಳಿಗೆ ತಪ್ಪದೇ ಹೋಗೋಣ.

ನಾವೆಲ್ಲಾ ಸೇರಿ ಕನ್ನಡದ ಮೇಲೆ ಈ ಆಣೆ ಮಾಡಿದರೆ, ಮಾಡಿದಂತೆ ನಡೆದರೆ ನಾನು ಈ ಮೊದಲು ಕಂಡ ೨೦೫೬ರ ಕನಸು ನನಸಾದೀತೇ?

ಬೃಂದಾವನದ ಕನ್ನಡ ಕೂಟದ ಯುವಕ ನಮಗೆಲ್ಲಾ ಮಾದರಿಯಾಗಿರಬಹುದೇ?

[ ಈ ಲೇಖನದಲ್ಲಿ ದಾಖಲಿಸಿರುವ ಎಲ್ಲಾ ವಾದ ಮತ್ತು ಅಂಕಿ ಸಂಖ್ಯೆಗಳನ್ನು ಅಂತರ್ಜಾಲದ ಹಲವಾರು ತಾಣಗಳಿಂದ ಆರಿಸಲಾಗಿದೆ]





# ಕವನಗಳು

## ಲತಾ ಮುದರಾಜ್ (ಬೆಂಗಳೂರು)

### ವರದಕ್ಷಿಣೆ

ಗಗನಕ್ಕೆ ಏರಿತಲ್ಲ ವರದಕ್ಷಿಣೆಯ ಕಾಟ
ಹೆಣ್ಣುಮಕ್ಕಳನ್ನು ಹೆತ್ತವರಿಗೆ ಭೀಕರದ ಕನಸಿನ ನೋಟ.
ರಸ್ತೆಬದಿಯ ಅಂಗಡಿಗಳಲ್ಲಿ ಮಾರುವ ಮಾರಾಟ!
ಯಾರಿಗೆ ಬೇಕು ಹೆಣ್ಣಿನ ಅಂದ ಚಂದ
ವರದಕ್ಷಿಣೆ ಇತ್ತರೆ ಸಾಕು ಇದೆಲ್ಲ ದಂಡ.
ಗುಣವೇಕೆ ಬಣ್ಣವೇಕೆ ಬರಿಮಾತು ಇನ್ನೇಕೆ.
ವರದಕ್ಷಿಣೆ ಕೊಟ್ಟರೆ ಸಾಕು
ಹೆಣ್ಣು ಊರ್ವಶಿಯ ಹಾಗೆ.
ಹಣ ಕೊಟ್ಟು ಮಗಳನ್ನು ಬೀಳ್ಕೊಡುವ
ತಂದೆ ತಾಯಿಯರ ದುಃಖವನ್ನು
ಏನೆಂದು ಬಣ್ಣಿಸಲಿ ನಾನು ನಿಮಗಿನ್ನು?

### ಮಗು

ಮುಗ್ಧ ಮನವುಳ್ಳ ಸುಂದರ
ಸಿಹಿ ಕಹಿ ಅರಿಯದಿರುವ ಬಂಗಾರ ।
ತಿಳಿ ಹಾಲಿನ ಹಾಗೆ ಇವನ ಮನಸ್ಸು
ತಾಯಿ ತಂದೆ ಎಂಬುದೇ ಅರಿಯದು
ಇವನ ವಯಸ್ಸು।
ಬೇಧ ಭಾವಗಳಿಲ್ಲದ ಇವನ ತನು ಮನ
ಪರಮಾತ್ಮನ ಸಮಾನ।

### ಪ್ರಕೃತಿ

ಓ ನನ್ನ ಪ್ರಕೃತಿ
ಎಷ್ಟು ಚಂದ ನಿನ್ನ ಆಕೃತಿ
ಪಂಚ ಭೂತಗಳನ್ನು ನಿನ್ನಲ್ಲಿ ಅಡಗಿರುವ
ಪ್ರಪಂಚಕ್ಕೆ ಪವಿತ್ರತೆಯನ್ನು ನೀಡಿರುವೆ!
ಹಚ್ಚ ಹಸುರಿನ ಸೀರಿ ಉಟ್ಟಿರುವೆ
ಪರ್ವತ ಶ್ರೇಣಿಗಳ ಮಾಲೆಯನು
ಧರಿಸಿರುವೆ.
ಸೂರ್ಯ ಕಿರಣಗಳಿಂದ ಕಾಂತಿಯನು
ತುಂಬಿರುವೆ.
ತಂಪಾದ ನೆರಳಿಂದ ಭುವಿಯನು ನಿದ್ರಿಸುವೆ.
ಈ ಕವಿಯ ಮನವನ್ನು ಸೆಳೆದು
ಕವಿತೆಯಾಗಿ ಹೊರಬಂದಿರುವೆ.

### ಸಮಯ

ಯಾರಿಗುಂಟು ಸಮಯ ಈ
ಸಮಯವಿಲ್ಲದ ಪ್ರಪಂಚದಲ್ಲಿ
ಇದನರಿತು ನೀ ಬಾಳು ಓ ಗೆಳೆಯ
ಈ ಪಜೀತಿಯಲ್ಲಿ।
ಸಮಯವಿಲ್ಲ ಶಾಲೆಯ ಮಕ್ಕಳಿಗೆ ಉಣ್ಣುವುದಕ್ಕೆ
ಸಮಯವಿಲ್ಲ ಈ ಕಾಲೇಜಿನ ಹುಡುಗರಿಗೆ ಬೀದಿ ಬೀದಿ
ಅಲೆಯುವುದಕ್ಕೆ।
ತಂದೆ ತಾಯಿಯರಿಗೆ ಸಮಯವಿಲ್ಲ
ಸಂಸಾರ ಸಾಗಿಸುವುದಕ್ಕೆ
ತಾತ ಅಜ್ಜಿಯರಿಗೆ ಸಮಯವಿಲ್ಲ
ಪುರಾಣ ಪುಸ್ತಕ ಓದುವುದಕ್ಕೆ।
ಈ ಸಮಯವೆಂಬ ಗಡಿಯಾರ ನಿಲ್ಲುವುದಿಲ್ಲ
ನಮ್ಮೆಲ್ಲರ ಅನುಕೂಲಕ್ಕೆ
ಇನ್ನೆಲ್ಲಿದೆ ಸಮಯ ಓ ಗೆಳೆಯ
ಹಿಂದಿರುಗಿ ನೋಡುವುದಕ್ಕೆ।





# The Senior Black Belt Quest



## Susmitha Shailesh

Two summers ago, I received my 1st degree black belt in Tae Kwon Do. After that, I continued training, and last summer, I tested for a 1st degree senior black belt. I'd been training in Tae Kwon Do for four years. It had been a lot of fun and exercising. At times, it had been tiring, but it improved my stamina. I made lots of friends at my Tae Kwon Do School, and five of them were testing with me for their black belts.

You could imagine my excitement and nervousness the day of the test. I knew it would be at least 5 hours long, maybe more. I had trained for it for four years, and in the weeks before, my instructor and I had gone over all the necessary techniques. There were five judges who would be assessing whether we deserved black belts or not. We all knew what to do, how to do it and we'd trained for years for this moment. We knew it all came down to this. Our hearts were pounding with excitement, and our heads bursting with kicks, punches, verbal quizzes, forms and other techniques as we sat on the mat of our school, waiting for the test to begin.

Finally, when the instructor and judges were ready, they called on us to line up. They all wished us luck, and we were on our way. The test began with exercises: 50 pushups, 100 jumping-jacks, 50 sit-ups, and 50 burpies. While we did the sit-ups, assistant instructors hit us in the stomach with punching pads. I breezed through them, aiming to impress the judges. Throughout the test, we did these exercises several more times. They started getting tougher and tougher to do. When I started, I finished in 5 minutes, but near the end, it took 20.

We must have done almost 50 different kicks and 100 punches, strikes, all the forms and quizzes. The instructor told us that we need to show them we were tough, and we weren't doing that yet. I started doing my techniques with more force. I pounded through them, making them as powerful as possible. I wanted more than anything to show the judges that I was black-belt material. I was growing sleepy, but I shook it off and continued, keeping in mind that we still had around 2-3 hours left. After that, many of us were panting for air. But the fun didn't stop there. See, the instructor's goal is to make us give up. What happens if we do? We don't get our black belts. You could imagine my joy when we finally got a half hour water break.

We then sparred with the assistant instructors. Sparring is a sport where we wear protective gear and fight each other. We're allowed to kick anywhere with padding, which included the head. By this time, I was absolutely exhausted. I savored the small moments I had to stand there and calm my heartbeat. Another requirement was to break boards. They were an inch thick, and we had to do various kicks and punches. I'd broken many before, and the adrenaline rushed through me. I broke all but one on my first try. It seemed to come easily.

My favorite part of the test was when I had to go in front of the judges by myself. By then, I was confident I had proved myself worthy of a senior black belt. They asked me to do burpies, and I threw them a look because I thought it was unfair that no one else had to do them. They all laughed and told me to tell a black-belt worthy joke to prove my attitude. I thought for a minute and asked, "Why did the mushroom go to the party?" "Why?" they asked. "Because he was a fungi (fun guy)!" I said. Everybody watching laughed. I smiled too. After 8 hours of vigorous action, we were finally lined up in our starting positions. Our instructor put certificates in front of us. We were glowing with pride. Our smiles lit up the entire room, and happiness radiated through everybody. One by one, he called us up to get our black belts. We were each told how wonderful we did. "You've got real girl power!" one of the judges told me. "You're the only one who cruised through the test. The others got tired but you had that strong energy the entire time." I have never felt so good about myself.



# A Morning with Kiran Bedi
## Ananya Kattimani



People may call themselves lucky for winning a lottery or carrying an umbrella on an unexpected rainy morning. I consider myself luckiest to have met someone; someone really special; someone that has impacted hundreds of thousands of lives including myself and most possibly you.

It was a usual Sunday morning. I had glanced at my watch four times before actually reading the time. I got out of bed and walked down the hall to ask for the day's plan since it was summer and I wanted to do something special and have fun.

"We will be going to the Art of Living Center today. There, we are going to watch a documentary style movie of a special lady whom you will also get to meet later," my dad had said, smiling excitedly. I was not only delighted but also curious as to who I was about to meet. This was surely not going to be any usual Sunday morning. We searched for a while before finding the right building. My dad, my sister, and I finally spotted the lavender colored building and quickly hurried inside.

After settling ourselves into comfortable back resting seats we started watching...

As the first woman IPS officer she had gone through a lot. We watched how she had transformed the biggest, dirtiest jail in India, Tihar Jail, into an ashram. One of her social works included an organization for drugs and narcotics prevention. Most of all, we watched and appreciated how she had been the best at whatever she did. She was the best mother to her child, the best wife to her husband, the best daughter to her parents, the best tennis player, and of course the best and the most significant police officer.

My dad had been correct. This person was special indeed. Kiran Bedi was an inspiring woman with towering amounts of courage, determination and selflessness. Hold your breath yet, the second part of this event was yet to happen: the meeting her part. The movie ended and Kiran Bedi walked down the beige carpeted aisle as our heads turned back. It felt as though she had walked right out of the movie screen. Almost like a 3D movie but this was different, this was real and definitely better. Every word she said during the Question and Answer session inspired me. It inspired me and left me thinking about what I could do for my community.

I will always remember this day: This day when I learnt that you should not give up; you should believe in yourself; you should go against the odds, and lastly you should make a difference.





# ಕಲೆಯ ಚಿತ್ರ
# ಕೊಡ ನೆನಪು













**BOD-BOT Meeting, Feb 12, 2001**



**Vasantotsava 2011**



**Picnic 2011**




**India Day Parade**




**Ganeshotsava 2011**



**Annual Day 2011**



**Swara Saneevini 2012**



**Dasotsava 2012**



**Vasantotsava 2012**



**Picnic 2012**




**AKKA 2012**



**Yakshagana 2012**




New Jersey
ಕಟ್ಟೆ BOYS




**ಕಟ್ಟೆ Boys!**







## Youth Committee

ನಿಮ್ಮ ಶುಭ ಹಾರೈಕೆ

ನಮ್ಮ ಯಶಸ್ಸಿಗೆ ಕಾರಣ...

Our Best Wishes To Brindavana



Pavan, Hema, Ben Kantharaju

# Our Best Wishes To Brindavana



Sadhana, Shankar Setty

# Our Best Wishes To Brindavana



Malini, PooJA, Anand, akshay

# With Best Wishes to Brindavana



**Smitha, Chaitanya, Prerana, Santosh Kumar**

With Best Wishes to Brindavana



Raju Prasad, Geetha Prasad, M.G. Prasad and Teju Prasad

# With Best Wishes to Brindavana



## Sandhya, Anagha, Adithi, Mallik Prasad

Best Wishes to KCO Brindavana

**FROM "SANTRUPTHI" FAMILY**



ಬೃಂದಾವನಕೆ ಇಂದಿಗೆ ಆಯಿತು ಎಂಟು

ಬೆಳೆಯಿತು ಪ್ರೀತಿ ವಿಶ್ವಾಸದ ಗಂಟು

ಇರಲಿ ನಮ್ಮನಿಮ್ಮಲ್ಲಿ ಇದೇರೀತಿಯ ನಂಟು

ಸವಿಯೋಣವದನು ತಿನ್ನುತ ಸಿಹಿ ಕರಿದಂಟು

೯ನೆ ವರ್ಷಕ್ಕೆ ಕಾಲಿಡಿತ್ತಿರುವ ಬೃಂದಾವನಕೆ

"ಸಂತೃಪ್ತಿ" ನಿವಾಸಿಗಳಿಂದ ಶುಭ ಹಾರೈಕೆ

ಪ್ರಸನ್ನ,  ಸುಹಾಸ್, ಉಷಾ  ಹಾಗು ಸ್ನೇಹ ಕುಮಾರ್

# With Best Wishes to Brindavana



Ria Murthy, Hemanth Satyamurthy , Padmini Hemanth, Sachin Murthy

With Best Wishes to Brindavana



Ravi, Sapna, Akanksha

With Best Wishes to Brindavana



Hema, Ganesh, Mayur, Vivek

With Best Wishes to Brindavana



Madhu, Gouri, Kartik, Subhashini

# With Best Wishes to Brindavana



## Basavaraju, Amulya, Ramya

With Best Wishes to Brindavana



Ritvik, Anil, Suman


# With Best Wishes to Brindavana





Vijay, Seema, Vedrath, Samhita

# With Best Wishes to Brindavana



## Raju, Suneeta, Akash

## With Best Wishes to Brindavana



Amulya, Aditya, Vanamala, Ananya, Ashok Kattimani

With Best Wishes to Brindavana



Ramesh Manjegowda, Shridevi, Kushi and Sakshi

With Best Wishes to
Brindavana



Sri Sai Gowda, Archana,
Anya, Arnav



# ಚಿಣ್ಣರ ಬಳಗ…
# …ಇದು ನಮ್ಮ ಜಾಗ





# ಪುಟಾಣಿ ಪ್ರಪಂಚ

ಇಂಚರ ಹೊಸನಗರ

೬ ವರ್ಷ









# ಪುಟಾಣಿ ಪ್ರಪಂಚ

ಅಮೂಲ್ಯ ಬಿ. ಗೌಡ
೫ ವರ್ಷ







The Gingerbread Man
Hi!
by Aakanksha Lambi







One day I was making a gingerbread man with my friend. She did black hair. I did the buttons. Then we did the shirt together. Then I put it in the oven. After 20 seconds the Gingerbread man popped out. He went out the door. I went chasing him. He was super fast!

The gingerbread man came to a fox. He said to the fox "Run. Run as fast as you can, you can't catch me, I'm the gingerbread man." He ran so fast, we were so tired. The gingerbread man bumped into a bear. The bear asked, "Where are you going?" The gingerbread man said "I am running away from two girls and a fox and I can run away from you too.



Then the gingerbread man came to a dragon. The dragon said "There is a mud pile. The people will catch up to you. So he carried the gingerbread man.

Then the dragon gobbled him up. But, the gingerbread man came out and sang "Run Run as fast as you can, you can't catch me I'm the ginger-bread man. The gingerbread man was not looking when he fell into the ocean. A whale ate him and that was the end of the gingerbread man.

# ಪುಟಾಣಿ ಪ್ರಪಂಚ

ಆಕಾಂಕ್ಷ ಲಂಬಿ
ಆ ವರ್ಷ





## Save Water

Water is one of our Natural Resources. We can save water in very smaller way, in our day to day life. Here I showed some of the ways to save water.

1) Turn off the water while brushing your teeth.

2) Wash only full loads of clothing and adjust the water level to the correct setting for the size of the load.

3) Wash vegetables and fruits in a water filled vessels, rather than under running water. Keep a jug of chilled water in the refrigerator for drinking to avoid running the water until it gets cold.

4) Position your sprinklers so water lands on the lawn or garden, not on paved areas.


5) Do not water the plants between 11 AM TO 4 PM.

6) Use water recycling fountain.

—Chaitanya Santosh









## ಪುಟಾಣಿ ಪ್ರಪಂಚ

ಚೈತನ್ಯ
೮ ವರ್ಷ









NAMMOORU: Life in the village is simple. Many people depend on the village farmers for foods like rice, tea, sugar, wheat and milk. Most villagers, own farm animals like chicken, goats and cows. Though this may seem funny to you, owning a farm animal makes a meaningful difference in their lives. In the village, women keep the household running smoothly, men do the farm work, and children go to school just like you. Life in the village has it’s own natural beauty.



ಶ್ರೇಯಾ ಹರಿಗೌಡ

೧೧ ವರ್ಷ



With Best Wishes
to Brindavana

# Udipi Cafe

Catering for all occasions
South Indian Restaurant
3029 Route 27 South
Franklin Park
New Jersey
Vasanth Rao - 732-422-8301
www.udipicafe.com



Jain & Swaminarayan food requests accommodated
Orthodox Kosher supervision
On-site Dosa cooking is our specialty
Large dining area for up to 120 people
Private party room (up to 50 people)
Free ample parking · BYO
for a truly vegetarian experience
Mysore WOODLANDS
dine in · take-out · catering
ALL MAJOR CREDIT CARDS ACCEPTED
296 Route 46 West · Parsippany
973-227-8191
Open 7 Days: Lunch Buffet 11:30am-3:00pm
A-La-Carte Dinner Mon-Thurs 5:30pm-10:00pm
Fri-Sun 5:30pm-10:30pm
www.njwoodlands.com
Special Tuesday & Friday Dinner
CHAT & DOSA NIGHT
20 Course Buffet
Only $11.95
$25 value
$2 off any purchase of $10 or more
Mysore Woodlands
296 Route 46 West · Parsippany · 973-227-8191
With this coupon. Not valid with other offers. Offer expires 9-16-10.
$10 off any purchase of $50 or more
Mysore Woodlands
296 Route 46 West · Parsippany · 973-227-8191
With this coupon. Not valid with other offers. Offer expires 9-16-10.
10% off parties of 6 or more
Mysore Woodlands
296 Route 46 West · Parsippany · 973-227-8191
With this coupon. Not valid with other offers. Offer expires 9-16-10.

# Changing Jobs? Want better control over your finances? Rolling over a 401(k)?

# We can help.

## Products and Services:

- Life Insurance
- 529 Plans
- Annuities
- Health Insurance



**Ashwin Sanakal**
*Financial Consultant*
ashwinikumar.sanakal@axa-advisors.com
Tel: (516) 358-3751 / Cell (516) 647-8827

AXA Advisors, LLC
1000 Woodbury Road
Suite 300
Woodbury, NY 11797

www.axa-equitable.com

Securities and investment advisory services offered through AXA Advisors, LLC (NY, NY 212-314-4600), member FINRA, SIPC. Annuity and insurance products offered through AXA Network, LLC and its insurance agency subsidiaries. AXA Network, LLC does business in California as AXA Network Insurance Agency of California, LLC and in Utah as AXA Network Insurance Agency of Utah, LLC. AXA Advisors and its affiliates do not provide tax or legal advice. AGE-62611 (5/11)

AXA ADVISORS
redefining / standards